# <u>ಕಿರಿಯ ಪ್ರವಾದಿಗಳು</u>

ಪ್ರಾರ್ಥನೆ ಸಮಯದ ಪುಸ್ತಕ

ಭಾರತೀಯ ಕ್ರೈಸ್ತ ಸಭೆ

**ಕಿರಿಯ ಪ್ರವಾದಿಗಳು : ಚಾರಿತ್ರಿಕ ಹಿನ್ನೆಲೆ**

ಹಳೆಯ ಒಡಂಬಡಿಕೆಯ ಪ್ರವಾದಿಗಳು ನಿಸ್ಸಂದೇಹವಾಗಿ ದೇವರ ಪ್ರತಿನಿದಿಗಳಾಗಿದ್ದರು.

ಹಳೆಯ ಒಡಂಬಡಿಕೆಯ ಬಹುಭಾಗವು ಪ್ರವಾದಿಗಳೆಂದು ನಮ್ಮಿಂದ ಕರೆಯಲ್ಪಡುವ ಮನುಷ್ಯರಿಂದ ಬರೆಯಲ್ಪಟ್ಟಿದೆ ದೊಡ್ಡ ಪುಸ್ತಕಕ್ಕೆ ಹಿರಿಯ ಪ್ರವಾದಿಗಳು, ಸ್ವಲ್ಪ ಚಿಕ್ಕ ಪುಸ್ತಕಕ್ಕೆ ಕಿರಿಯ ಪ್ರವಾದಿಗಳೆಂದೂ ಕರೆಯುತ್ತಾರೆ.

ಹಿಬ್ರಿಯ ಭಾಷೆಯಲ್ಲಿ 'ಪ್ರವಾದಿ' ಎಂಬ ಪದಕ್ಕೆ ಈ ಮೂರು ಅರ್ಥಗಳಿದ್ದವು :

• **ರೂಹು** : 11 ಸಾರಿ ಉಪಯೋಗಿಸಲಾಗಿದೆ. ಅರ್ಥ "ನೋಡುವುದು ಅಂದರೆ ದಿವ್ಯದೃಷ್ಟಿಯುಳ್ಳವನು.

• **ಕೋಜೆ**: 22 ಸಾರಿ ಉಪಯೋಗಿಸಲಾಗಿದೆ. ದೇವರಿಂದ ದೂರದೃಷ್ಟಿಪಡೆದ ಮನುಷ್ಯ.

• **ನಾಬಿ** : 300ಕ್ಕಿಂತ ಹೆಚ್ಚು ಸಾರಿ ಉಪಯೋಗಿಸಲಾಗಿದೆ. ಅಂದರೆ ದೇವರ ಪರವಾಗಿ ಮಾತನಾಡುವವನು ಅಥವಾ ದೇವರ ಸಂಗತಿಗಳನ್ನು ಸಾರುವವನು.

ದೇವರ ವಾರ್ತೆಯನ್ನು ಜನರಿಗೆ ಹೇಳುವವನು (ಅಥವಾ ಬರೆಯುವವನು) ಪ್ರವಾದಿಯೆನಿಸಿಕೊಳ್ಳುತ್ತಿದ್ದನು. ಅವರು ದೇವರಮನುಷ್ಯರೆಂದು ಕರೆಯಲ್ಪಡುತ್ತಿದ್ದರು. ಅವರು ಅವರ ಸ್ವಂತ ಜನರಿಗೆ ಬೋಧಿಸುತ್ತಿದ್ದರು. ಮುಖ್ಯವಾಗಿ ಪಾಪವನ್ನು ತ್ಯಜಿಸುವುದರ ಬಗ್ಗೆ ಮಾತನಾಡುತ್ತಿದ್ದರು.

ಕೆಲಸಮಯದಲ್ಲಿ ಅವರ ಸಂದೇಶ, ಬರಲಿರುವ ರಕ್ಷಕನ ಬಗ್ಗೆ ಕೆಲವು ಭವಿಷ್ಯ ನುಡಿಗಳಾಗಿದ್ದವು.

ಕೆಲಸಮಯದಲ್ಲಿ ಅವರ ಸಂದೇಶ ಸನ್ನೆಗಳ ಮೂಲಕ ಬರುತ್ತಿತ್ತು.

ಕಿರಿಯ ಪ್ರವಾದಿಗಳು ಬರೆಯಲ್ಪಡುವ ಸಮಯದಲ್ಲಿ ಇಸ್ರಾಯೇಲ್ಯರ ಇತಿಹಾಸವು ಈಗಾಗಲೇ ಕೆಲವು ಒಳ್ಳೆಯ ಸಮಯದಲ್ಲಿ ಮತ್ತು ಕೆಲವು ಕೆಟ್ಟದಾದ ಸಮಯಗಳನ್ನು ದಾಟಿ ಬಂದಿದ್ದರು.

ಇಸ್ರಾಯೇಲ್ಯರು ವಾಗ್ದಾನಮಾಡಲ್ಪಟ್ಟ ದೇಶಕ್ಕೆ ಬಂದನಂತರ, ಆ ದೇಶವನ್ನು ಎಲ್ಲಾ ಗೋತ್ರದವರ ಮಧ್ಯೆ ಹಂಚಿದರು, ನಂತರ ಸುಮಾರು 400 ವರ್ಷ ನ್ಯಾಯಸ್ಥಾಪಕರು ಇಸ್ರಾಯೇಲ್ಯರನ್ನು ಆಳಿದರು.

ಇದಾದ ನಂತರ, ಸೌಲ, ದಾವಿದ ಮತ್ತು ಸೋಲೊಮೋನ್ ರಾಜರು 120 ವರ್ಷ ರಾಜ್ಯವಾಳಿದರು (ಅಂದರೆ ಒಬ್ಬೊಬ್ಬರು 40 ವರ್ಷ).

ಸೊಲೊಮೋನ್ ರಾಜನು ಸತ್ತನಂತರ, ಅವನ ರಾಜ್ಯ ಇಬ್ಭಾಗವಾಯಿತು. ಈ ಸಮಯದಲ್ಲೇ ಕಿರಿಯ ಪ್ರವಾದಿಗಳು ಬರೆದರು, ಈ ಸಮಯ ಸರಿಸುಮಾರು 90 ಕ್ರಿ.ಪೂ - 400 ಕ್ರಿ.ಪೂ. ವಾಗಿತ್ತು.

ಈ ಸಮಯದಲ್ಲಿ ಇಸ್ರಾಯೇಲ್ (ಉತ್ತರ) ಮತ್ತು ಯೂಧ (ದಕ್ಷಿಣ) ಪ್ರದೇಶಗಳು ರಾಜಕೀಯ ಅಸ್ಥಿರತೆ ಮತ್ತು ಜನಾಂಗದ ಅಪಕೀರ್ತಿಗೆ ಒಳಗಾದರು. ಒಬ್ಬೊಬ್ಬ ಕಿರಿಯ ಪ್ರವಾದಿಯೂ, ಅವರ ಸಮಯದಲ್ಲಿ ಜನರಿಗೆ ಉಂಟಾದ ಸಂಕಷ್ಟಗಳನ್ನು ಕುರಿತು ಮಾತನಾಡುತ್ತಿದ್ದರು.

------------------------------------------------------------------

## ಆ ಸಮಯದಲ್ಲಿದ್ದ ಇತರ ಚಾರಿತ್ರಿಕ ದೇಶಗಳು

**1) ಈಜಿಪ್ಟ್ ದೇಶ :**

ಯೂದರ ದೇಶವಾಗಿ ಇಸ್ರಾಯೇಲ್ ಸ್ಥಾಪನೆಗೊಳ್ಳುವ ಸಮಯದಲ್ಲಿ (ಅಂದರೆ ಕ್ರಿ.ಪೂ. 1500) ಐಗುಪ್ತ ದೇಶ ಇಡೀ ಪ್ರಪಂಚದಲ್ಲಿ ಬಹು ಬಲಿಷ್ಟವಾಗಿತ್ತು ಮತ್ತು ನೂರಾರು ವರ್ಷ ಹಾಗೆಯೇ ಬಲಿಷ್ಠವಾಗಿ ನಿಂತ್ತಿತ್ತು.

**2) ಅಸ್ಸೀರಿಯ :**

ಇಸ್ರಾಯೇಲ್ ದೇಶ ಇಬ್ಭಾಗವಾಗುವ ಸಮಯದಲ್ಲಿ **ಅಸ್ಸೀರಿಯ** ದೇಶ ಪ್ರಪಂಚದಲ್ಲಿ ಅತೀ ಬಲಿಷ್ಟವಾಗಿತ್ತು. ಈ ದೇಶವೇ ಕ್ರಿ.ಪೂ. 722ರಲ್ಲಿ ಇಸ್ರಾಯೇಲ್ (ಉತ್ತರ ರಾಜ್ಯ)ವನ್ನು ಸೋಲಿಸಿ, ಇಸ್ರಾಲ್ಯರನ್ನು ಸೆರೆ ಹಿಡಿದು ಕರೆದುಕೊಂಡು ಹೋದರು. ಈ ಸಮಯದಲ್ಲೇ ಬಹಳ ಕಿರಿಯ ಪ್ರವಾದಿಗಳು, ಅಂದರೆ ಓಬದ್ಯ, ಯೋವೇಲ, ಯೋನ, ಹೊಶೇಯ, ಅಮೋಸೆ, ಮೀಕ, ನಹೂಮ ಮತ್ತು ಚೆಫನ್ಯ ಅವರ ಭೋದನೆಗಳನ್ನು ಮತ್ತು ಬರವಣಿಗೆಗಳನ್ನು ಕೈಗೊಂಡರು (ಆದರೆ ಓಬದ್ಯ ಮತ್ತು ಯೋವೇಲರ ಬರವಣಿಗೆಯ ದಿನಾಂಕ ಕಂಡು ಹಿಡಿಯಲು ತುಂಬಾ ಕಷ್ಟವಾಗಿದೆ)

**3) ಬಾಬಿಲೋನ್ :**

ಬಾಬಿಲೋನಿಯ ದೇಶದವರು **ಅಸ್ಸೀರಿಯ** ದೇಶದವರನ್ನು ಸೋಲಿಸಿದ ನಂತರ ಪ್ರಪಂಚದ ಅತೀ ಬಲಿಷ್ಟ ದೇಶವಾದರು. ಹಬಕ್ಕೂಕನ ಪ್ರವಾದನೆ ಈ ಸಮಯದಲ್ಲಿ ಬರೆಯಲ್ಪಟ್ಟಿತು. ಬಾಬಿಲೋನಿಯ ದೇಶವು ಯೂಧ (ದಕ್ಷಿಣ ರಾಜ್ಯವನ್ನು ಸೋಲಿಸಿ ಕ್ರಿ.ಪೂ. 586ರಲ್ಲಿ ದೇವಾಲಯವನ್ನು ಧ್ವಂಸ ಮಾಡಿದರು.

**4) ಪರ್ಷಿಯ :**

ಹಳೆಯ ಒಡಂಬಡಿಕೆಯ ಕಾಲದಲ್ಲಿ ಕೊನೆಯದಾಗಿ ಪ್ರಪಂಚ ಗೆದ್ದ ದೇಶ ಪರ್ಷಿಯ, ಈ ಸಮಯದಲ್ಲಿ ಹಗ್ಗಾಯ, ಜೆಕರ್ಯ ಮತ್ತು ಮಲಾಕಿ ಪ್ರವಾದನೆ ಮಾಡಿದರು.

ಈ ಸಮಯದಲ್ಲಿ ಯೂದ ಸೆರೆಯಾಳುಗಳು ತಮ್ಮ ದೇಶಕ್ಕೆ ಹಿಂತಿರುಗಿ, ದೇವಾಲಯವನ್ನು ಪುನರ್ನಿರ್ಮಾಣ ಮಾಡಿ ದೇವರು ಅವರ ಮಧ್ಯ ನಡೆಸಲಿರುವ ಮಹತ್ಕಾರ್ಯಕ್ಕೆ (ರಕ್ಷಕನ ಆಗಮನಕ್ಕೆ 400 ವರ್ಷ) ಸಿದ್ದತೆ ನಡೆಸ ಬೇಕಾಯಿತು.

ದೇವರು ಈ ರೀತಿ ಈ ಕಿರಿಯ ಪ್ರವಾದಿಗಳನ್ನು ದೇವರ ರಾಜ್ಯವನ್ನು ನಮ್ಮಲ್ಲಿ ಸ್ಥಾಪಿಸಲು ಉಪಯೋಗಿಸಿದರು. ಇದರಿಂದ ನಾವು ಕೂಡ ಆಶಿರ್ವದಿಸಲ್ಪಟ್ಟಿದ್ದೇವೆ.

## <u>ದಿನ 1</u>

ಹೊಶಯನ ಗ್ರಂಥ (ಹೊಶಯ 1-3)

**ಮುನ್ನುಡಿ**

ಹೊಶಯ ಇಸ್ರಾಯೇಲ್ (ಉತ್ತರ ರಾಜ್ಯಕ್ಕೆ ಪ್ರವಾದಿಸಲು ಕರೆಯಲ್ಪಟ್ಟನು.

ಹೊಶಯ 40 ವರ್ಷ ಪ್ರವಾದಿಸಿದನು. (760-720 ಕ್ರಿ.ಪೂ.) ಇಸ್ರಾಯೇಲ್ ದೇಶವು ಈ ಸಮಯದಲ್ಲಿ ಪಾಪಗಳಿಂದ ತುಂಬಿ, ಅನೇಕ ತೊಂದರೆಗಳಿಗೆ ಒಳಗಾಗಿತ್ತು.

* ಇಸ್ರಾಯೇಲಿನ ರಾಜರೆಲ್ಲರೂ ದುಷ್ಟರಾಗಿದ್ದರು ಮತ್ತು ವಿಗ್ರಹಾರಾಧನೆ ಮುಂದುವರೆಸಿದ್ದರು.

* ಹಾಗಿದ್ದರೂ, ಇಷ್ಟೊಂದು ಪಾಪದಲ್ಲಿ ಮುಳುಗಿದ್ದರೂ, ಹೊಶಯ ಇಸ್ರಾಯೇಲ್ಯರಿಗೆ ದೇವರ ಪ್ರೀತಿಯನ್ನು ಸಾರಿದನು, ದೇವರ ಪ್ರೀತಿಯ ಆಳ ಹೊಶಯ ಗ್ರಂಥದಲ್ಲಿ ನಾವು ಸ್ಪಷ್ಟವಾಗಿ ಕಾಣುತ್ತೇವೆ.

* ಅಧ್ಯಾಯ 1-3 ರಲ್ಲಿ ಹೂಶೆಯ-ಗೊಮೇರಳ ಸಂಬಂಧವನ್ನು ದೇವರ – ಇಸ್ರಾಯೇಲರ ಸಂಭಂದಕ್ಕೆ ಹೋಲಿಸಿದ್ದಾರೆ. ಅದ್ಯಾಯ 4-14 ರಲ್ಲಿ ಈ ತರದ ಪ್ರೀತಿಯನ್ನು ತಿರಸ್ಕರಿಸಿದ್ದಕ್ಕೆ ಆಗುವ ಪರಿಣಾಮಗಳನ್ನು ಚಿತ್ರಿಸಿದ್ದಾರೆ.

**<u>ಇಸ್ರಾಯೇಲ್ಯರ ಮತ್ತು ದೇವರ ಮದುವೆ (ಹೂಶೆಯ 1:1 - 3:5)</u>**

ಇಲ್ಲಿರುವ ಪಾತ್ರಧಾರಿಗಳು ಹೋಶಯ ಮತ್ತು ಗೋಮೆರ್, ಮಾಡಬಾರದ ಕಾರ್ಯವನ್ನು ಮಾಡಲು ದೇವರು ಹೊಶಯನನ್ನು ವಿಶ್ವಾಸದಿಂದ ಮಾಡಲು ಸವಾಲೆಸಗುತ್ತಿದ್ದಾರೆ.

ವ್ಯಭಿಚಾರಿಯಾದ ಹೆಂಡತಿ ಮದುವೆಗೆ ಮೊದಲೇ ನೀತಿಗೆಟ್ಟ ಹೆಂಗಸಾಗಿದ್ದಳು. ಇಸ್ರಾಯೇಲ್ಯರ ದುರ್ನಡತೆ ತನ್ನನ್ನು ಎಷ್ಟು ದುಃಖಕ್ಕೀಡು ಮಾಡಿದೆ ಎಂದು ದೇವರು ಇಲ್ಲಿ ತೋರಿಸುತ್ತಿದ್ದಾರೆ.

ಇಸ್ರಾಯೇಲ್ ದೇವರೊಂದಿಗೆ ಮದುವೆ ಮಾಡಿಕೊಂಡಿದ್ದರೂ, ಅವಳು ಆ ಸಂಬಂಧದಲ್ಲಿ ತುಂಬಾ ಅವಿಶ್ವಾಸಿಯಾಗಿದ್ದಳು. ಅವಳಲ್ಲಿದ್ದ ಆತ್ಮೀಯ ವ್ಯಭಿಚಾರದ ಮಾಪವನ್ನು ದೇವರು

ವಿಗ್ರಹಾರಾಧನೆಯ ಸಮಕ್ಕೆ ಹೋಲಿಸಿ, ಬೇರೆ ಬೇರೆ ವಿಧದಲ್ಲಿ ಅದನ್ನು ನಿರೂಪಿಸುತ್ತಿದ್ದಾರೆ.

- ಮೂಲ ವಿಗ್ರಹಾರಾಧನೆಯಂದರೆ ವಿಗ್ರಹಗಳನ್ನು ರೂಪಿಸಿ ಅದಕ್ಕೆ ತಲೆಬಾಗುವುದು
- ಬೇರೆ ಬೇರೆ ತರದ ವಿಗ್ರಹಾರಾಧನೆ, ಫಲಕೊಡುವ ದೇವತೆಗಳನ್ನು ಆರಾಧಿಸುವುದು ಮತ್ತು ಅವಕ್ಕೆ ಚಾರತನದ ಪೂಜೆಗಳನ್ನು ಮಾಡುವುದು.
- ಇನ್ನೊಂದುತರದ ವಿಗ್ರಹಾರಾಧನೆ ವಿಷಯಲಂಪಟತನ
- ಇನ್ನೊಂದು ತರದ ವಿಗ್ರಹಾರಾಧನ ತನ್ನ ಶಕ್ತಿಯನ್ನೇ ಅವಲಂಬಿಸುವುದು ಮತ್ತು ದೇವರನ್ನು ನಂಬದೆ ಬೇರೆ ದೇಶಗಳ ಮೊರೆ ಹೋಗುವುದು.

ಹೊಶಯ (ಅ.3) ಗೋಮೇರ್ ಹೊಶಯನನ್ನು ಬಿಟ್ಟುಹೋದಾಗ, ದೇವರು ಅವಳನ್ನು ಪುನಃ ಕೊಂಡುಕೊಳ್ಳಲು ಅವನನ್ನು ಕಳಿಸುತ್ತಾರೆ, ಇದರಿಂದ ಇಸ್ರಾಯೇಲನ್ನು ತನ್ನ ಹೆಂಡತಿಯಾಗಿ ಸ್ವೀಕರಿಸಲು ಎಷ್ಟು ತವಕಿಸುತ್ತಿದ್ದಾರೆಂದು ದೇವರು ತೋರಿಸುತ್ತಿದ್ದಾರೆ, ಇಷ್ಟೊಂದು ಅಗಾಧವಾದ ದುರ್ನಡತೆಯಿದ್ದರೂ, ದೇವರು ಕೊಡುವ ಕ್ಷಮಾಪಣೆ ಅವರ್ಣಿಯವಾದದ್ದು.

ನಮ್ಮ ಜೀವನದಲ್ಲಿರುವ ವಿಗ್ರಹಾರಾಧನೆ ಯಾವ ತರಹದ್ದು? ನಾವು ನಮ್ಮ ಶಕ್ತಿಯನ್ನೇ ಅವಲಂಬಿಸಿದ್ದೇವೆಯೇ? ಅಥವಾ ದೇವರಲ್ಲಿ ವಿಶ್ವಾಸವಿಡದೆ, ನಮ್ಮ ಮುಖಂಡರನ್ನು ಮಾತ್ರ ನಂಬಿದ್ದೇವೆಯ? ಹಣಕ್ಕೆ ನಮ್ಮ ಹೃದಯದಲ್ಲಿ ಯಾವ ಸ್ಥಳ ಕೊಟ್ಟಿದ್ದೇವೆ? ದೇವರೊಂದಿಗಿನ ನಮ್ಮ ಸಂಬಂಧ ಅವರಿಗೆ ಹಿತವಾಗಿದೆಯ ಅಥವಾ ದುಃಖ ಕೊಡುತ್ತಿದೆಯೇ? ದೇವರು ನಮ್ಮನ್ನು ಪ್ರೀತಿಸುತ್ತಾರೆ ಮತ್ತು ನಮ್ಮೊಡನೆ ಆಳವಾದ ಸಂಬಂಧ ಹೊಂದಲು ಆಶಿಸುತ್ತಿದ್ದಾರೆ.

**ಅನ್ವಯ** : ನಿಮ್ಮ ಜೀವನದಲ್ಲಿ ಇತ್ತೀಚೆಗೆ ಉಂಟಾದ ಕೆಲವು ದುಃಖಕರ ಘಟನೆಗಳನ್ನು ಬರೆದು, ಅದರಿಂದ ಹೇಗೆ ಪಾರಾದಿರಿ ಎಂದು ತಿಳಿಸಿ.

'ಏಕೆಂದರೆ ಮರಣವಾಗಲಿ, ಜೀವನವಾಗಲಿ, ದೇವದೂತರಾಗಲಿ, ಅಧಿಪತಿಗಳಾಗಲಿ, ಮರ್ತಮಾನದ ಸಂಗತಿಗಳಾಗಲಿ, ಭವಿಷ್ಯತ್ ಕಾಲದ ಸಂಗತಿಗಳಾಗಲಿ, ಯಾವುದೇ ಶಕ್ತಿಯಾಗಲಿ ಎತ್ತರವಾಗಲಿ, ಆಳವಾಗಲಿ, ಅಥವಾ ಸೃಷ್ಟಿಯಲ್ಲಿರುವ ಬೇರೆ ಯಾವುದೇ ಆಗಲಿ ನಮ್ಮ ಕರ್ತನಾಗಿರುವ ಕ್ರಿಸ್ತ ಯೇಸುವಿನಲ್ಲಿರುವ ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲಾರವೆಂದು ನನಗೆ ದೃಢನಿಶ್ಚಯವಿದೆ. (ರೋಮಾಪುರ 8:38-39)

-------------------------------------------------------------------

## **ದಿನ 2**

ಹೋಶೇಯನ ಗ್ರಂಥ (ಹೋಶೇಯ 4-5)

### **ದೇವರು ಇಸ್ರಾಯೇಲ್ಯರ ವಿರುದ್ಧ (ಹೊ 4:1 - 19)**

ಆನೇಕ ಪ್ರವಾದಿಗಳ ಮೂಲಕ ಎಚ್ಚರಿಸಿ ಕಡೆಗೆ ದೇವರು ಅವರನ್ನು ಶಿಕ್ಷಿಸಲು ನಿರ್ಧರಿಸುತ್ತಾರೆ. ಇಸ್ರಾಯೇಲ್ಯರ ವಿರುದ್ಧ ಕೆಲವು ಆಪಾದನೆಗಳನ್ನು ದೇವರು ಮಂಡಿಸುತ್ತಾರೆ, ಅವು ಯಾವುದಂದರೆ:

- ಯಾವ ವಿಶ್ವಾಸವೂ ಇಲ್ಲ, ಪ್ರೀತಿಯೂ ಇಲ್ಲ (ವ.1)
- ಶಪಿಸುವುದು ಸುಳ್ಳು ಹೇಳುವುದು, ಕೊಲ್ಲುವುದು, ಕದಿಯುವುದು, ವ್ಯಭಿಚಾರ (ವ.2)
- ದೈವಜ್ಞಾನವಿಲ್ಲ (ವ.6)
- ಯಾಜಕರು (ಮುಖಂಡರು) ಧರ್ಮಶಾಸ್ತ್ರವನ್ನು ಅಲಕ್ಷ್ಯ ಮಾಡಿದರು (ವ.6)
- ವಿಗ್ರಹಾರಾಧನೆ (ವ.12)

(ರೋಮಾ 2:4) ದೇವರು ಯಾವಾಗಲೂ ಮೊದಲು ನಮ್ಮನ್ನು ಆತನ ಕರಣೆಯಿಂದ ಸೆಳೆಯಲು ಪ್ರಯತ್ನಿಸುತ್ತಾರೆ. ನಾವು ಯಾವಾಗ ಮನತಿರುಗಿ ಬರುವೆವು ಎಂದು ನಿರೀಕ್ಷಿಸುತ್ತಾರೆ, ಆದರೆ ಎಲ್ಲಾ ಪ್ರಯತ್ನಗಳನ್ನು ನಾವು ತಿರಸ್ಕರಿಸಿದಾಗ, ಅವರು ತೆಗೆದುಕೊಳ್ಳುವ ಮುಂದಿನ ಹೆಜ್ಜೆ, ಶಿಕ್ಷೆ.

ಹಾಗೆಯೇ, ಇಸ್ರಾಯೇಲ್ಯರು ಎಷ್ಟೋ ಪ್ರವಾದಿಗಳು ಎಚ್ಚರಿಸಿದರೂ, ದೇವರಿಗೆ ಕಿವಿಗೊಡಲು ನಿರಾಕರಿಸಿದಾಗ, ಅದರ ಪರಿಣಾಮವಾಗಿ ಶಿಕ್ಷಿಸಲ್ಪಟ್ಟರು. ದೇವರು ಇಸ್ರಾಯೇಲ್ಯರಿಗೆ ನ್ಯಾಯತೀರ್ಪು ಪ್ರಾರಂಭಿಸುತ್ತಾರೆ. ಶಿಕ್ಷೆಯ ನಂತರ ನ್ಯಾಯತೀರ್ಪು ನಮ್ಮ ಜೀವನದಲ್ಲಿ ಎಲ್ಲವೂ ಸರಿಯಾಗಿ ನಡೆಯುವಾಗಲೇ ನಾವು ದೇವರಿಗೆ ಕಿವಿಗೊಡುತ್ತೇವಾ? ಅಥವಾ ಮನತಿರುಗಲು ಒಂದು ದುರಂತಕ್ಕೆ ಕಾದಿದ್ದೇವಾ? ಜೀವನದಲ್ಲಿ ನಮಗುಂಟಾದ ಕೆಲವು ಕಠಿಣವಾದ ಪೆಟ್ಟುಗಳಿಂದ ನಾವು ಕಲಿತ ಪಾಠಗಳೇನು?

### **ಇಸ್ರಾಯೇಲ್ಯರಿಗೆ ತೀರ್ಪು (ಹೋಶೇಯ 5:1-15)**

- ಇಸ್ರಾಯೇಲ್ ಜನರು ತಮ್ಮದೇವರ ಬಳಿಗೆ ತಿರುಗಿಕೊಳ್ಳದ ಮಟ್ಟಿಗೆ ದೂರಹೋಗಿದ್ದರು. (ವ.4)
- ಅವರ ಗರ್ವ ಅವರ ಮುಖದ ಮೇಲೆ ರಾರಾಜಿಸುತ್ತಿತ್ತು. (ವ.5)
- ಅದರಿಂದ ದೇವರು ತನ್ನನ್ನೇ ಹಿಂದೆಗೆದುಕೊಂಡು, ಅವರಿಂದ ಮರೆಯಾದನು (ವ.6)
- ಅವರ ಅಪರಾಧವನ್ನು ಅರಿಕೆಮಾಡಿ ಮನತಿರುಗಬೇಕೆಂದು ದೇವರು ಕಾಯುತ್ತಾರೆ. (ವ. 15)

ನಮ್ಮ ಮಾನಸ್ಪಾಂತರ ದೇವರ ಕಡೆ ತಿರುಗಿಕೊಳ್ಳುವುದು, ನಮ್ಮ ಪಾಪಗಳನ್ನು ಅರಿಕೆ ಮಾಡಿ, ಕಾತರದಿಂದ ದೇವರನ್ನು ಹುಡುಕುವುದು ಆಗಿದೆ.

ನಾವು ದೇವರ ಬಳಿ ತಿರುಗಿಕೊಳ್ಳದಷ್ಟು ದೂರ ಸರಿದಿದ್ದೇವೆಯೇ? ದೇವರ ಶಿಕ್ಷೆಯನ್ನು ಹಗುರವಾಗಿ ತೆಗೆದುಕೊಂಡಿದ್ದೇವೆಯೇ? ನಾವು ಮಾಡಬೇಕಾದ ಉತ್ತಮವಾದ ಕೆಲಸವೆಂದರೆ ದೇವರ ಕಡೆ ತಿರುಗಿಕೊಳ್ಳುವುದು, ಏಕೆಂದರೆ ಅವರೊಬ್ಬರೇ ನಮ್ಮನ್ನು ಗುಣ ಪಡಿಸಿ, ಸ್ವಸ್ಥ ಮಾಡುವುದು. ಅವರ ಕೃಪೆ ಮತ್ತು ಕರುಣೆ ಶ್ರೇಷ್ಠವಾದುದ್ದು ಅವರು ಇಸ್ರಾಯೇಲರನ್ನೂ ಸಹ ಕ್ಷಮಿಸಿದರು.

**<u>ಅನ್ವಯ</u>** : ಮನತಿರುಗಲು ನಮ್ಮನ್ನು ಯಾವುದು ಪ್ರೇರೇಪಿಸುತ್ತದೆ?

(ರೋಮಾ 2:4-5) 'ಆತನ ದಯೆ, ಐಶ್ವರ್ಯ, ಸಹನೆ ಮತ್ತು ದೀರ್ಘಶಾಂತಿ ಇವುಗಳನ್ನು ತಾತ್ಸಾರ ಮಾಡುತ್ತೀಯೋ? ದೇವರ ಒಳ್ಳೆಯತನ ನಿನ್ನನ್ನು ಮಾನಸಾಂತರಕ್ಕೆ ಪ್ರೇರೆಪಿಸುತ್ತದೆಂಬುದು ನಿನಗೆ ತಿಳಯದೋ? ನೀನು ನಿನ್ನ ಕಠಿಣವಾದ ಮತ್ತು ಮಾನಸಾಂತರ ಹೊಂದದ ಹೃದಯದಿಂದ ನಿನಗೋಸ್ಕರ ದೇವರ ನೀತಿಯುಳ್ಳ ತೀರ್ಪು ಪ್ರಕಟವಾಗುವ ಕೋಪದ ದಿನಕ್ಕಾಗಿ ದೇವರ ಕೋಪವನ್ನು ಸಂಗ್ರಹಿಸಿ ಕೊಳ್ಳುತ್ತಿದ್ದಿ."

---------------------------------------------------------------

## <u>ದಿನ 3</u>

ಹೋಶೇಯನ ಗ್ರಂಥ (ಹೋಶೇಯ 6-7)

**<u>ಪಶ್ಚಾತ್ತಾಪವಿಲ್ಲದ ಇಸ್ರಾಯೇಲ್ಯರು : (ಹೋಶೇಯ 6:1 - 7:16)</u>**

ಕರ್ತನು ಇಸ್ರಾಯೇಲ್ಯರಿಗೆ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಬೇಡುತ್ತಾನೆ. ತನ್ನ ಕ್ಷಮಾಗುಣದ ಮೇಲೆ ಮತ್ತು ತನ್ನ ಕೃಪೆಯ ಮೇಲೆ ನಂಬಿಕೆಯಿಡಲು ಅವರಿಗೆ ತಿಳಿಸುತ್ತಾನೆ. ಅವರ ಕ್ಷಮಾಗುಣವನ್ನು ಹೀಗೆಂದು ವರ್ಣಿಸಲಾಗಿದೆ.

- ಆತನೇ ನಮ್ಮನ್ನು ಸ್ವಸ್ಥ ಮಾಡುತ್ತಾನೆ (ವ.1)
- ಆತನೇ ನಮ್ಮ ಗಾಯಗಳನ್ನು ಕಟ್ಟುತ್ತಾನೆ (ವ.1)
- ಆತನೇ ನಮ್ಮನ್ನು ಪುನರ್ಜೀವಿಸ ಮಾಡುವನು (ವ.2)
- ಆತನೇ ನಮ್ಮನ್ನು ಪುನಃಸ್ಥಾಪಿಸುವನು (ವ.2)
- ಆತನ ಸಾನ್ನಿಧ್ಯದಲ್ಲಿ ಜೀವಿಸಲು ಅವರು ಅವಕಾಶ ಮಾಡಿ ಕೊಡುವರು (ವ.2)

ಆದರೆ ಇಸ್ರಾಯೇಲರು ಪಶ್ಚಾತ್ತಾಪ ಪಡಲಿಲ್ಲ. ದೇವರು ಹೇಳುತ್ತಾರೆ "ನಾನು ಕರುಣೆಯನ್ನು ಬಯಸುತ್ತೇನೆ, ಯಜ್ಞವನ್ನಲ್ಲ', ಈ ವಚನವನ್ನೇ ಯೇಸು ಫರಿಸಾಯರಿಗೆ ಎತ್ತಿ ಹೇಳಿದರು.

ಅವರ ಧರ್ಮ ದೇವರಿಗೆ ಪ್ರಿಯವಾಗಿರಲಿಲ್ಲ. ದೇವರಿಗೆ ನಮ್ಮ ಧರ್ಮ, ಕಟ್ಟುಪಾಡಿಗಿಂತ ನಾವು ತೋರಿಸುವ ದಯೆ, ಪ್ರೀತಿಯೇ ಮುಖ್ಯವಾಗಿದೆ.

ಇಸ್ರಾಯೇಲ್ಯರು ಪಶ್ಚಾತ್ತಾಪ ಪಡದ ಕಾರಣ ನ್ಯಾಯ ತೀರ್ಪಿಗೊಳಗಾದರು. (ವ.11)

ದೇವರು ಅವರ ದುಷ್ಕೃತ್ಯಗಳನ್ನು ಜ್ಞಾಪಕ ಮಾಡುತ್ತಾರೆ (7:2)

ಹಲವು ಸಾರಿ ನಾವು ಯೋಚಿಸುವುದು ಏನಂದರೆ ದೇವರು ದಯಾಮಯ ಮತ್ತು ದೇವರು ಮರೆಯುತ್ತಾನೆಂದು. ಆದರೆ ವಚನಗಳು ಹೇಳುವುದೇನೆಂದರೆ ದೇವರು ನಮ್ಮ ಪಾಪಗಳನ್ನು ಗಣನೆಗೆ ತೆಗೆದುಕೊಂಡು ಶಿಕ್ಷೆಯನ್ನು ಕೊಟ್ಟೇ ಕೊಡುತ್ತಾರೆ.

ಪಾಪದ ಒಂದು ದುರಂತ ಏನೆಂದರೆ, ಅದನ್ನು ಬಚ್ಚಿಡಲು ಸಾಧ್ಯ ಎಂದು ನಾವು ಯೋಚಿಸುತ್ತೇವೆ. ಆದರೆ ಅದು ಅಸಾಧ್ಯ. “ಏಲ್ಲಾ ಸೃಷ್ಟಿಯಲ್ಲಿ ದೇವರ ದೃಷ್ಟಿಗೆ ಮರೆಯಾದದ್ದು ಯಾವುದೂ ಇಲ್ಲ. ನಾವು ಲೆಕ್ಕ ಒಪ್ಪಿಸಬೇಕಾಗಿರುವ ದೇವರ ದೃಷ್ಟಿಗೆ ಸಮಸ್ತವೂ ಬಹಿರಂಗವಾದದ್ದಾಗಿಯೂ, ಬಯಲಾದದ್ದಾಗಿಯೂ ಅದೆ'' ನ್ಯಾಯತೀರ್ಪಿನಿಂದತಪ್ಪಿಸಿಕೊಳ್ಳಲು ಒಂದೇ ಮಾರ್ಗವೆಂದರೆ ಯೇಸುಕ್ರಿಸ್ತರ ಮೂಲಕ ಮಾನಸಾಂತರ ಹೊಂದಿ ದೇವರ ಕಡೆಗೆ ತಿರುಗಿಕೊಳ್ಳುವುದೇ ಆಗಿದೆ.

ದೇವರು ಇಸ್ರಾಯೇಲನ್ನು ತಿರುವಿ ಹಾಕದ ರೊಟ್ಟಿಗೆ ಹೋಲಿಸಿದ್ದಾರೆ (7:8) ಅದೇನೆಂದರೆ ಇಸ್ರಾಯೇಲ್ ಸರಿಯಾಗಿ ಬೆಂದಿಲ್ಲ ಅಂದರೆ ಬುದ್ದಿಹೀನರಾಗಿದ್ದಾರೆ.

ದೇವರು ಮತ್ತೊಮ್ಮೆ ಇಸ್ರಾಯೇಲನ್ನು ಪಾರಿವಾಳಕ್ಕೆ ಹೋಲಿಸುತ್ತಾರೆ. ಅವು ಬಹುಬೇಗ ಮೋಸಹೋಗುತ್ತವೆ ಮತ್ತು ತಿಳುವಳಿಕೆಯಿಲ್ಲದ ಇರುತ್ತವೆ. ಅವರು ಸುಲಭವಾಗಿ ತಪ್ಪುದಾರಿ ಹಿಡಿದು, ಬೇಗನೇ ಪಾಪಕ್ಕೆ ಬೀಳುತ್ತಾರೆ. ಆದರೆ ಅವರನ್ನು ವಿಮೋಚನೆ ಮಾಡಲು ದೇವರು ತವಕಿಸುತ್ತಿದ್ದರು (ವ.13)

ನಾವೂ ಬಹಳ ಬೇಗ ತಪ್ಪುದಾರಿ ಹಿಡಿಯುತ್ತೇವೆಯೇ? ನಾವು ಸುಲಭವಾಗಿ ಮೊಸ ಹೋಗುತ್ತೇವೆಯೇ? ನಮಗೆ ಸಹಾಯ ಮಾಡಬೇಕೆಂದೆನಿಸಿದಾಗ ನಾವು ಯಾರ ಬಳಿ ಓಡುತ್ತೇವೆ?

“ಬನ್ನಿರಿ, ನಾವು ಯೆಹೋವನ ಕಡೆಗೆ ತಿರುಗಿ ಕೊಳ್ಳೋಣ, ಆತನೇ ನಮ್ಮನ್ನು ಸ್ವಸ್ಥ ಮಾಡುತ್ತಾನೆ''

**ಅನ್ವಯ** : ನಿಮ್ಮ ಜೀವನದಲ್ಲಿ ಯಾವ ಯಾವ ವಿಷಯಗಳಲ್ಲಿ ಬದಲಾವಣೆ ಹೊಂದಲು ಹೋರಾಡುತ್ತಿರುವಿರಿ? ಅದರಿಂದ ಬದಲಾವಣೆ ಹೊಂದಲು ಮುಂದೆ ಯಾವ ಸೂಕ್ತ ಕ್ರಮ ತೆಗೆದುಕೊಳ್ಳುವಿರಿ?

“ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿ ಸಕಲ ಅನೀತಿಯಿಂದ ನಮ್ಮನ್ನು ಶುದ್ದಿ ಮಾಡುವನು”

(1 ಯೋಹಾನ 1:9)

---------------------------------------------------------------

## **ದಿನ 4**

ಹೊಶಯನ ಗ್ರಂಥ (ಹೋಶೇಯ 8)

**ಬಿರುಗಾಳಿಯನ್ನು ಕೊಯ್ಯುವುದು (ಹೋಶೇಯ 8:1 - 14)**

ಸಣ್ಣ ಸಣ್ಣ ಸಂಗತಿಗಳಲ್ಲಿ ಕೂಡ ನಾವು ದೇವರನ್ನು ಮರೆತು, ಅವರಲ್ಲಿ ನಂಬಿಕೆಯಿಡದೆ ನಮ್ಮ ಸಂಪತ್ತು ಮತ್ತು ವ್ಯವಹಾರ ಜ್ಞಾನದಲ್ಲಿ ನಂಬಿಕೆ ಇಡುವುದರಿಂದ ನಾವು ಕಡೆಯಲ್ಲಿ ದುರ್ಗತಿಗಿಳಿಯುತ್ತೇವೆ.

ಇಸ್ರಾಯೇಲರು ತಮ್ಮ ಸೃಷ್ಟಿಕರ್ತನನ್ನು ಮರೆತಿದ್ದಾರೆ (ವ.14) ದೇವರನ್ನು ಮರೆಯುವುದು ಎಂದರೆ, ನಿಜವಾಗಿಯೂ ದೇವರನ್ನು ಮರೆತಿದ್ದಾರೆ ಎಂದಲ್ಲ ಆದರೆ ಅದರರ್ಥ ದೇವರನ್ನು "ಕಡೆಗಣಿಸಿದ್ದಾರೆ" ಎಂದು. ಅವರ ಜೀವನದಲ್ಲಿ ದೇವರಿಗೆ ಪ್ರಥಮ ಸ್ಥಾನವಿರಲಿಲ್ಲ,

ಇಸ್ರಾಯೇಲರು ದೇವರನ್ನು ಮರೆತಿದ್ದರಿಂದ 5 ಪಾಪಗಳು ಉಂಟಾದುವು :

- ಅವರು ದೇವರ ಒಡಂಬಡಿಕೆಯನ್ನು ಮೀರಿದ್ದರು (ವ.1-3) : ಒಡಂಬಡಿಕೆ ಎಂದರೆ ಒಂದು ಒಪ್ಪಂದ, ವಿಶೇಷವಾಗಿ ಎರಡು ವ್ಯಕ್ತಿಗಳಿಗೆ ಸಂಬಂಧಿಸಿದೆ. ಒಡಂಬಡಿಕೆಯನ್ನು ಮೀರುವುದು, ಎಂಬುದರ ಅರ್ಥ ದೇವರ ಹೃದಯವನ್ನು ಇರಿಯುವುದು. ಅವಿಧೇಯತೆ ದೇವರ ಹೃದಯವನ್ನು ಮುರಿಯುತ್ತದೆ.
- ದೇವರ ಅಪ್ಪಣೆಯಿಲ್ಲದೆ ಅಥವಾ ಸಮ್ಮತಿಯಿಲ್ಲದೆ (ವ. 4) : ಅವರು ಅರಸರನ್ನು ದೇವರ ಮಾರ್ಗದರ್ಶನವಿಲ್ಲದೆ ನೇಮಿಸುತ್ತಿದ್ದರು. ಅವರ ಆಯ್ಕೆ ಮೂರ್ಖತನದಿಂದಲೂ, ಪಾಪಗಳಿಂದಲೂ ಕೂಡಿತ್ತು. ನಾವು ಮನುಷ್ಯರ ಹೃದಯವನ್ನು ತಿಳಿಯಲು ಸಾಧ್ಯವಿಲ್ಲ, ಆದ್ದರಿಂದ ದೇವರಿಗೆ ಮನುಷ್ಯರ ಹೃದಯವೂ ತಿಳಿದಿದೆ. ನಾವು ಪಾಪಿಗಳಾದ ಮುಖಂಡರನ್ನು ಆಯ್ಕೆ ಮಾಡಿದಾಗ ಇಡೀ ನಾಯಕತ್ವವೇ ದೈವಭಕ್ತಿಯಿಲ್ಲದೆ ಭ್ರಷ್ಟವಾಗುತ್ತದೆ. ಆದ್ದರಿಂದ ನಾವು ಕೇವಲ ಬಾಹ್ಯರೂಪವನ್ನು ಮಾತ್ರ ನೋಡುತ್ತೇವೆ.
- ವಿಗ್ರಹಾರಾಧನೆ (ವ.4-6) : ಕೆಟ್ಟ ನಾಯಕರು ಕೆಟ್ಟದಾರಿಗಳಿಗೆ ನಡೆಸುತ್ತಾರೆ. ದೇವರು ಅವರ ಬಸವ ವಿಗ್ರಹಾರಾಧನೆಯನ್ನು ದಿಕ್ಕರಿಸಿದ್ದಾರೆ.
- ದೈವಭಕ್ತಿಯಿಲ್ಲದ ಪರರಾಷ್ಟ್ರಗಳೊಡನೆ ಮೈತ್ರಿ (ವ.8-10) : ಅವರು ಒಂಟಿಯಾದ ಕಾಡುಕತ್ತೆಯಂತ, ಮನಬಂದಂತೆ ಅಲೆದು ಅಸ್ಸೀರಿಯಗೆ ಹೋಗಿದ್ದಾರೆ, ಇಸ್ರಾಯೇಲರು ಅವರ ರಕ್ಷಕ ಮತ್ತು ಸಹಾಯಕನಾದ ದೇವರ ಕಡೆ ತಿರುಗಿಕೊಳ್ಳಲು ವಿಫಲರಾದರು.
- ಅವರು ಅಕ್ರಮವಾದ ಬಲಿಪೀಠಗಳನ್ನು ಕಟ್ಟಿದರು (ವ.II-13) : ದೇವರು ಅವರ ಅಕ್ರಮಗಳನ್ನು ಅಧರ್ಮವನ್ನು ಜ್ಞಾಪಿಸಿ, ಅವರ ಪಾಪಗಳನ್ನು ವಿಚಾರಿಸಿ, ದಂಡನೆಗೆ ಗುರಿಮಾಡುವುದಾಗಿ ಹೇಳುತ್ತಾನೆ. ಅವರು ಗಾಳಿಯನ್ನು ಬಿತ್ತಿ, ಬಿರುಗಾಳಿಯನ್ನು ಕೊಯ್ದಿದ್ದಾರೆ.

ನಾವು ಈದಿನ ಏನನ್ನು ಬಿತ್ತುತ್ತಿದ್ದೇವೆ? ದೇವರಿಗೆ ಮೊದಲ ಸ್ಥಾನವನ್ನು ಕೊಡುತ್ತಿದ್ದೇವೆಯೇ? ಕಷ್ಟ ಕಾಲದಲ್ಲಿ ದೇವರ ಕಡೆಗೆ ತಿರುಗಿಕೊಳ್ಳುತ್ತಿದ್ದೇವೆಯೇ? ನಾವು ದೇವರೊಡನೆ ನಮಗಿರುವ ಒಡಂಬಡಿಕೆಯನ್ನು ಸ್ಥಿರವಾಗಿ ಇಟ್ಟು ಕೊಳ್ಳೋಣ.

**ಅನ್ವಯ** : ನಾವು ನಮ್ಮ ಮುಖಂಡರು/ಕ್ರೈಸ್ತರು ಒಳ್ಳೆಯ ಜ್ಞಾನದಿಂದ ಕೂಡಿ, ಮನಸ್ಸಾಕ್ಷಿಯಿಂದ ನಡೆದು, ಘನತೆ ಗೌರವದಿಂದ ಜೀವಿಸುವಂತೆ ದೇವರಲ್ಲಿ ಪ್ರಾರ್ಥಿಸೋಣ.

"ನಿಮಗೆ ದೇವರ ವಾಕ್ಯವನ್ನು ತಿಳಿಸಿ ನಿಮ್ಮನ್ನು ನಡೆಸಿದ ಸಭಾನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ ಅವರು ಜೀವಿಸಿದ ದಾರಿಯ ಅಂತ್ಯದ ಫಲವನ್ನು ಆಲೋಚಿಸಿ ಅವರ ನಂಬಿಕೆಯನ್ನು ಅನುಸರಿಸಿರಿ. ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ. ನಿರಂತರವೂ ಹಾಗೆಯೇ ಇರುವನು. ವಿಚಿತ್ರವಾದ

ವಿವಿಧ ಬೋಧನೆಗಳಿಗೆ ಸೆಳೆಯಲ್ಪಡಬೇಡಿರಿ. ಏಕೆಂದರ ಕೃಪೆಯ ಮೂಲಕ ಹೃದಯವನ್ನು ಬಲಪಡಿಸಿಕೊಳ್ಳುವುದು ಒಳ್ಳೆಯದು" (ಹಿಬ್ರಿಯ 13:7-9)

-----------------------------------------------------------------

**ದಿನ 5**

ಹೋಶೇಯನ ಗ್ರಂಥ (ಹೋಶೇಯ 9-10)

ಇಸ್ರೇಲ್ಯರ ದಂಡನೆ (ಹೋಶೇಯ 9:1-10,15)

ಬಹುಶಃ (ಸರಿಯಾಗಿ ಹೇಳಲು ಸಾಧ್ಯವಿಲ್ಲ) ಒಂದು ಸುಗ್ಗಿ ಹಬ್ಬದ ಸಮಯದಲ್ಲಿ ಹೊಶೆಯ ಈ ಪ್ರವಾದನೆಯನ್ನು ಪ್ರಕಟಿಸಿದ್ದಾನೆ. ಆ ಸಮಯದಲ್ಲಿ ಸುಗ್ಗಿ ಹಬ್ಬ ಮಾಡಿ, ಕುಣಿದಾಡಿ, ಸಂತೋಷದಿಂದ ನಗೆದಾಡುತ್ತಿದ್ದಾಗ, ಇಸ್ರಾಯೇಲ್ಯರು ಹೋಶೆಯನ ಈ ಸಂದೇಶಕ್ಕೆ ಒಂದು ಚಿಕ್ಕ ಆಲೋಚನೆಯನ್ನು ಕೂಡ ಕೊಡಲಿಲ್ಲ (ವ.9:1-5) ಆ ಸಂದೇಶ ತುಂಬಾ ಸರಳವಾಗಿತ್ತು. ಅವರು ದೇವರನ್ನು ತ್ಯಜಿಸಿದ್ದರಿಂದ ದೇವರೂ ಅವರನ್ನು ತ್ಯಜಿಸಿದ್ದರು.

ಅದ್ಯಾಯ 9ರ ಎರಡನೇ ಭಾಗದಲ್ಲಿ ಇದಕ್ಕೆ ಆಧಾರವಿದೆ. ನ್ಯಾಯತೀರ್ಪು ಹತ್ತಿರವಾಗಿತ್ತು. ಬರಲಿರುವ ಆಕ್ರಮಣವನ್ನು ಕುರಿತು ಹೂಶೇಯ ಸ್ಪಷ್ಟವಾಗಿ ಮತ್ತು ಭಾವೋದ್ರಿಕ್ತನಾಗಿ ಹೇಳಿದಾಗ, ಇಸ್ರಾಯೇಲ್ಯರು ಪ್ರವಾದಿ 'ಮೂರ್ಖನು ಮತ್ತು ಹುಚ್ಚನು' ಎಂದು ನಗೆದಾಡಿದರು (9:7-8)

ಪಾಪ ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ಪಾಪದಿಂದ ನಾವು ಬೇರ್ಪಟ್ಟಾಗ, ದೇವರಿಂದ ಬರುವ ಆತ್ಮಿಕ ಅರಿವು ಕಳೆದು ಹೋಗಿ, ನಾವು ಆತ್ಮೀಕ ಕುರುಡುತನಕ್ಕೆ ಮತ್ತು ಆತ್ಮಿಕ ಕಿವುಡುತನಕ್ಕೆ ಒಳಗಾಗುತ್ತೇವೆ. ದೇವರು ನಮ್ಮಿಂದ ದೂರ ಸರಿಯುತ್ತಾರೆ. ನಾವು ನಿರೀಕ್ಷೆಯಿಲ್ಲದೆ ಹತಾಶರಾಗುತ್ತೇವೆ.

ಅಧ್ಯಾಯ10ರಲ್ಲಿ ಇಸ್ರಾಯೇಲ್ ಒಂದು ದ್ರಾಕ್ಷಿ ಬಳ್ಳಿಗೆ ಹೋಲಿಸಿದ್ದಾರೆ. ದೇವರಿಂದ ಆರಿಸಲ್ಪಟ್ಟ ದ್ರಾಕ್ಷಾತೋಟ, ಅದು ಸೊಂಪಾಗಿ ಬೆಳೆದಿದೆ. ಆದರೆ ಅದರ ಫಲ ದೇವರಿಗೆ ಪ್ರಿಯವಾದುದಲ್ಲ, ಅವನು ತನಗಾಗಿ ಫಲಫಲಿಸುತ್ತಾನೆ, ಅದರ ಫಲ ವಿಗ್ರಹಾರಾಧನೆ ಮತ್ತು ಧರ್ಮಾಂಧತೆ.

ಇಸ್ರಾಯೇಲ್ಯರ ಹೃದಯ ವಂಚಕವಾದದ್ದು (2) ಅಂದರೆ ಕಪಟವಾಗಿತ್ತು ಎಂದರ್ಥ. ಅವರ ಉದ್ದೇಶ ಒಂದಾಗಿದ್ದರೆ ಅವರ ಕಾರ್ಯಗಳು ಇನ್ನೊಂದಾಗಿದ್ದವು.

ವಿವಾಹದ ಸಂಬಂಧವು ಹೇಗೆಯೋ ಹಾಗೆಯೇ ದೇವರು ಅವರಿಂದ ಸ್ವಾಮಿನಿಷ್ಠೆಯನ್ನು ನಿರೀಕ್ಷಿಸಿದ್ದರು. ಇಸ್ರಾಯೇಲ್ಯರು ನಾವು ಯಹೋವನನ್ನೇ ಆರಾಧಿಸುತ್ತಿದ್ದೇವೆ ಎಂದೂ, ಯಹೋವನೇ ನಿಜವಾದ ದೇವರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಅವರ ಅಕ್ರಮವಾದ ಬಲಿಪೀಠಗಳು ಮತ್ತು ವಿಗ್ರಹ ಸ್ತಂಭಗಳು ಹೆಚ್ಚುತ್ತಿದ್ದವು.

ಈಗ ಇಸ್ರಾಯೇಲ್ ಜನರು ವಿಚ್ಚೇದನೆಯ ಮಟ್ಟಕ್ಕೆ ತಲುಪಿದ್ದರು. ನಾವು ದೇವರೊಡನೆ ನಮಗಿರುವ ಸಂಭಂದದಲ್ಲಿ ವಿಚ್ಚೇದನೆಯ ಮಟ್ಟಕ್ಕೆ ತಲುಪಿದ್ದೇವೆಯೇ? ದೇವರು ನಿಜವಾಗಿಯೂ ನಮ್ಮ ಹೃದಯದ ಒಡೆಯನು ಮತ್ತು ರಾಜನಾಗಿದ್ದಾನೆಯೇ? ಅವನು ನಮ್ಮ ಮೊದಲ ಪ್ರಿಯಕರನಾಗಿದ್ದಾನೆಯೇ? ಅವನು ಇಚ್ಚಿಸುವ ಫಲವನ್ನು ನಾವು ಫಲಫಲಿಸುತ್ತಿದ್ದೇವೆಯೇ? ನಮ್ಮ ಹೃದಯವು ದೇವರಿಗಾಗಿ ತವಕಪಡುತ್ತಿದೆಯೇ?

ನಾವು ಯೇಸುಕ್ರಿಸ್ತನ ವಾಗ್ದಾನವನ್ನು ಜ್ಞಾಪಿಸಿಕೊಳ್ಳೋಣ "ನನ್ನಲ್ಲಿ ನೆಲೆಗೊಂಡಿರಿ, ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು, ಕೊಂಬೆಯು ದ್ರಾಕ್ಷಿಯ ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನೇ ದ್ರಾಕ್ಷಿಯ ಬಳ್ಳಿ, ನೀವು ಕೊಂಬೆಗಳು ಒಬ್ಬನು ನನ್ನಲ್ಲಿ ಮತ್ತು ನಾನು ಅವನಲ್ಲಿ ನೆಲೆಗೊಂಡಿದ್ದರೆ ಅಂಥವನು ಬಹಳ ಫಲಕೊಡುವನು. ಏಕೆಂದರೆ ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ' (ಯೋಹಾನ 15 :4-5)

**<u>ಅನ್ವಯ</u>** : ನೀವು ಯಾವ ದೈವೀಕ ಗುಣಗಳಿಗೆ ಹೆಸರಾಗಿದ್ದೀರಿ? ನಿಮಗೆ ತುಂಬಾ ಹತ್ತಿರವಾದ ಸ್ನೇಹಿತರಲ್ಲಿ ನಿಮ್ಮಲ್ಲಿ ಯಾವ ದೈವೀಕ ಗುಣಗಳನ್ನು ಅವರು ಕಂಡಿದ್ದಾರೆ ಎಂದು ಕೇಳಿ ವಿಚಾರಿಸಿ.

“ಪವಿತ್ರಾತ್ಮನ ಫಲವೇನೆಂದರೆ: ಪ್ರೀತಿ, ಆನಂದ, ಸಮಾಧಾನ, ಸಹನೆ, ದಯ ಸದ್ಗುಣ ನಂಬಿಕಸ್ತಿಕೆ, ಸಾತ್ವಿಕತೆ, ಸಂಯಮ ಇಂಥವುಗಳೇ' (ಗಲಾತ್ಯ 5:22)

--------------------------------------------------------------

## <u>ದಿನ 6</u>

ಹೋಶೇಯನ ಗ್ರಂಥ (ಹೋಶೇಯ 11-12)

### <u>ಇಸ್ರಾಯೇಲ್ಯರಿಗೆ ದೇವರ ಪ್ರೀತಿ (ಹೋಶೇಯ 11 : 1-11)</u>

ಅನುಕ್ರಮವಾಗಿ ಶಿಕ್ಷಣದ ಸಂದೇಶಗಳನ್ನು ಕೊಟ್ಟಾದ ಮೇಲೆ (ಹೋಶೇ 4-10) ದೇವರು ಅವರಿಗೆ ತಮ್ಮ ಪ್ರೀತಿಯ ಬಗ್ಗೆ ಜ್ಞಾಪಿಸುತ್ತಾರೆ. (ವ.1-4) ಇಸ್ರಾಯೇಲರ ಹುಟ್ಟಿನ ಬಗ್ಗೆ ಹೇಳುತ್ತದೆ. ದೇವರು ತನ್ನನ್ನೇ ಒಬ್ಬ ತಂದೆಗೆ ಹೋಲಿಸುತ್ತಾರೆ, ಆ ತಂದೆ ತನ್ನ ಮಗನನ್ನು ಕರೆದು, ಪ್ರೀತಿಸಿ, ತರಬೇತಿ ಕೊಟ್ಟನು. ಆದರೆ ಆ ಮಗ ಬೇಜವಾಬ್ದಾರಿಯಾಗಿ, ಮಾಡಿದ ಉಪಕಾರವನ್ನು ಸ್ಮರಿಸದೇ ಹೋದನು. ದೇವರು ಇಸ್ರಾಯೇಲ್ ತನ್ನ ದತ್ತು ಮಗನೆಂದೂ, ಸ್ವಂತ ಮಗನಲ್ಲವೆಂದೂ ಜ್ಞಾಪಿಸುತ್ತಾರೆ.

ಅದೇ ಪ್ರಕಾರ, ಕ್ರಿಸ್ತನಲ್ಲಿ ನಾವೆಲ್ಲರೂ ದೇವರ ಮಗ ಮತ್ತು ಮಗಳಾಗಿ ಅಂಗೀಕರಿಸಲ್ಪಟ್ಟಿದ್ದೇವೆ. ತಪ್ಪಿಹೋದ ಮಗನ ಹಾಗೆ ನಾವೂ ಕೂಡ ದೇವರ ಕೃಪೆಯಿಂದ ಮತ್ತು ಕರುಣೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ದೇವರ ಕರುಣೆಯಿಲ್ಲದಿದ್ದರೆ ನಾವು ಖಂಡಿತವಾಗಿ ನಾಶಗೊಳ್ಳುತಿದ್ದೆವು.

ತನ್ನ ಮಗನನ್ನು ಬಿಟ್ಟುಕೊಡದ ತಂದೆಯ ಭಾವೋದ್ವೇಗಗಳನ್ನು ನಾವು ದೇವರಲ್ಲಿ ಕಾಣುತ್ತೇವೆ.

ದೇವರು ನ್ಯಾಯಪರನಾಗಿದ್ದರೂ, ಅವರು ಒಬ್ಬ ಪ್ರೀತಿಯ ದೇವರಾಗಿದ್ದಾರೆ. ಪಾಪವನ್ನು ದಂಡಿಸಬೇಕು, ಆದರೆ ದೇವರು ಕರುಣಾಮಯಿ. ಶಿಲುಬೆಯಲ್ಲಿ ಮಾತ್ರವೇ ದೇವರ ಪ್ರೀತಿ ಮತ್ತು ದೇವರ ನ್ಯಾಯ ತೀರ್ಪು ಪೂರ್ಣವಾಗಿ ತೃಪ್ತಿಗೊಂಡಿದೆ.

### <u>ಇಸ್ರಾಯೇಲರ ಪಾಪ (ಹೋಶೇಯ 12:1-14)</u>

ಈ ಅಧ್ಯಾಯ ಯಹೂದದ  ಬಗ್ಗೆ ದೇವರ ಆಪಾದನೆಯೊಂದಿಗೆ ಪ್ರಾರಂಭವಾಗುತ್ತದೆ. (ವ.2) ಯಹೂದವು ಇಸ್ರಾಯೇಲಿನಷ್ಟು ನಾಶದ ಮಾರ್ಗದಲ್ಲಿ ಮುಂದುವರಿದಿಲ್ಲ, ಆದರೂ

ಅವರೂ ಅದೇ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾರೆ, ಅವರು ಮಾನಸಾಂತರ ಹೊಂದದಿದ್ದರೆ, ಇಸಾಯೇಲಿನ ಹಾಗೆಯೇ ಅವರೂ ನಾಶವಾಗುತ್ತಾರೆ.

ಯಹೂದ ಹಾಗಿರಲಿ, ಇಸಾಯೇಲಿನ (ಎಫ್ರಾಯೀಮ್) ಬಗ್ಗೆ ಏನು? ಅವನು ಸುಳ್ಳುಗಾರ, ಮೋಸದ ತಕ್ಕಡಿಯಿಂದ ಐಶ್ವರ್ಯವಂತನಾಗಿ, ಹೆಚ್ಚಳ ಪಡುತ್ತಾ, ದುರಹಂಕಾರದಿಂದ, "ನನ್ನಲ್ಲಿ ಪಾಪವನ್ನು ಯಾರೂ ಕಂಡುಕೊಳ್ಳಲು ಸಾಧ್ಯವಿಲ್ಲ' ಎಂದು ಕೊಂಡಿದ್ದನು (ವ.7-8), ಆದರೆ ಅವರೂ ದೇವರಿಂದ ವನವಾಸಕ್ಕೆ ಅಟ್ಟಲ್ಪಡುವರು.

- ದೇವರು ದಯಾಮಯನಾಗಿ ಅವರೊಡನೆ ನಡೆದು ಕೊಂಡಿದ್ದರೂ, ಇದೆಲ್ಲಾ ಉಂಟಾಯಿತು. ದೇವರು ತನ್ನನ್ನೇ ಪ್ರವಾದಿಗಳ ಮೂಲಕ ತನ್ನ ಜನರಿಗೆ ತೋರ್ಪಡಿಸಿದರು. (ವ.10)
- ದೇವರು ಇಸ್ರಾಯೇಲನ್ನು ಐಗುಪ್ತದಿಂದ ಬಿಡಿಸಿದ್ದರು (ವ.9)
- ದೇವರು ಇಸ್ರಾಯೇಲನ್ನು ಕಾಪಾಡಿದರು (ವ.13) ಆದರೆ ಅವರು ಬಹು ಕಠೋರವಾಗಿ ದೇವರನ್ನು ರೇಗಿಸಿದರು.

ನಾವು ನಮ್ಮ ಜೀವನದಲ್ಲಿ ದೇವರ ಕೃಪೆಯನ್ನು ಕೇವಲವಾಗಿ ಎಣಿಸುತ್ತೇವೆಯೋ? ನಾವು ನಾಶದ ಹಾದಿಯಲ್ಲಿ ನಡೆಯುತ್ತಿದ್ದೇವೆಯೋ ಅಥವಾ ದಿನದಿಂದ ದಿನಕ್ಕೆ ಆತ್ಮೀಕವಾಗಿ ವೃದ್ಧಿಗೊಳ್ಳುತ್ತಿದ್ದೇವೆಯೋ?

**<u>ಅನ್ವಯ</u>** : ನಿಮ್ಮ ಜೀವನದಲ್ಲಿ ಕೆಲವು ವಿಷಯಗಳಲ್ಲಿ ನೀವು ತುಂಬಾ ತಪ್ಪಿತಸ್ಥರಾಗಿದ್ದರೂ, ದೇವರ ಪ್ರೀತಿಯು ನಿಮ್ಮನ್ನು ಹೇಗೆ ಸೆಳೆಯಿತು? ಆ ವಿಷಯಗಳನ್ನೆಲ್ಲಾ ಪಟ್ಟಿ ಮಾಡಿ.

"ದೇವರ ನೀತಿಯು ನಂಬುವವರೆಲ್ಲರಿಗೆ ಯೇಸು ಕ್ರಿಸ್ತನಲ್ಲಿ ವಿಶ್ವಾಸ ಇಡುವುದರ ಮೂಲಕ ಲಭಿಸುತ್ತದೆ. ಇಲ್ಲಿ ಯಾವ ಭೇದವೂ ಇರುವುದಿಲ್ಲ ಏಕೆಂದರೆ ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಕಳೆದುಕೊಂಡಿದ್ದಾರೆ, ಆದರೆ ಯೇಸು ಕ್ರಿಸ್ತನಲ್ಲಿ ಬಂದ ವಿಮೋಚನೆಯಿಂದ ಅವರು ದೇವರ ಕೃಪೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆ. (ರೋಮಾ 3: 22-24)

------------------------------------------------------------

## <u>ದಿನ 7</u>

ಹೋಶೇಯನ ಗ್ರಂಥ (ಹೋಶೇಯ 13-14)

### <u>ಇಸ್ರಾಯೇಲಿನ ಮೇಲೆ ಯೆಹೋವನ ಕೋಪ (ಹೋಶೇಯ 13:1-16)</u>

ದೇವರು ಇಸ್ರಾಯೇಲರು ಸತ್ತಂತೆ ಮಾತನಾಡುತ್ತಾರೆ. ದೇವರು ಅವರ ಆತ್ಮೀಕ ಮರಣದ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ದೇವರಲ್ಲದ ವಸ್ತುಗಳನ್ನು ಆರಾಧಿಸಿದಾಗ, ಇಸ್ರಾಯೇಲ್ ದೇಶವೇ ಮರಣವನ್ನಪ್ಪಿತು. ಅದು ಹೇಗೆಂದರೆ, ಆ ದೇಶ ಶತ್ರುಗಳಿಂದ ಆಕ್ರಮಿಸಲ್ಪಟ್ಟು ಸಂಪೂರ್ಣ ನಾಶವಾಯಿತು.

ಆದರೆ ಆ ನಾಶ ಹೇಗೆ ಉಂಟಾಯಿತು?

ಹೊಶೇಯ, ಈ ಅಧ್ಯಾಯದಲ್ಲಿ ಹೇಗೆ ಒಂದು ಕಾಲದಲ್ಲಿ ಪ್ರೀತಿಯಿಂದ ಕಾಪಾಡಿದ ವ್ಯಕ್ತಿ, ಈಗ ನ್ಯಾಯ ತೀರ್ಪು ತರುತ್ತಿದ್ದಾನೆಂದು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಿದ್ದಾನೆ. ಆದರರ್ಥ ದೇವರೇ ಕೊನೆಯಲ್ಲಿ ಎಲ್ಲವನ್ನೂ ನಾಶ ಮಾಡುವರು.

- ಐಗುಪ್ತದಿಂದ ಹೇಗೆ ಕರ್ತನು ಅವರನ್ನು ಬಿಡಿಸಿಕೊಂಡು ಬಂದನೆಂದು ಅವರಿಗೆ ಜ್ಞಾಪಿಸುತ್ತಾನೆ. ದೇವರು ಅವರನ್ನು ಪ್ರೀತಿಯಿಂದ ನಡೆಸಿದರು (ವ.5-6)
- ಆದರೂ ಅವರು ದೇವರನ್ನು ಮರೆತರು. ಆದ್ದರಿಂದ ಯಾರೂ ಅವರನ್ನು ಬಿಡಿಸಿ, ರಕ್ಷಿಸಿದರೋ, ಅವರೇ ಅವರ ನಾಶಕ್ಕೆ ಕಾರಣರಾಗುತ್ತಿದ್ದಾರೆ (ವ.9)
- ಮುಂದಿನ ಸಂದೇಶದಲ್ಲಿ ಹೇಗೆ ಆಕ್ರಮಣ ಉಂಟಾಗುವುದೆಂದು ತಿಳಿಸಿದೆ (ವ.15-16) ದೇವರಿಂದಲೇ ನಾಶವು ಬರುವುದು.

ಮಾನಸಾಂತರದಿಂದ ಉಂಟಾಗುವ ವಾಗ್ದಾನಗಳು : (ಹೋಶೇಯ 14 :1-9)

ಈ ಗ್ರಂಥ ದೇವರು ಇಸ್ರಾಯೇಲನ್ನು ತನ್ನ ಕಡೆಗೆ ತಿರುಗಿಕೊಳ್ಳಿರೆಂದು ಕಳಕಳಿಯಿಂದ ಕೇಳಿಕೊಂಡು ಮುಕ್ತಾಯವಾಗುತ್ತದೆ. ಹಾಗೆ ನೋಡಿದರೆ ಅದೇ ದೇವರ ಕೊನೆಯ ಮಾತಾಗಿದೆ. ದೇವರು ಕೇಳುವುದೇನೆಂದರೆ ಪಾಪಗಳ ಅರಿಕೆ ಮತ್ತು ನಿಜವಾದ ಮಾನಸಾಂತರ.

ಮಾನಸಾಂತರವು ದೇವರ ಕೃಪೆಯ ಮೇಲೆ ಆತುಕೊಳ್ಳಲು ಕಲಿಸುತ್ತದೆ. ಅವರ ಪಾಪಗಳಿಂದ ನಿಜವಾದ ಮಾನಸಾಂತರ ಹೊಂದಲು ಕರೆಕೊಟ್ಟ ದೇವರು, ಎಲ್ಲವನ್ನೂ ಪುನಸ್ಥಾಪಿಸುವುದಾಗಿ ವಾಗ್ದಾನ ಮಾಡುತ್ತಾರೆ. ದೇವರು ಮೂರು ವಿಷಯಗಳನ್ನು ವಾಗ್ದಾನ ಮಾಡುತ್ತಾರೆ.

1. ಅವರ ಹಿಂಜಾರುವಿಕೆಯನ್ನು ಸ್ವಸ್ತ ಮಾಡುವುದು.

2. ಅವರನ್ನು ಮನಃಪೂರ್ವಕವಾಗಿ ಪ್ರೀತಿಸುವುದು.

3. ಅವರು ಇಸ್ರಾಯೇಲನ್ನು ಮೊದಲಿನ ಹಾಗೆ ಅವರ ಕೀರ್ತಿಯನ್ನು ಫಲಗಳನ್ನು ಅಭಿವೃದ್ದಿಗೊಳಿಸುವರು (ವ.5-7)

ಈ ವಾಗ್ದಾನಗಳ ಆಳ ನಮಗೆ ಆಶ್ಚರ್ಯ ಉಂಟು ಮಾಡುತ್ತಿದೆಯೇ? ದೇವರಲ್ಲೇ ನಮಗೆ ಸೌಂದರ್ಯ, ಶಕ್ತಿ, ಜೀವನ ಮೌಲ್ಯಗಳು, ಹರ್ಷ ಮತ್ತು ಸಮೃದ್ದಿ ಎಲ್ಲವೂ ಉಂಟಾಗುವುದು.

ಹೋಶೇಯ ತನ್ನ ಗ್ರಂಥವನ್ನು ಮುಗಿಸುವಾಗ, ದೇವರ ವಾಕ್ಯಗಳನ್ನು ವಿವೇಚನೆಯಿಂದ ತಿಳಿದುಕೊಳ್ಳುವವನು, ಗ್ರಹಿಸುವವನು ಜ್ಞಾನಿಯೆಂದು ನಮಗೆಲ್ಲಾ ಹೇಳುತ್ತಿದ್ದಾನೆ. ಪಾಪವು ಮರಣವನ್ನು ತರುತ್ತದೆ. ಆದರೆ ವಿಧೇಯತೆಯು ಜೀವದ ಮಾರ್ಗವಾಗಿದೆ, ಇದು ಈಗಲೂ ಸತ್ಯವಾಗಿದೆ. ದೇವರ ಮಾರ್ಗಗಳು ಯಾವಾಗಲೂ ನ್ಯಾಯವಾಗಿದೆ, ಮತ್ತು ನೀತಿವಂತರು ಅದರಲ್ಲಿ ನಡೆಯುತ್ತಾರೆ, ಆದರೆ ದುರಹಾಂಕಾರಿಗಳು ಅವುಗಳಿಂದ ಎಡವಿ ಬೀಳುತ್ತಾರೆ.

**ಅನ್ವಯ** : ಕ್ರೈಸ್ತರಾದ ಮೇಲೆ ದೇವರಿಂದ ನಿಮಗೆ ಉಂಟಾದ ಕೆಲವು ಅನುಗ್ರಹಗಳನ್ನು ಪಟ್ಟಿ ಮಾಡಿ.

"ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ, ಆತನು ಕ್ರಿಸ್ತನಲ್ಲಿ ಪರಲೋಕದ ಎಲ್ಲಾ ಆಶೀರ್ವಾದಗಳಿಂದ ನಮ್ಮನ್ನು ಆಶೀರ್ವದಿಸಿದ್ದಾನೆ ನಾವು ಪ್ರೀತಿಯಲ್ಲಿದ್ದು ಆತನ ಮುಂದೆ ಪರಿಶುದ್ದರೂ ನಿರ್ದೋಶಿಗಳೂ ಆಗಿರಬೇಕೆಂದು ಆತನು ಲೋಕದ ಅಸ್ತಿವಾರಕ್ಕೆ ಮುಂಚೆ ನಮ್ಮನ್ನು ಕ್ರಿಸ್ತನಲ್ಲಿ ಆರಿಸಿಕೊಂಡನು ಆತನು ತನ್ನ ಚಿತ್ತದ ಸುಸಂತೋಷಕ್ಕನುಸಾರವಾಗಿ ಯೇಸುಕ್ರಿಸ್ತನ ಮೂಲಕ ನಮ್ಮನ್ನು ತನಗೋಸ್ಕರ ತನ್ನ ಪುತ್ರರಾಗಿ ಸ್ವೀಕಾರ ಮಾಡುವಂತೆ ಮೊದಲೇ ನೇಮಿಸಿ ತನ್ನ ಕೃಪಾಮಹಿಮಯ ಸ್ತುತಿಗಾಗಿ ಆತನು ನಮ್ಮನ್ನು ತನ್ನ ಪ್ರಿಯನಲ್ಲಿ ಅಂಗೀಕರಿಸಿದ್ದಾನೆ' (ಎಫೆಸ 1:3-6)

------------------------------------------------------------

## ದಿನ 8

### ಯೋವೇಲನ ಗ್ರಂಥ (ಯೋವೇಲ 1-3)

**ಮುನ್ನುಡಿ :**

ಯೋವೇಲನು ದಕ್ಷಿಣ ಪ್ರಾಂತದ ಯೂಧ ದೇಶಕ್ಕೆ ಪ್ರವಾದಿಯಾಗಿದ್ದನು. ಯೂಧ ದೇಶಕ್ಕೆ ಉಂಟಾಗುವ ಕೆಲವು ಘೋರವಾದ ದುರ್ಗಟನೆಗಳು ಮತ್ತು ಬರಲಿರುವ ಮಸ್ಸಾಯನ ಬಗ್ಗೆ ಕೆಲವು ಉನ್ನತ ಪ್ರವಾದನೆಗಳನ್ನು ಅವನು ಪ್ರವಾದಿಸಿದ್ದಾನೆ. ಯೋವೇಲ್ ಗ್ರಂಥ ಯಾವ ಸಮಯದಲ್ಲಿ ಬರೆಯಲ್ಪಟ್ಟಿದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಆದರೆ ಕ್ರಿ.ಪೂ. 830 ರಲ್ಲಿ ಬರೆಯಲ್ಪಟ್ಟಿದೆ ಎಂಬ ಅಭಿಪ್ರಾಯವಿದೆ.

- ಯೋವೇಲ ಎಂದರೆ ""ಕರ್ತನೇ ದೇವರು" ಅಥವಾ "ಯಹೋವನೇ ದೇವರು'
- ಯೋವೇಲನು ಅವರಿಗೆ ಉಂಟಾಗುವ ಘೋರವಾದ ಮಿಡತೆಗಳ ಪೀಡೆಯನ್ನು ವಿವರಿಸಿ ಅವರು ಹೃದಯಾಂತರಾಳದಿಂದ ಮಾನಸಾಂತರ ಹೊಂದದಿದ್ದರೆ, ದೇವರು ಇನ್ನೂ ಕಠಿಣವಾದ ಬಾಧೆಗಳಿಂದ ಅವರನ್ನು ಶಿಕ್ಷಿಸುವುದಾಗಿ ಎಚ್ಚರಿಸುತ್ತಿದ್ದಾನೆ.
- ಯೋವೇಲನು ಮಾನಾಸಾಂತರಕ್ಕೆ ಅವರನ್ನು ಕರೆದಾಗ ನಿಮ್ಮ ಹೊರ ನೋಟದ ಗೋಳಾಟವಲ್ಲ ನಿಮ್ಮ ಹೃದಯಗಳನ್ನು ಹರಿಯಿರಿ ಎಂದು ಒತ್ತಿ ಹೇಳುತ್ತಾನೆ.
- ಈ ಗ್ರಂಥದ ಅತೀ ಪ್ರಮುಖ ಭಾಗ ಪವಿತ್ರಾತ್ಮರನ್ನು ಎಲ್ಲಾ ಜನರ ಮೇಲೆ ಸುರಿಸುವ ವಾಗ್ದಾನ (ಯೋವೆ 2 : 29-30)

### ಪಶ್ಚಾತ್ತಾಪಕ್ಕೆ ಕರೆ (ಯೋವೇಲ 1:1-2:11)

ಬರಲಿರುವ ಮಿಡತೆಗಳ ಪೀಡೆಯನ್ನು ವಿವರಿಸಿ, ಅವರನ್ನು ಎಚ್ಚರಿಸಿದ್ದಾನೆ.

- ಮೊದಲಿಗೆ ಹಿರಿಯರನ್ನು ಎಚ್ಚರಿಸಿದ್ದಾನೆ, ಏಕೆಂದರೆ ಅವರು ಜನರನ್ನು ದಾರಿ ನಡೆಸುತ್ತಿದ್ದರು. (ವ.3)
- ನಂತರ ಅಮಲೇರಿದವರನ್ನು ಮತ್ತು ರೈತರನ್ನು ಎಚ್ಚರಿಸಿದ್ದಾನೆ. (ವ.5,11)
- ಕಡೆಯಲ್ಲಿ ಎಚ್ಚರಿಸಿದ ಗುಂಪು ಯಾಜಕರು (ವ.13-20)

ಅವನು ಹೇಳಿದ ಮಾನಾಂತರ ಹೃದಯಪೂರ್ವಕವಾಗಿ ದೇವರ ಕಡೆಗೆ ತಿರುಗಿಕೊಳ್ಳುವುದು, ಅದು ಉಪವಾಸ, ಗೋಳಾಟ ಮತ್ತು ಪ್ರಲಾಪಗಳಿಂದ ಕೂಡಿರಬೇಕೆಂದು ತಿಳಿಸುತ್ತಾನೆ.

ಅವರಬಟ್ಟೆಗಳನ್ನೆಲ್ಲ ಹೃದಯಗಳನ್ನು ಹರಿಯಿರಿ ಎಂದು ಹೇಳುತ್ತಾನೆ (2:12-13). ಯಾವಾಗಲೂ ಇರುವ ಹಾಗೆ, ಜನರ ಮನಸ್ಸು ಹೊರ ನೋಟದ ಧಾರ್ಮಿಕ ಸಂಪ್ರದಾಯಗಳನ್ನು ನಂಬಿ, ಹೃದಯದ ಮೇಲೆ ಅವರ ಕಣ್ಣೋಟವನ್ನಿಡಲು ವಿಫಲರಾಗಿದ್ದರು.

ನಮ್ಮ ಹೃದಯಗಳು ದೇವರ ಕಡೆಗೆ ತಿರುಗಿಕೊಂಡಿವೆಯೊ? ನಾವು ಸುಮ್ಮನೆ ಹೊರನೋಟಕ್ಕೆ ನಮ್ಮ ಬಟ್ಟೆಗಳನ್ನು ಹರಿಯುತ್ತೇವೆಯೋ? ಅಥವಾ ನಮ್ಮ ಹೃದಯಗಳು ಸಂಪೂರ್ಣವಾಗಿ ಮುರಿದಿವೆಯೊ?

ಯಾವುದು ಮುಖ್ಯ? ಹೊರನೋಟದ ಕಾರ್ಯವೋ ಅಥವಾ ಮನೋಭಾವನೆಯೋ? ನಾವು ಯಾವುದರ ಮೇಲೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಿದ್ದೇವೆ?

**<u>ಶಿಸ್ತಿನ ನಂತರ ಬರುವ ಆಶೀರ್ವಾದಗಳು : (ಯೋವೆಲ 2:12-3:21)</u>**

- ಪೀಡೆಗಳಿಂದ ತಕ್ಷಣವೇ ಪರಿಹಾರ (2: 13-17)
- ಪವಿತ್ರಾತ್ಮವನ್ನು ಸುರಿಸುವುದು (2:28-32) ಈ ವಾಗ್ದಾನ (ಅ.ಕೃ 2:38-39) ರಲ್ಲಿ ನೆರವೇರಿತು, ಹೇಗೆಂದರೆ ಪವಿತ್ರಾತ್ಮರ ಆಗಮನ, ಮಾನಸಾಂತರಪಟ್ಟು ಯಸುಕ್ರಿಸ್ತನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡವರಿಗೆಲ್ಲಾ ಪವಿತ್ರಾತ್ಮರು ಅವರ ಹೃದಯದಲ್ಲಿ ವಾಸ ಮಾಡುವುದರಿಂದ ಸಾಧ್ಯವಾಯಿತು.
- ಯಹೂದ ಮತ್ತು ಯುಸಲೇಮಿನ ಸಂಪತ್ತನ್ನು ಸಿರಿಯನ್ನು ಪುನಃ ಸ್ಥಾಪಿಸಲಾಯಿತು (3:1-16)
- ಆದರೆ ಕೊನೆಯ ಮತ್ತು ಮಹತ್ತರವಾದ ಆಶೀರ್ವಾದ ಬರಲಿರುವ ಮೆಸ್ಸಾಯನ ವಾಗ್ದಾನ (3: 17-21)

ದೇವರ ಶಿಕ್ಷಣದ ನಂತರ ಯಾವಾಗಲೂ ಆಶೀರ್ವಾದಗಳು ಬರುವುವು. ಅದು ಹೇಗೆಂದರೆ, ದೇವರು ಅಹಂಕಾರಿಗಳನ್ನು ಚದುರಿಸಿ, ದೀನರನ್ನು ಉನ್ನತಿಗೆ ಏರಿಸುತ್ತಾರೆ. ನಾವೆಲ್ಲರೂ ಪುನಃ ಸ್ಥಾಪನಗೊಳ್ಳಲು ಆಶಿಸುತ್ತೇವೆ. ಆದರೆ ಮಾನಸಾಂತರದ ಮುಖಾಂತರವೇ ಬರುವುದು ಪುನಸ್ಥಾಪನೆ, ನಾವು ದೇವರ ಕಡೆಗೆ ತಿರುಗಿಕೊಂಡಾಗ ಅವರು ನಮ್ಮನ್ನು ತುಂಬಿತುಳುಕುವಂತೆ ಆಶೀರ್ವದಿಸುವರು.

**<u>ಅನ್ವಯ</u>** : ಕೀರ್ತನೆ 51ರ ಮೂಲಕ ಪ್ರಾರ್ಥಿಸಿರಿ.

“ನಾನು ಕಟಾಕ್ಷಿಸುವವನು ಎಂಥವನಂದರೆ: ದೀನನೂ ಮನಮುರಿದವನೂ ನನ್ನ ಮಾತಿಗೆ ಭಯ ಪಡುವವನೂ ಆಗಿರುವವನೇ' (ಯೆಶಾಯ 66:2)

--------------------------------------------------------------

## <u>ದಿನ 9</u>

**<u>ಅಮೋಸನ ಗ್ರಂಥ (ಅಮೋ 1-2)</u>**

**ಮುನ್ನುಡಿ :**

- ಆಮೊಸನೆಂದರೆ ಅರ್ಥ "ಭಾರ ಹೊರುವವನು" ಅವನು ದಕ್ಷಿಣ ಪ್ರಾಂತ್ಯದ ತೆಕೋವ ಪಟ್ಟಣದವನಾಗಿದ್ದನು.
- ಯಹೋವನು ಅವನನ್ನು ಪ್ರವಾದಿಯಾಗಿ ಆರಿಸುವ ಮುನ್ನ ಅವನು ಕುರುಬನೂ ಅತ್ತಿ ಹಣ್ಣುಗಳನ್ನು ಕೂಡಿಸುವವನೂ ಆಗಿದ್ದನು (7:14)
- ಅರಸನಾದ ಯಾರೊಬ್ಬಾಮನ ಆಳ್ವಿಕೆಯ ಸಮಯದಲ್ಲಿ ಪ್ರವಾದಿಸಿದನು.
- ಈ ಗ್ರಂಥದ ಮುಖ್ಯಾಂಶವೆಂದರೆ ಪ್ರಪಂಚದ ವಸ್ತುಗಳ ಮೇಲಿನ ಆಸೆ ಜನರನ್ನು ದೇವರಿಂದ ದೂರ ಮಾಡಿದ್ದುವು.
- ಪ್ರಪಂಚದ ವಸ್ತುಗಳ ಮೇಲಿನ ಆಸೆ ಏನು ಮಾಡುತ್ತವೆಂದು ದೇವರು ಈ ಮೊದಲೇ, ಐಗುಪ್ತ ದೇಶದಿಂದ, ವಾಗ್ದಾನ ಮಾಡಿದ ದೇಶಕ್ಕೆ ಬರುವಾಗ ಎಚ್ಚರಿಸಿದ್ದರು. (ದರ್ಮೋಪದೇಶ 6:10-12, 8:6-

14). ಆದರೂ ಮನುಷ್ಯರಾಗಿ ಪ್ರಪಂಚದ ವಸ್ತುಗಳ ಮೇಲಿನ ಆಸೆ ತುಂಬಿ ತುಳುಕುತ್ತಿರುವಾಗ, ಆತ್ಮಿಕ ವಿಷಯಗಳ ಮೇಲೆ ನಮ್ಮ ಕಣ್ಣೋಟವಿಡುವುದು ಸುಲಭ ಕಾರ್ಯವಲ್ಲ.

**<u>ಇಸ್ರಾಯೇಲಿನ ನೆರೆರಾಜ್ಯದವರ ಮೇಲೆ ತೀರ್ಪು: (ಅಮೋ 1:1-2:5)</u>**

- ದಮಸ್ಕ - ಅವರ ಪಾಪವೇನೆಂದರೆ ಗಿಲ್ಯಾದ್ ಜನರನ್ನು (ರೂಬನ್ ಮತ್ತು ಗಾದನಗೋತ್ರದವರು) ಬಹಳ ಕ್ರೂರವಾಗಿ ಬಡಿದದ್ದು. ದೇವರ ತೀರ್ಪು ನಾಶ ಮತ್ತು ಸೆರೆಯಾಗಿ ಹೋಗುವುದು.
- ಗಾಜ (ಫಿಲಿಸ್ತಿಯಾ) - ಅವರ ಪಾಪವೇನೆಂದರೆ ಅವರು ಏದೋಮಿಗೆ ಸೆರೆಯಾಳುಗಳನ್ನು ಮಾರುತ್ತಿದ್ದರು. ಅವರ ತೀರ್ಪು ಸಂಪೂರ್ಣ ನಿರ್ಮೂಲವಾಗುವುದು.
- ತೂರ್ ಪ್ರಾಂತ - ಅವರ ಪಾಪವೂ ಎದೋಮಿಗೆ ಸೆರೆಯಾಳುಗಳನ್ನು ಮಾರಿದ್ದು.
- ಎದೋಮ್ - ಅವರ ಪಾಪ ಅವರ ಸಹೋದರರನ್ನು ದ್ವೇಶಿಸಿದ್ದು.
- ಆಮೋನ್ - ಅವರ ಪಾಪ ಗಿಲ್ಯಾದಿನ ಗರ್ಭಿಣಿಯರನ್ನು ಸೀಳಿದ್ದು.
- ಮೋವಾಬ್ - ಅವರ ಪಾಪ ಎದೋಮಿನ ಅರಸನ ಎಲುಬುಗಳನ್ನು ಸುಟ್ಟಿದ್ದು,

ಆದರೆ ಇಲ್ಲಿ ಒಂದು ಆಸಕ್ತಿಯ ವಿಷಯವೇನೆಂದರೆ, ದೇವರ ದೃಷ್ಟಿಯಿಂದ ಮತ್ತು ತೀರ್ಪಿನಿಂದ ಯಾರೂ, ಯಾವತ್ತೂ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದು ಸಮಾಧಾನ ತರುವ ವಿಷಯ. ಪ್ರತಿಯೊಂದು ದುಷ್ಕೃತ್ಯ ದೇವರ ತೀರ್ಪಿಗೆ ಒಳಗಾಗುತ್ತದೆ.

**<u>ಯಹೂದ ಮತ್ತು ಇಸ್ರಾಯೇಲರ ಮೇಲೆ ತೀರ್ಪು (ಆಮೋ 2:6-16)</u>**

- ಯೆಹೂದ - ಅವರ ಪಾಪ ದೇವರ ಕಟ್ಟಳೆಗಳನ್ನು ನಿರಾಕರಿಸಿ, ಅಧರ್ಮಿಗಳ ವಿಗ್ರಹಾರಧನೆ ಮಾಡಿದ್ದು,
- ಇಸಾಯಲ್ - ಬಹಳ ಪಾಪಗಳ ಪಟ್ಟಿಯಿದೆ. ಅ) ಸಾಮಾಜಿಕವಾಗಿ ಬಡವರ ಶೋಷಣೆ, ಆ) ಬಹಳ ಹೀನವಾದ ವ್ಯಭಿಚಾರ, ಇ) ವಿಗ್ರಹಾರಾದನೆ, ಮತ್ತು ಈ) ದೇವರ ಅಧಿಕಾರವನ್ನು ಪ್ರತಿಭಟಿಸಿದರು.
- ಅವರ ದಂಡನೆ - ಆಕ್ರಮಣಕಾರರಿಂದ ಮತ್ತು ನಾಶದಿಂದ ತಪ್ಪಿಸಿ ಓಡಿಹೋಗಲು ಅವರು ಅಸಮರ್ಥರಾದರು.
- ಈ ಪ್ರವಾದನೆಯು ಕ್ರಿ.ಪೂ. 722ರಲ್ಲಿ ಅಸ್ಸೀರಿಯದವರು ಇಸ್ರಾಯೇಲಿನ ಉತ್ತರ ಪ್ರಾಂತ್ಯವನ್ನು ಆಕ್ರಮಣ ಮಾಡಿ, ಸೆರೆ ಹಿಡಿದಾಗ ನೆರವೇರಿತು. (1 ಅರಸ 17:5-23)

ದೇವರು ತಾನು ಒಡಂಬಡಿಕೆ ಮಾಡಿದ ಜನರೊಡನೆ ಮಾತ್ರವಲ್ಲದೆ ನೆರೆಹೊರೆಯ ದೇಶಗಳ ಬಗ್ಗೆ ಕೂಡ ಕಾಳಜಿಯಿಂದಿದ್ದರು. ದೇವರು ಮಾತ್ರವೇ ಒಬ್ಬ ನೀತಿವಂತ ನ್ಯಾಯಾಧಿಪತಿ.

ದೇವರು ಮನುಷ್ಯರನ್ನು ಅವರವರ ಪಾಪಗಳಿಗೆ ಲೆಕ್ಕ ಕೇಳುತ್ತಾನೆ. ನೀತಿವಂತರಾಗಿ ನಡೆಯಲು ದೇವರ ವಾಕ್ಯ ನಮ್ಮನ್ನು ಪ್ರೇರೇಪಿಸಲು ನಾವು ಮನಃಪೂರ್ವಕವಾಗಿ ಒಪ್ಪಿದ್ದೇವೆಯಾ?

**<u>ಅನ್ವಯ</u>** : ಈಗ ನಿಮ್ಮ ಜೀವನದಲ್ಲಿ ದೇವರು ಕಾಳಜಿ ಮಾಡುವ ಒಂದು ಮುಖ್ಯ ವಿಷಯ ಯಾವುದಿರಬಹುದು?

“ದೇವರಿಗೆ ಭಯಪಡು ಮತ್ತು ಆತನ ಆಜ್ಞೆಗಳನ್ನು ಪಾಲಿಸು. ಏಕೆಂದರೆ ಇದೇ ಮನುಷ್ಯನ ಪ್ರಮುಖ ಕರ್ತವ್ಯ” (ಪ್ರಸಂಗಿ 12:13)

------------------------------------------------------------

## ದಿನ 10

ಆಮೋಸನ ಗ್ರಂಥ : (ಆಮೋ 3-4)

**ಇಸ್ರಾಯೇಲ್ ಪೂರ್ಣವಾಗಿ ಕೊಳ್ಳೆ ಹೋಗುವುದು : (ಆಮೋ 3:1-15).**

ಈ ಅಧ್ಯಾಯದಲ್ಲಿ ಪ್ರತಿ ವಚನಗಳಲ್ಲಿ ಕೊಟ್ಟಿರುವ 'ಭೋದನೆಗಳತ್ತ' ನಮ್ಮ ಗಮನವನ್ನು ಹರಿಸೋಣ. ದೇವರು ಇಸ್ರಾಯೇಲಿನ ವಿರುದ್ದ ಮಾತನಾಡಿದ್ದಾರೆ.

- ದೇವರು ಅವರೊಡನೆ ವಿಶೇಷ ಸಂಭಂದವನ್ನಿರಿಸಿಕೊಂಡಿದ್ದರು (3:1-2)
- ಈಗ ಅವರ ಎಲ್ಲಾ ಅಕ್ರಮಣಗಳಿಗಾಗಿ ಶಿಕ್ಷಿಸುತ್ತಾರೆ.
- ದೇವರು ನಿಶ್ಚಯವಾಗಿ ತನ್ನ ಪ್ರವಾದಿಗಳಿಂದ ತನ್ನ ಯೋಜನೆಗಳನ್ನು ತಿಳಿಸದೆ, ಏನನ್ನೂ ಮಾಡುವುದಿಲ್ಲ (3:7-6)
- ಸಿಂಹವು ಗರ್ಜಿಸಿದ ಪ್ರಕಾರ, ದೇವರು ಅಮೊಸನಿಗೆ ಪ್ರವಾದನೆಯನ್ನು ಮಾಡಲು ಗರ್ಜಿಸಿದ್ದಾರೆ.
- ದೇವರು ಅಷ್ಡೋದ್ ಮತ್ತು ಐಗುಪ್ತದವರನ್ನು ಇಸ್ರಾಯೇಲಿನ ದುಷ್ಕೃತ್ಯಗಳ ವಿರುದ್ದ ಸಾಕ್ಷಿ ಹೇಳಲು ಕರೆದಿದ್ದಾರೆ. (3:9-10)
- ಇಸ್ರಾಯೇಲ್ ಒಬ್ಬ ವಿರೋಧಿಯಿಂದ ಕೊಳ್ಳೆ ಹೋಗುವುದು (3:11-15)

ನಾವು ಬಹಳ ಬೇಗನೆ ದೇವರ ವಾಕ್ಯಗಳಿಗೆ ಕಿವಿಗೊಡುತ್ತಿದ್ದೇವೆಯೇ? ದೇವರು ಅವರ ಯೋಜನೆಗಳನ್ನೆಲ್ಲಾ ಅವರ ವಾಕ್ಯಗಳ ಮೂಲಕ ನಮಗೆ ಬಹಿರಂಗ ಪಡಿಸಿದ್ದಾರೆ. ಆದರೆ ನಾವು ಅವರ ಯೋಜನೆಗಳನ್ನು ಮತ್ತು ವಾಗ್ದಾನಗಳನ್ನು ನಂಬುತ್ತಿದ್ದೇವೆಯೇ? ಯಾರು ದೇವರ ಕೋಪಾಗ್ನಿಗೆ ಎದುರಾಗಿ ನಿಲ್ಲುವರು? ಯಾರು ಕ್ರಿಸ್ತನಲ್ಲಿದ್ದಾರೋ ಅವರು ಮಾತ್ರವೇ ದೇವರ ನ್ಯಾಯತೀರ್ಪಿನಿಂದ ಸುರಕ್ಷಿತವಾಗಿ ಪಾರಾಗಬಲ್ಲೆವು.

**ಸಾಮಾರ್ಯರ ಸ್ತ್ರೀಯರ ಖಂಡನೆ (ಆಮೋ 4:1-3)**

ಇಸ್ರಾಯೆಲಿನ ಮಹಿಳೆಯರನ್ನು "ಬಾಷಾನಿನ ಕೊಬ್ಬಿದ ಹಸುಗಳು" ಎಂದು ಕರೆದು, ಅವರು ಎಂದಿಗೂ ತೃಪ್ತಿಹೊಂದರು ಎಂದು ಹೇಳಿದ್ದಾರೆ.

- ಅವರು ಬಡವರನ್ನು ಮತ್ತು ದರಿದ್ರರನ್ನು ಹಿಂಸಿಸುತ್ತಿದ್ದರು (4:1)
- ಪಾನವನ್ನು ತರಿಸಿ ಕುಡಿಯಲು ಆತುರದಿಂದಿದ್ದರು (4:2)

ದೇವರು ಅವರಿಗೆ ತಾತ್ಸಾರವಾಗಿ ಬೇತೇಲ್ ಮತ್ತು ಗಿಲ್ಗಲ್ನಲ್ಲಿರುವ ಸುಳ್ಳುದೇವರುಗಳಿಗೆ ಹೋಗಿ ಯಜ್ಞಗಳನ್ನು ಅರ್ಪಿಸಿರಿ ಎಂದು ಹೇಳುತ್ತಿದ್ದಾರೆ (4:4-5) ಇದನ್ನು ಏಕೆ ಹೇಳಿದರೆಂದರೆ, ದೇವರಿಂದ ಅವರೆಷ್ಟು ದೂರ ಸರಿದಿದ್ದಾರೆ ಎಂದು ಅವರಿಗೆ ತೋರಿಸಲು. ಆದರೂ ಇಸ್ರಾಯೇಲ್ ಮಾನಸಾಂತರಪಟ್ಟು ದೇವರ ಕಡೆಗೆ ತಿರುಗಿಕೊಳ್ಳಲು ವಿಫಲವಾಯಿತು. ದೇವರ ಕರೆಯನ್ನು ನಿರಾಕರಿಸಿದರು.

### ದೇವರ ಶಿಕ್ಷೆ:

- ಬರ (4:6),
- ಮಳೆಯಿಲ್ಲದಿರುವುದು (4:7-8)
- ಮಾರಕ ಪೀಡೆಗಳು (4:9)

- ಅಂಟುಜಾಡ್ಯಗಳು ಮತ್ತು ಯುದ್ಧಗಳು (4:10)
- ಭೂಕಂಪಗಳು (4:11)

ದೇವರು ಪ್ರಾಕೃತಿಕ ದುರ್ಘಟನೆಗಳಿಂದ ಅವರ ಗಮನವನ್ನು ಸೆಳೆಯಲು ಯತ್ನಿಸಿದರು. ಆದರೂ ಅವರು ಯಾಕೆ ದೇವರ ಪ್ರಯತ್ನಗಳಿಗೆ ಲಕ್ಷ್ಯಕೊಡಲಿಲ್ಲ? ಬಹುಶಃ ಅವರೆಣಿಸಿರಬಹುದು, ಈ ಘಟನೆಗಳೆಲ್ಲಾ ಸಾಮಾನ್ಯವಾಗಿ ಸಂಭವಿಸುತ್ತವೆ. ಅದರಲ್ಲಿ ಏನೂ ವಿಶೇಷವಿಲ್ಲ ಎಂದೆಣಿಸಿರಬೇಕು. ನಾವು ಕೂಡ ನಮ್ಮ ಜೀವನದಲ್ಲಿ ನಡೆಯುವ ಕೆಲವು ದುರ್ಘಟನೆಗಳಲ್ಲಿ ದೇವರು ನಮಗೆ ಏನನ್ನೋ ಹೇಳಲು ಮತ್ತು ಕಲಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಸತ್ಯ ಅಂಗೀಕರಿಸಲು ಸಿದ್ಧರಾಗಿದ್ದೇವೆಯೇ?

ದೇವರ ಏಷ್ಟೋ ಎಚ್ಚರಿಕೆಗಳಿಗೆ ಗಮನಕೊಡದಿದ್ದರಿಂದ ದೇವರ ತೀರ್ಪನ್ನು ಅವರು ಎದುರಿಸಲು ತಯಾರಾಗಬೇಕಾಯಿತು.

**<u>ಅನ್ವಯ</u>** : ನೀವು ಮೇಲೆ ಹೇಳಿದ ಒಂದು ದುರ್ಘಟನೆಗಳಲ್ಲಿ ಇದ್ದೀರೆಂದು ಊಹಿಸಿ, ಆಗ ನಿಮ್ಮ ಮನಸ್ಸಿಗೆ ಬರುವ ಭಾವನೆಗಳಾವುವು?

“ಹೀಗಿರುವುದರಿಂದ ದೇವರ ಪರಾಕ್ರಮವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ ಆಗ ಆತನು ನಿಮ್ಮನ್ನು ಮೇಲಕ್ಕೆತ್ತುವನು ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ ಆತನು ನಿಮಗೋಸ್ಕರ ಚಿಂತಿಸುತ್ತಾನೆ"(1 ಪೇತ್ರ 5:6-7)

------------------------------------------------------------

## <u>ದಿನ 11</u>

ಅಮೋಸನ ಗ್ರಂಥ : (ಅಮೋ 5-6)

**<u>ಇಸ್ರಾಯೇಲಿಗೆ ಒಂದು ಪ್ರಲಾಪ (ಅಮೋ 5:1-17)</u>**

ಇಸ್ರಾಯೇಲ್ಯರನ್ನು ಬರಲಿರುವ ಅವನತಿಗೋಸ್ಕರ ಪ್ರಲಾಪಿಸಲು ಕರೆದಿದ್ದಾರೆ (1-2), ಕೇವಲ ಕೆಲವೇ ಜನರು ಉಳಿಯುವರು (ವ.3), ಆದರೂ ದೇವರು ಅವರನ್ನು ಪಶ್ಚಾತ್ತಾಪಕ್ಕಾಗಿ ಕರೆಯುತ್ತಿದ್ದಾರೆ, ಏಕೆಂದರೆ ಅವರಲ್ಲಿ ನಿರೀಕ್ಷೆಯಿದೆ.

- ದೇವರನ್ನು ಆಶ್ರಯಿಸಿ ಬದುಕಿಕೊಳ್ಳಬಹುದು (4-7)
- ಬಲಿಷ್ಠನಾದವನು ಅವನೊಬ್ಬನೇ, ಅವನನ್ನು ಹುಡುಕಿರಿ (8-9)
- ನಮ್ಮೆಲ್ಲಾ ದೋಷಗಳು ಆತನಿಗೆ ತಿಳಿದಿವೆ (10-13)
- ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಆಸಕ್ತಿಯಿಂದ ಮಾಡಿರಿ, ಪ್ರಾಯಶಃ ಆಗ ಸರ್ವಶಕ್ತನಾದ ಯೇಹೂವನು ಕನಿಕರಿಸುವನು (11-15)

ಈ ದಿನ ನಾವು ದೇವರನ್ನು ಹುಡುಕುತ್ತಿದ್ದೇವೆಯೇ? ನಮ್ಮ ಜೀವನವು ನಾವು ಆಸಕ್ತಿಯಿಂದ ದೇವರನ್ನು ಹುಡುಕುವವರೆಂದು ತೋರಿಸುತ್ತಿದೆಯೇ? ನಾವು ದೇವರನ್ನು ಆಶ್ರಯಿಸಿ ಜೀವಿಸಬಲ್ಲೆವಾ?

ದೇವರನ್ನು ಹುಡುಕುವುದೆಂದರೆ ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಆಸಕ್ತಿಯಿಂದ ಮಾಡುವುದು ಎಂದರ್ಥ.

**<u>ಯೆಹೋವನ ದಿನ : (ಅಮೋ 5:18-6:14)</u>**

ದೇವರ ದಿನವು ಹತ್ತಿರ ಬರುತ್ತಿದೆ. ಆಗ ಎಲ್ಲಾ ಬೀದಿಗಳಲ್ಲೂ ತೋಟಗಳಲ್ಲೂ ಗೋಳಾಟವಿರುವುದು.

- ದೇವರ ದಿನವನ್ನು ದುಷ್ಟರು ಅಪೇಕ್ಷಿಸುವುದಿಲ್ಲ, ಏಕೆಂದರೆ ಆ ದಿನ ಅವರಿಗೆ ಬೆಳಕಲ್ಲ, ಕತ್ತಲೆಯ ದಿನಾವಾಗಿದೆ (18-20)
- ದೇವರು ಅವರ ತೋರ್ಪಡಿಸುವ ಧಾರ್ಮಿಕತೆಯನ್ನು ಎದುರಿಸುತ್ತಾರೆ, ಏಕೆಂದರೆ ಅಲ್ಲಿ ನ್ಯಾಯ ಮತ್ತು ನೀತಿ ದೇವರಿಗೆ ಕಾಣಸಿಗಲಿಲ್ಲ. (21-24)
- • ಏಕೆಂದರೆ ಅವರು ಮರುಭೂಮಿಯಲ್ಲಿ ನಲವತ್ತು ವರ್ಷವಿದ್ದಾಗಲೂ ಕೂಡ ನಿಜವಾಗಿ ದೇವರನ್ನು ಸೇವಿಸಲಿಲ್ಲ (25-26)
- * ಆದ್ದರಿಂದ ದಮಸ್ಕದ ಆಚೆ ತಳ್ಳಿ, ಅವರನ್ನು ಸೆರೆ ಕಳುಹಿಸಿದನು (25-27)
- ಸಾಮಾರ್ಯದ ಬೆಟ್ಟಗಳನ್ನು ನಂಬಿ, ಅವು ಕಾಪಾಡುತ್ತವೆಂದು ಎಣಿಸಿ ಹಾಯಾಗಿರುವವರೇ ಅಯ್ಯೋ ನಿಮಗೆ ಕೇಡು (6 :1-2)
- ದೇವರ ದಿನ ಇನ್ನೂ ತುಂಬಾ ದೂರವಿದೆ ಎಂದು ಕೊಂಡು, ನಿಮ್ಮ ಸಹೋದರರ ಕಷ್ಟಗಳಿಗೆ ಮರುಗದೆ, ಸುಖಭೋಗಗಳಲ್ಲಿ ಲೋಲಾಡುವವರೇ ಅಯ್ಯೋ ನಿಮಗೆ ಕೇಡು (6:3-6)
- ಏಕೆಂದರೆ ಸೆರೆ ಹಿಡಿಯಲ್ಪಟ್ಟವರಲ್ಲಿ ಅವರೇ ಮೊದಲಿಗರಾಗುವರು (6:7)
- ದೇವರು ಅವರ ಅಟ್ಟಹಾಸಕ್ಕೆ ಅಸಹ್ಯಪಟ್ಟುಕೊಂಡು ಅವರನ್ನು ಈ ನಾಶಕ್ಕೆ ಗುರಿ ಮಾಡಿದ್ದಾನೆ (6:8)
- ಈ ಸರ್ವನಾಶ ಹೇಗೆಂದರೆ, ಕೇವಲ ಕೆಲವೇ ಮಂದಿ ಉಳಿಯುವರು ಮತ್ತು ಅವರ ಮನೆಗಳೆಲ್ಲಾ ಉರಿದು ಭಸ್ಮವಾಗುವುವು (6:9-11)
- ಅವರು ದೇವರ ನ್ಯಾಯವನ್ನು ವಿಷಮಾಡಿ, ನೀತಿಯನ್ನು ಕಹಿ ಮಾಡಿದರು ಮತ್ತು ಅವರ ಸ್ವಂತ ಬಲದ ಬಗ್ಗೆ ಹೆಮ್ಮೆ ಪಟ್ಟುಕೊಂಡರು (6:12-13)

ನಮ್ಮ ಜೀವನದಲ್ಲಿ ಕೂಡ ದೇವರ ದಿನ ಶೀಘ್ರ ಬರಲಿದೆ. ಅದು ನ್ಯಾಯತೀರ್ಪಿನ ದಿನ ಆ ದಿನ ನಾವು ನಮ್ಮ ಜೀವನದ ಬಗ್ಗೆ ದೇವರಿಗೆ ಲೆಕ್ಕ ಒಪ್ಪಿಸಬೇಕಾಗಿದೆ. ಆ ದಿನವನ್ನು ನಾವು ಹೇಗೆ ಎದುರಿಸುತ್ತೇವೆ? ನಮ್ಮನ್ನು ಸುರಕ್ಷೆ ಮಾಡುವುದು ಯಾವುದು? ಈ ಪಶ್ಚಾತ್ತಾಪದ ಕರೆ ನಮಗೂ ಕೂಡ ಆಗಿದೆಯಾ? ನಂಬಿಕೆ ಮತ್ತು ವಿಧೇಯತೆಯಿಂದ ದೇವರನ್ನು ಹುಡುಕಿರಿ. "ದೇವರನ್ನು ಆಶ್ರಯಿಸಿ ಬದುಕಿಕೊಳ್ಳಿರಿ'

**<u>ಅನ್ವಯ</u>** : ನಿಮ್ಮ ಪ್ರಾರ್ಥನಾ ಜೀವನದಲ್ಲಿ ಬದಲಾವಣೆ ಮಾಡುವುದಾಗಿ ಈ ವಾರ ಪ್ರತಿಜ್ಞೆ ಮಾಡಿ (ಮೊಣಕಾಲೂರಿ ಪ್ರಾರ್ಥನೆ ಮಾಡುವುದು, ಬೆಳಗಿನ ಜಾವ ಪ್ರಾರ್ಥನೆ, ಹೊರಗೆ ನಡೆದಾಡುವಾಗ ಪ್ರಾರ್ಥನೆ, ವಿಶೇಷ ಸ್ಥಳಗಳಲ್ಲಿ ಪ್ರಾರ್ಥನೆ) ಹೀಗೆ ಅನೇಕ ಬದಲಾವಣೆಗಳನ್ನು ಮಾಡಿ ಪ್ರಾರ್ಥನೆಯನ್ನು ಸ್ವಾರಸ್ಯ ಪಡಿಸಬಹುದು.

"ಇಕ್ಕಟ್ಟಾದ ಬಾಗಿಲಿನಿಂದ ಒಳಗೆ ಪ್ರವೇಶಿಸುವುದಕ್ಕೆ ಪ್ರಯಾಸ ಪಡಿರಿ, ಅನೇಕರು ಒಳಗೆ ಪ್ರವೇಶಿಸುವುದಕ್ಕೆ ಪ್ರಯತ್ನಿಸಿದರೂ ಆಗುವುದಿಲ್ಲ ಎಂದು ನಾನು ನಿಮಗೆ ಹೇಳುತ್ತೇನೆ' (ಲೂಕ 13:24)

------------------------------------------------------------

**<u>ದಿನ 12</u>**

ಅಮೊಸನ ಗ್ರಂಥ : (ಅಮೋ 7-8)

**ಮಿಡತೆಗಳ ದರ್ಶನ (ಅಮೋೀಸ 7:1-3)**

ಸಾಲಾಗಿ “ದರ್ಶನಗಳನ್ನು” ಅಮೋಸ ಕಂಡನು. ಆದರ್ಶನಗಳಲ್ಲಿ ಮೊದಲುಮಿಡಿತೆ ದರ್ಶನ- ದೇವರು ಆಮೋಸನಿಗೆ ಹೇಗೆ ಮಿಡಿತಗಳು ಎಲ್ಲಾ ಬೆಳೆಗಳನ್ನು ತಿಂದು ಸರ್ವನಾಶವನ್ನುಂಟು ಮಾಡುವುದನ್ನು ತೋರಿಸಿದರು. ಆಗ ಆಮೋಸ್ ಯಾಕೋಬನ ಪರವಾಗಿ ದೇವರಲ್ಲಿ ಮೊರೆಯಿಟ್ಟನು, ಆಗ ದೇವರು ದಯೆತೋರಿ, ಆ ಮಿಡಿತೆಗಳ ಹಾನಿ ನೆರವೇರುವುದಿಲ್ಲ ಎಂದರು.

**ಬೆಂಕಿಯ ದರ್ಶನ (ಅಮೋೀ 7:4-6)**

ನಂತರ ದೇವರು ಅಮೋಸನಿಗೆ ಬೆಂಕಿಯ ದರ್ಶನ ತೋರಿಸಿದರು. ಆ ಬೆಂಕಿ "ಅಗಾಧವನ್ನು ನುಂಗಿ ದೇಶವನ್ನು ತಿಂದು ಬಿಟ್ಟಿತು", ಪುನಃ ಆಮೋಸನು ಇಸ್ರಾಯೇಲಿನ ಪರವಾಗಿ ಮೊರೆಯಿಟ್ಟನು. ಆಗ ದೇವರು ಮತ್ತೆ ಮನಮರುಗಿ “ಈ ದರ್ಶನವೂ ನೆರವೇರುವುದಿಲ್ಲ' ಎಂದರು.

**ನೂಲುಗುಂಡಿನ ದರ್ಶನ (ಅಮೋೀ 7:7-9)**

ಈ ದರ್ಶನದಲ್ಲಿ ದೇವರು ಒಂದು ಗೋಡೆಯ ಮೇಲೆ ನೂಲುಗುಂಡನ್ನು ಹಿಡಿದು ನಿಂತಿದ್ದಾರೆ. ಕರ್ತರು ವಿವರಿಸಿ ಹೇಳಿದ್ದೇನೆಂದರೆ, ಅವರು ಅವರ ಮತ್ತು ಇಸ್ರಾಯೇಲರ ನಡುವೆ ನೂಲುಗುಂಡನ್ನು ಇಟ್ಟು ದೇವರು ಅದನ್ನು ದಾಟಿ ಹೋಗುವುದಿಲ್ಲ, ಅದರಿಂದ ನಾನಾತರದ ಸಂಕಷ್ಟಗಳು ಇಸ್ರಾಯೇಲಿಗೆ ಬರುವುವು. ಇಸ್ರಾಯೇಲರ ಎಲ್ಲಾ ವಿಗ್ರಹಾರಾಧನೆಯ ಸ್ಥಳಗಳು ನಾಶವಾಗುವುವು ಮತ್ತು ಯಾರೊಬ್ಬಾಮನ ಮನತನವೂ ನಾಶವಾಗುವುದು. ಬೆತೇಲ್ (ವಿಗ್ರಹಾರಾಧನೆಯ ಪ್ರಮುಖ ಸ್ಥಳ) ಯಾಜಕನಾದ ಅಮಾಚ್ಯನು, ಇಸ್ರಾಯೇಲಿನ ಅರಸನಾದ ಯಾರೋಬಾಮನಿಗೆ ಹೇಳಿದ್ದೇನೆಂದರೆ, “ಅಮೋಸ ನಿನಗೆದುರಾಗಿ ಒಳಸಂಚು ಮಾಡಿದ್ದಾರೆ'' ಎಂದು (7:10-11). ಅಮಾಚ್ಯನು ಅಮೋಸನಿಗೆ ಬೆತೇಲ್ಲನ್ನು ಬಿಟ್ಟು ಯೆಹೂದಕ್ಕೆ ಓಡಿಹೋಗೆಂದು ಹೇಳಿದನು (7:12-13) ಆದರೆ ಅಮೋಸನು ತನ್ನ ಪ್ರವಾದನೆಯ ಗುರಿಯನ್ನು ವಿವರಿಸಿ (7:14-15) ನಂತರ ಅಮಾಚ್ಯನ ಮತ್ತು ಇಸ್ರಾಯೇಲಿನ ವಿರುದ್ಧ ಪ್ರವಾದನೆಗಳನ್ನು ಹೇಳಿದನು (7:16-17).

**ಮಾಗಿದ ಹಣ್ಣುಗಳ ದರ್ಶನ (ಅಮೋೀ 8:1-14).**

ಈಗ ಅಮೋಸನಿಗೆ ಮಾಗಿದ ಹಣ್ಣುಗಳುಳ್ಳ ಒಂದು ಬುಟ್ಟಿ ತೋರಿಸಲಾಯಿತು. ಎಲ್ಲಾ ಹಣ್ಣುಗಳೂ ಮಾಗಿದ್ದುವು. ಯೆಹೋವನು ಅಮೋಸನಿಗೆ ಇಸ್ರಾಯೇಲರ ಅಂತ್ಯವು ಬಂತು, ಅವರು ನ್ಯಾಯ ತೀರ್ಪಿಗೆ ಮಾಗಿದ್ದಾರೆ ಎಂದು ವಿವರಿಸಿದನು.

**ಯೆಹೋವನ ಬಲಿಪೀಠದ ಪಕ್ಕದಲ್ಲಿ ನಿಂತಿರುವ ದರ್ಶನ : (ಅಮೋೀ 9:1-15).**

ಬಲಿಪೀಠವು ನಾಶವಾಗಿ, ಯಾರು ತಪ್ಪಿಸಿ ಓಡಿಹೋಗಲು ಸಾಧ್ಯವಿಲ್ಲ (9:1-4). ಇಸ್ರಾಯೇಲ್ ದೇಶವು ಸಂಪೂರ್ಣವಾಗಿ ನಾಶವಾಗುವುದು. ಆದರೆ ಕೇವಲ ಕೆಲವೇ ಮಂದಿ ಉಳಿಯುವರೆಂದು, ಮತ್ತು ಅವರ ಪುನಸ್ಥಾಪನೆಯನ್ನು ಇಲ್ಲಿ ಭವಿಷ್ಯವಾಣಿ ಹೇಳಿದೆ.

ನ್ಯಾಯ ತಿರ್ಪೆ ಕೊನೆಯಲ್ಲ ಆದರೆ ಅದರ ನಂತರ ನಮಗೆ ದೇವರಲ್ಲಿ ನಿರೀಕ್ಷೆಯಿದೆ.

ದೇವರು ಇಸ್ರಾಯೇಲಿಗೆ ಕಲಿಸಿದ ಒಂದು ಪಾಠವೇನೆಂದರೆ, ವಿಧೇಯತೆಗೆ ಯಾವಾಗಲೂ ಅಶೀರ್ವಾದಗಳಿವೆ, ಆದರೆ ಅವಿಧೇಯತೆಗೆ ಯಾವಾಗಲೂ ಶಿಕ್ಷೆಯಿದೆ. ಇದು ಇಸ್ರಾಯೇಲಿಗೆ ಮಾತ್ರವಲ್ಲ

ಒಬ್ಬೊಬ್ಬ ವ್ಯಕ್ತಿಗೂ ಅನ್ವಯವಾಗುತ್ತದೆ. ಮತ್ತು ಸಭೆಗೂ ಅನ್ವಯಿಸುತ್ತದೆ. ಕ್ರೈಸ್ತರಾದ ನಾವು ನಮ್ಮನ್ನೇ ತಗ್ಗಿಸಿಕೊಂಡು, ಪ್ರಾರ್ಥಿಸಿ, ದೇವರನ್ನು ಹುಡುಕುತ್ತೇವಾ? ನಮ್ಮ ಕೆಟ್ಟ ದಾರಿಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳುತ್ತೇವಾ? ಇಲ್ಲದಿದ್ದರೆ ನಾವು ಕೂಡ ನ್ಯಾಯ ತೀರ್ಪಿಗೆ ಒಳಗಾಗುತ್ತೇವೆ. ಪರಿಶುದ್ಧವಾದ ಯೆಹೋವನು ಅವರನ್ನು ಹಿಂಬಾಲಿಸುವ ಪ್ರತಿಯೊಬ್ಬರಲ್ಲಿ ಪರಿಶುದ್ಧತೆಯನ್ನು ಅಪೇಕ್ಷಿಸುತ್ತಾನೆ.

ಕೊನೆಯದಾಗಿ, ಇಲ್ಲಿ ಕೃಪೆಯ ಪಾಠವಿದೆ. ದೇವರು ನಮ್ಮೊಡನೆ ದಯಾಮಯನಾಗಿ ನಡೆದುಕೊಂಡಿದ್ದಾನೆ. ಅವರು ಇಸ್ರಾಯೇಲಿನೊಂದಿಗೂ ಕೊನೆಗೆ ದಯಾಮಯನಾಗಿ ವ್ಯವಹರಿಸಿದರು.

ಅವರು ಸಭೆಯೊಂದಿಗೂ ಕೂಡ ದಯಾಮಯನಾಗಿ ವರ್ತಿಸುತ್ತಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ದೇವರ ಕೃಪೆಗೆ ನಾವು ಯಾವ ರೀತಿ ಪ್ರತಿಕ್ರಿಯಿಸುತ್ತೇವೆ? ಅದನ್ನು ಅಂಗೀಕರಿಸುತ್ತೇವಾ? ಅಥವಾ ಅದರಿಂದ ದೂರ ಹೋಗುತ್ತೇವಾ?

**<u>ಅನ್ವಯ</u>**: ದೇವರ ರಾಜ್ಯದಲ್ಲಿ ಒಬ್ಬ ಶಿಷ್ಯನಾಗಿ ನಿನಗಿರುವ ದರ್ಶನವೇನು?

“ಏಕೆಂದರೆ ಯೆಹೋವನಿಗೆ ಪೂರ್ಣವಾಗಿ ಸಮರ್ಪಿಸಿ ಕೊಂಡವರ ಹೃದಯವನ್ನು ಬಲಪಡಿಸುವುದಕ್ಕೆ ಆತನ ಕಣ್ಣುಗಳು ಭೂಲೋಕದ ಎಲ್ಲಾ ಕಡೆ ದೃಷ್ಟಿಯನ್ನು ಪ್ರಸರಿಸುತ್ತಿವೆ." (2 ಪೂರ್ವಕಾಲವೃತ್ತಾಂತ 16:9)

-------------------------------------------------------------

## <u>ದಿನ 13</u>

ಓಬದ್ಯನ ಪುಸ್ತಕ (ಓಬದ್ಯ - 01)

### ಮುನ್ನುಡಿ

- ಓಬದ್ಯನ ಹೆಸರಿನ ಅರ್ಥ 'ದೇವರಿಗೆ ದಾಸನು'
- ಈ ಪ್ರವಾದಿಯ ಬಗ್ಗೆ ಬಹಳ ಮಾಹಿತಿಯಿಲ್ಲ, ಆದರೆ ಕೆಲವು ಮಾಹಿತಿಯನ್ನು 21 ವಚನಗಳಲ್ಲಿ ಕಾಣಬಹುದು. (ಇಬ್ರುವಿನ ಪವಿತ್ರ ಗ್ರಂಥದಲ್ಲಿ ಈ ಪುಸ್ತಕ ಬಹಳ ಚಿಕ್ಕದು. )
- ಈ ಪುಸ್ತಕ ದೇವರ ವಾಕ್ಯದ್ದಾಗಿದೆ. ಇದೋಮಿಗೆ ಸಂಬಂಧ ಪಟ್ಟಿದೆ. ಅವರು ಇಸಾಕನ ಜನಾಂಗ ಅಥವಾ ವಂಶವಳಿಯವರು.
- ಪ್ರತೀಕಾರ ಮತ್ತು ಹೊಟ್ಟೆಕಿಚ್ಚು ಇದೊಮ್ಯರಿಗೆ ಇಸ್ರಾಯೇಲ್ಯರ ಮೇಲೆ ಹುಟ್ಟಿದ್ದು ಯವಾಗ ಅಂದರೆ, ಇಸಾಕನು ತನ್ನ ಜೇಷ್ಠ ಪುತ್ರನ ಹಕ್ಕನ್ನು ಯಾಕೋಬನಿಗೆ ಮಾರಿದ್ದು ಮತ್ತು ಮೋಸಹೋಗಿದ್ದು (ಆದಿಕಾಂಡ 25:27-31)
- ಇಸ್ರಾಯೇಲ್ಯರು ಈಜಿಪ್ಟ್ ದೇಶದಿಂದ ಹೊರ ಬಂದಾಗ (ವಿಮೋಚನಕಾಂಡ) ಎರಡು ರಾಜ್ಯಗಳ ನಡುವೆ ಜಗಳ ಉಂಟಾಯಿತು (ಅರಣ್ಯ ಕಾಂಡ 20). ಓಬದ್ಯನ ಪ್ರವಾದನೆಯ ಪ್ರಕಾರ, ಇದ್ಯೋಮಿನ ರಾಜ್ಯ ನಿರಂತರವಾಗಿ ನಾಶವಾಗುವುದು (ವಚನ 10), ಅದರಂತೆಯೇ ಕ್ರಿ.ಶ. 100 ರಷ್ಟರಲ್ಲಿ ಸಂಪೂರ್ಣವಾಗಿ ಮಾಯವಾಗಿಬಿಟ್ಟಿತು.

**<u>ಬೀಳುವುದಕ್ಕೆ ಮುಂಚಿತವಾಗಿ ಅಹಂಕಾರ ಬರುತ್ತದೆ. (ಓಬದ್ಯ 1-14)</u>**

- ಅವರ ಜಂಬ ಅವರನ್ನೇ ಮೋಸ ಮಾಡಿತು ಅಂದರೆ, ಖಂಡಿತವಾಗಿ ನಾಶವಾಗುವುದಿಲ್ಲ ಎಂಬ ಆಲೋಚನಗಳು ಅವರ ಮನಸ್ಸಿನಲ್ಲಿ ಉಂಟಾಯಿತು.
- ಅವರ ಸ್ಥಳದ ಬಗ್ಗೆ ಜಂಬದಿಂದಿದ್ದರು. "ಬಂಡೆಯ ಬಿರುಕುಗಳಲ್ಲಿ ವಾಸಮಾಡುವದು" ಎತ್ತರ ಸ್ಥಳಗಳಲ್ಲಿ ನಿವಾಸ ಮಾಡಿಕೊಂಡದ್ದು
- ಅವರ ಮಧ್ಯದಲ್ಲಿ ಬುದ್ಧಿವಂತರು ಇದ್ದುದರಿಂದ ಅಹಂಕಾರವಿತ್ತು.
- ಅವರಲ್ಲಿ ವೀರ ಸೈನಿಕರಿದ್ದಾರೆಂಬ ಜಂಬವು ತನ್ನಲ್ಲೇ ನಾಶನ ಎಂಬ ಬೀಜಗಳನ್ನು ಬಿತ್ತಿತು.

ಅಹಂಕಾರ ಅಂದರೆ ಸೈತಾನನು ನಮ್ಮ ಜೇಬಿನಲ್ಲಿಡುವ ಸಮಯದ ಸಿಡಿಗುಂಡಿನ ಹಾಗೆ, ಏನು ಭಯಾನಕ ಅಂದರೆ ಅದರ ಉದ್ದದ ನಾಶನದ ಪರಿಣಾಮ!

ಅದು ವೇಗವಾಗಿ ಅಥವಾ ಮೆಲ್ಲಗೆ ಬರಬಹುದು, ಅಹಂಕಾರ ಯಾವಾಗಲು ಬರುವುದು ನ್ಯಾಯ ತೀರ್ಪಿನ ದಿನದ ಹಿಂದೆ ಅಲ್ವಾ.

ಈ ದಿನದಂದು ನಾವು ಯಾವಾ ರೀತಿಯಲ್ಲಿ ಅಹಂಕಾರದಿಂದಿದ್ದೇವೆ? ನಾವು ಬೆರಯೊಬ್ಬರನ್ನು ಕೀಳಾಗಿ ನೋಡುತ್ತೇವಾ? ಅಥವಾ ಬೇರೊಬ್ಬರ ದುರದೃಷ್ಟದ ಬಗ್ಗೆ ಆನಂದಿಸುತ್ತಿದ್ದೇವಾ?

**<u>ನಾವು ಏನನ್ನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ. (ಓಬದ್ಯ 15-21)</u>**

ಇದು ವಿಶ್ವದ ಸತ್ಯ. ಪ್ರತಿ ಅಂತದಲ್ಲಿಯೂ ಇದು ಸತ್ಯ. ನಾವು ಏನನ್ನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ. ಇದೋಮ್ಯರು ಏನನ್ನು ಬಿತ್ತಿದರೋ ಅದನ್ನೇ ಕೊಯ್ದರು. ಯಾವುದು ಕೆಲವು ವಿಷಯಗಳನ್ನು ನಾವು ನೆನ್ನೆ ಬಿತ್ತಿದ್ದನ್ನು ಈ ದಿನ ಕೊಯ್ಯುತ್ತಿದ್ದೇವೆ?

ಈ ದಿನ ನೀತಿವಂತಿಕೆಯನ್ನು ಬಿತ್ತುವುದರಿಂದ ನಾವು ನಾಳೆ ಹೇಗೆ ಆಶೀರ್ವಾದಗಳನ್ನು ಕೊಯ್ಯಬಹುದು?

ಈ ದಿನ ಕರೀದಿ ಮಾಡು, ಹಣವನ್ನು ನಂತರ ಕೊಡು ಎಂದು ಪ್ರಪಂಚವು ನಮ್ಮನ್ನು ಶೋಧಿ ಸುತ್ತದೆ. ಆದರೆ ದೇವರ ಮಾರ್ಗವು ಬಹಳ ವ್ಯತ್ಯಾಸಕರವಾಗಿದೆ. ಈಗ ಕೊಡುವುದು ನಾಳೆ ಕೊಯ್ಯುವುದು.

**<u>ಅನ್ವಯ</u>**: ನಾವು ಯಾವ ರೀತಿಯಲ್ಲಿ ಅಹಂಕಾರದಿಂದಿದ್ದೇವೆ?

ಆತನು ಹೆಚ್ಚಾದ ಕೃಪೆಯನ್ನು ಕೊಡುತ್ತಾನೆ. ಆದ್ದರಿಂದ 'ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ' ಎಂದು ವಾಕ್ಯವು ಹೇಳುತ್ತದೆ.

ಹೀಗಿರಲಾಗಿ ದೇವರಿಗೆ ಅಧೀನವಾಗಿರಿ. ಸೈತಾನನ್ನು ಎದುರಿಸಿರಿ. ಆಗ ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು. ದೇವರ ಸಮೀಪಕ್ಕೆ ಬನ್ನಿರಿ. ಆಗ ಆತನು ನಿಮ್ಮ ಸಮೀಪಕ್ಕೆ ಬರುವನು.(ಯಾಕೋಬ 4:6-8)

--------------------------------------------------------------

**<u>ದಿನ 14</u>**

**ಯೋನನ ಪುಸ್ತಕ (ಯೋನ 1-2)**

**<u>ಮುನ್ನುಡಿ</u>**

- ಯೋನನು ಅಂದರೆ 'ಪಾರಿವಾಳ', ಸ್ಪಷ್ಟವಾಗಿ ಇವನು ಉತ್ತರರಾಜ್ಯದ (ಇಸ್ರಾಯೆಲ್) ಪ್ರವಾದಿ. ಇವನ ಆತ್ಮಿಕ ಧರ್ಮ ಪ್ರಚಾರ ಕಾರ್ಯವೇನೆಂದರೆ ದೇವರ ವಾಕ್ಯವನ್ನು ಆಸ್ಸೀರಿಯನ್ನರ ಪ್ರಧಾನ ನಗರ ನಿನೆವಗೆ ಪ್ರಚಾರ ಮಾಡುವುದು.
- ಈ ಪ್ರವಾದಿಯ ಭೋದನೆ ಸರಳವಾಗಿತ್ತು "ಇನ್ನು ನಾಲ್ವತ್ತು ದಿವಸಗಳಾದ ಮೇಲೆ ನಿನೆವೆ ಕೆಡವಲ್ಪಡುವುದು"
- ಯೇಸು ಪ್ರಭು ಈ ಪ್ರವಾದಿಯ ಬಗ್ಗೆ ಮತ್ತಾಯ 12:38-41, ಮತ್ತಾಯ 16:4 ರಲ್ಲಿ ಉಲ್ಲೇಖನೆ ಮಾಡಿದ್ದಾರೆ.
- ಈ ಪುಸ್ತಕವು ಸರಿಸಾಟಿಯಿಲ್ಲದ ಅದ್ಭುತಗಳ ಘಟನೆಗಳನ್ನೊಳಗೊಂಡಿದೆ. ಗೊತ್ತಿರುವ ವಿಷಯವೆಂದರೆ ಯೋನನು ಮೀನಿನ ಹೊಟ್ಟೆಯಲ್ಲಿ ಮೂರು ದಿನ ಹಗಲೂ, ಮೂರು ದಿನ ರಾತ್ರಿ ಇದ್ದದ್ದು. ಈ ಅದ್ಭುತ ಅನೇಕ ಸ್ವಾತಂತ್ರ್ಯ ವಿದ್ವಾಂಸರಿಗೆ ಆಳವಾಗಿ ಯೋಚಿಸಲು ಮತ್ತು ಚರ್ಚಿಸಲು ದಾರಿಮಾಡಿಕೊಟ್ಟಿದೆ. ಆದರೂ, ಇದು ಸ್ಪಷ್ಟವಾಗಿ ಯೋಚನೆ ಮಾಡುವಂತಹ ವಿಷಯ, ಯೇಸು ಇದನ್ನು ಸಾಹಿತ್ಯಕರವಾಗಿ ಆರಿಸಿಕೊಂಡರು.

**<u>ಯೆಹೋವನ ಸಮುಖದಿಂದ ದೂರ ಹೋಗುವದು (ಯೋನ 1:1-17)</u>**

- ದೇವರು ಯೋವನಿಗೆ ಅವರ ವಾಕ್ಯವನ್ನು ಪ್ರಚಾರಮಾಡಲು ಆಜ್ಞಾಪಿಸಿದರು (ವಚನ 1-2).
- ಅವಿದೇಯನಾಗಲು ಮತ್ತು ದೇವರ ವಿರುದ್ದವಾಗಿರುವ ಸ್ಥಳಕ್ಕೆ ಓಡಿಹೊಗಲೂ ಯೋನನು ನಿರ್ಧರಿಸುತ್ತಾನೆ (ವಚನ 11-2).
- ದೇವರ ಸನ್ನಿದಿಯಿಂದ ಓಡಿ ಹೋಗುವುದು ಅಷ್ಟೊಂದು ಸಂತೋಷಕರವಾಗಿರಲಿಲ್ಲ, ಯೋನನು ಸಮುದ್ರದ ಬಿರುಗಾಳಿಯನ್ನು ಅನುಭವಿಸುತ್ತಾನೆ.
- ಪ್ರವಾದಿಯ ಧೈರ್ಯಕ್ಕಿಂತ ಹೊರ ಹೊರಡುವ, ವಿಷಯ ಅನ್ಯ ಜನರ ಮೇಲೆ ಅವನಿಗಿದ್ದ ದ್ವೇಷ.

ನಾವು ಯಾವ ರೀತಿಯಲ್ಲಿ ದೇವರ ಪ್ರಸನ್ನದಿಂದ ಓಡುತಿದ್ದೇವೆ? ನಮ್ಮ ಜೀವನದಲ್ಲಿ ನಾವು ಸಮುದ್ರದ ಬಿರುಗಾಳಿಯನ್ನು ಅನುಭವಿಸುತ್ತಿದ್ದೇವಾ? ಕಾರಣ ನಾವು ದೇವರ ಸನ್ನಿದಿಯಿಂದ ಓಡುತ್ತಿರುವುದರಿಂದಾಗಿ. ಅವಿಧೇಯತೆ ಬಹಳ ಬೆಲೆಯುಳ್ಳದ್ದು ಮತ್ತು ಅದಕ್ಕಾಗಿ ಬಹಳ ವೆಚ್ಚ ಮಾಡಬೇಕಾಗುತ್ತದೆ. ದೇವರಿಗೆ ವಿಧೇಯರಾಗಿ ನಡೆಯುವುದು, ಅವರ ಕಡೆ ಓಡುವುದು ಸುಲಭ, ಆದರೆ ಅವರ ವಿರುದ್ದ ನಡೆಯುವುದು ಕಷ್ಟಕರವಾದ ವಿಷಯವಾಗಿದೆ.

**<u>ಯೆಹೋವನ ಸಮ್ಮುಖಕ್ಕೆ ಓಡುವುದು (ಯೋನ 2:1-10)</u>**

- ತನ್ನ ಅವಿಧೇಯತಯ ನಡತೆಯನ್ನು ಅರ್ಥ ಮಾಡಿಕೊಂಡು ಪ್ರವಾದಿ ಪ್ರರಂಭಿಸುವುದು.
- ನುಂಗಿರುವ ದೊಡ್ಡ ಮೀನು ಒಂದು ದೊಡ್ಡ ಪವಾಡ.
- ಯೋನನು ಮೀನಿನ ಹೊಟ್ಟೆಯಿಂದ ಪ್ರಾರ್ಥಿಸಿದನು. ನಾವು ಯಾವುದೇ ಜಾಗದಲ್ಲಿದ್ದರು ಪರವಾಗಿಲ್ಲ, ಅಲ್ಲಿಂದ ದೇವರಿಗೆ ಪ್ರಾರ್ಥಿಸಬಹುದು. ಈ ಪ್ರಾರ್ಥನೆಯಲ್ಲಿ ಯೋನನು ದೇವರನ್ನು ದೂಷಿಸುವುದಾಗಲೀ ಹಾಗೂ ನಾವಿಕರನ್ನು ದೂಷಿಸುವುದಾಗಲಿ ಇದಾವುದನ್ನು ಮಾಡಲಿಲ್ಲ. ಆದರೆ ಈ ಎಲ್ಲಾ ಕಾರ್ಯಗಳು ದೇವರ ಚಿತ್ತದಿಂದ ನಡೆಯುತ್ತಿದೆ ಎಂದು ಅರ್ಥ ಮಾಡಿಕೊಂಡನು (ವಚನ 3).
- ತನ್ನನ್ನು ತಾನೇ ತಗ್ಗಿಸಿಕೊಂಡು ಬದಲಾವಣೆಯಾದವನು.

ಕೆಟ್ಟ ವಿಷಯಗಳು ನಮ್ಮ ಜೀವನದಲ್ಲಿ ಸಂಭವಿಸಿದಾಗ ನಾವು ಜನರನ್ನು ದ್ವೇಷಿಸುತ್ತೇವಾ? ಈ ಎಲ್ಲಾ ವಿಷಯಗಳ ಹಿಂದೆ ದೇವರಿದ್ದಾರೆ ಎಂದು ಅರ್ಥ ಮಾಡಿಕೊಂಡು ನಮ್ಮ ಪ್ರಾರ್ಥನೆಯಲ್ಲಿ ನಾವು ಪ್ರಮಾಣಿಕರಾಗಿದ್ದೇವಾ?

**<u>ಅನ್ವಯ</u>** : ದೇವರ ವಾಕ್ಯದ ಪ್ರಕಾರ ಯಾವ ಕೆಲವು ವಿಷಯಗಳಲ್ಲಿ ನಾವು ದೇವರಿಗೆ ವಿಧೇಯರಾಗಿರಬೇಕು ಎಂದು ನಮಗೆ ತೋಚುತ್ತದೆ?

ಆತನು ಅವರೆಲ್ಲರಿಗೆ "ಯಾವನಾದರೂ ನನ್ನ ಹಿಂದೆ ಬರುವುದಾದರೆ, ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಪ್ರತಿ ದಿನ ಹೊತ್ತು ಕೊಂಡು ನನ್ನನ್ನು ಹಿಂಬಾಲಿಸಲಿ, ಯಾವನಾದರೂ ತನ್ನ ಪ್ರಾಣವನ್ನು ರಕ್ಷಿಸಿ ಕೊಳ್ಳ ಬಯಸಿದರೆ ಅದನ್ನು ಕಳೆದು ಕೊಳ್ಳುವನು. ಆದರೆ ನನ್ನ ನಿಮಿತ್ತವಾಗಿ ಯಾವನಾದರೂ ತನ್ನ ಪ್ರಾಣವನ್ನು ಕಳೆದುಕೊಂಡರೆ ಅವನು ಅದನು ರಕ್ಷಿಸಿ ಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡು, ತನ್ನನ್ನು ತಾನೇ ಹಾಳು ಮಾಡಿಕೊಂಡರೆ ಇಲ್ಲವೆ ನಷ್ಟ ಪಡಿಸಿಕೊಂಡರೆ ಅವನಿಗೆ ಪ್ರಯೋಜನವೇನು? (ಲೂಕ 9: 23-25)

-------------------------------------------------------------

## <u>ದಿನ 15</u>

### ಯೋನನ ಪುಸ್ತಕ (ಯೋನ 3-4)

### <u>ದೇವರಿಗಾಗಿ ಓಡುವುದು (ಯೋನ 3:1-10)</u>

- ದೇವರು ಬೋಧಿಸಲು ಹೇಳಿದ್ದನ್ನು ಹಾಗೆಯೇ ಯೋನನು ಬೋಧಿಸಿದನು.
- ಅವನ ಕಾರ್ಯಗಳು ದೇವರ ಪ್ರಕಾರವಿತ್ತು. ಆದರೆ ಅವನ ಮನೋವೃತ್ತಿ ಬಹಳವಾಗಿ ಬದಲಾಗಿರಲಿಲ್ಲ.
- ನಿನೆವ ಜನರು ಬದಲಾವಣೆಯಾದರು. ಬದಲಾವಣೆಯು ಜನರಿಂದ ಪ್ರಾರಂಭವಾಗಿ ಅದ್ಭುತವಾಗಿ ರಾಜನಲ್ಲಿಯೂ ಮುಂದುವರಿಯಿತು. ನಿನೆವೆದವರು ತಮ್ಮ ಕ್ರೂರ, ಕಠೋರ ಮತ್ತು ದುಷ್ಟ ಪಾಪದ ನೀಚಕ್ಕೆ ಹೆಸರುವಾಸಿಯಾಗಿದ್ದರು, ಆದರೆ ಬದಲಾವಣೆಯಾಗಲು ಅಸಾಧ್ಯವಾಗಿರಲಿಲ್ಲ.
- ಕರ್ತನು ದುರ್ಘಟನೆ, ಕೇಡು ಕಳಿಸುವುದನ್ನು ನಿಲ್ಲಿಸಿದರು. ಕರ್ತನು ನಿನೆವ ದೇಶವನ್ನು ಧ್ವಂಶಮಾಡದೆ 100 ವರ್ಷಗಳ ಕಾಲ ಕಾಯುತ್ತಿದ್ದರು. ಹೆಚ್ಚು ಕಡಿಮೆ 612 ಕಿ.ಪು. ನಿನೆವ ಸಂಪೂರ್ಣವಾಗಿ ಕೆಳಗೆ ಬಿದ್ದಿತು. ಪಶ್ಚಾತ್ತಾಪ ಪಡುವುದು ಹೊತ್ತು ಮೀರಿದ ವಿಷಯವಲ್ಲ.

ನಾವು ಪಶ್ಚಾತ್ತಾಪ ಪಟ್ಟರೆ ಕರ್ತನು ನಮ್ಮನ್ನು ಕ್ಷಮಿಸಿ ನಮ್ಮನ್ನು ನಾಶನದಿಂದ ಕಪಾಡುವನು.

### <u>ಕರ್ತನಿಗಿಂತ ಮುಂಚಿತವಾಗಿ ಓಡುವುದು (ಯೋನ 4:1-11)</u>

ಇಲ್ಲಿ ಯೋನನ ಗುಣ ನಡತೆಯನ್ನು ಕಾಣುತ್ತೇವೆ. ನಾವು ಇಲ್ಲಿ ಮನುಷ್ಯರು ಹೇಗೆ ದೇವರಿಗಿಂತ ವ್ಯತ್ಯಾಸವಾಗಿರುತ್ತಾರೆ ಎಂದು ನೋಡುತ್ತೇವೆ.

ಯೋನನು ಕೋಪದಿಂದಿದ್ದನು ಆದರೆ ದೇವರು ತಾಳ್ಮೆಯಾಗಿದ್ದರು.

ಯೋನನು ದ್ರಾಕ್ಷಿಬಳ್ಳಿಯ ಬಗ್ಗೆ ಆನಂದದಿಂದ ಇದ್ದನು. ಆದರೆ ದೇವರು ಆನಂದವಾಗಿದ್ದದ್ದು, ಜನರು ತಮ್ಮ ಪಾಪಗಳಿಂದ ಬದಲಾವಣೆಯಾಗಿದ್ದಾರೆ ಎಂದು.

ಯೋನನು ದ್ರಾಕ್ಷಿ ಬಳ್ಳಿಯ ಬಗ್ಗೆ ಚಿಂತಿಸುತ್ತಿದ್ದ. ಆದರೆ ದೇವರು ಕಳೆದು ಹೋಗಿರುವ ಪಟ್ಟಣದ ಬಗ್ಗೆ ಚಿಂತಿಸುತ್ತಿದ್ದರು. ನಿಮಗೆ ವಯಕ್ತಿಕವಾಗಿ ಪರಿಣಾಮ ಬೀರುವ ಶಾರೀರಿಕ ವಿಷಯಗಳ ಬಗ್ಗೆ ಭಾವನಾತ್ಮಕವಾಗಿರಲು ನಮಗೆ ಸರಳವೆನಿಸಬಹುದು.

ನಾವು ಯಾವುದರ ಬಗ್ಗೆ ಈ ದಿವಸ ಚಿಂತಿಸುತ್ತಿದ್ದೇವೆ? ದೇವರು ಇದರ ಬಗ್ಗೆ ಏನೆಂದು ಕೊಳ್ಳುತ್ತಾರೆ? ಅಂತಿಮದಲ್ಲಿ ಕರ್ತನು ಪ್ರತಿಯೊಬ್ಬನು ತಮ್ಮ ತಪ್ಪು ಹಾಗು ಪಾಪಗಳಿಂದ ಬದಲಾವಣೆಯಾಗುವುದನ್ನು ಬಯಸುತ್ತಾನೆ (2 ಪೇತ್ರ 3:9).

ಈ ಪುಸ್ತಕ ಒಂದು ಪ್ರಶ್ನೆಯಲ್ಲಿ ಅಂತ್ಯಗೊಳ್ಳುತ್ತದೆ, ಆ ಪ್ರಶ್ನೆಗೆ ಉತ್ತರ ಬರದಿಲ್ಲ. ಇದು ತಪ್ಪಲ್ಲಾ. ಈ ಪುಸ್ತಕದಲ್ಲಿ ಕಲಿಯುವ ಪಾಠಗಳು ಅನೇಕ. ಆದರೆ ಮುಖ್ಯವಾದ ಪಾಠವೆಂದರೆ ದೇವರ ಕೃಪೆ ದೊಡ್ಡ ಸ್ವಭಾವ, ಗುಣ. ದೇವರ ಅತ್ಯುತ್ತಮವಾದ ಕೃಪೆಯನ್ನು ನಾವು ಅಳೆಯಬಹುದು. ಹೇಗೆಯಂದರೆ, ಅವರು ನಮ್ಮ ರಕ್ಷಣೆಗಾಗಿ ತನ್ನ ಒಬ್ಬನೇ ಮಗನಾದ ಯೇಸುವನ್ನು ಶಿಲುಬೆಗೆ ಏರಿಸಿ, ಕೃಪೆಯ ವಿಶಾಲತೆಯನ್ನು ತೋರ್ಪಡಿಸಿದ್ದಾರೆ.

**<u>ಅನ್ವಯ</u>**: ಐದು ಮಂದಿಯ ಹೆಸರನ್ನು ಒಂದು ಚೀಟಿಯಲ್ಲಿ ಬರೆದು, ಅವರ ಜೊತೆಯಲ್ಲಿ ನಿಮ್ಮ ನಂಬಿಕೆ ಹಂಚ್ಚಿಕೊಳ್ಳಲು ಮತ್ತು ಈ ತಿಂಗಳೊಳಗೆ ಅವರನ್ನು ಭೇಟಿ ಮಾಡಲು ನಿರ್ಧರಿಸಿರಿ.

1.

2.

3.

4.

5.

ರೋಮಾಪುರದವರಿಗೆ 10:14-15

14 ಆದರೆ ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವದು ಹೇಗೆ? ಮತ್ತು ಆತನ ಸುದ್ದಿ ಕೇಳದಿರುವಲ್ಲಿ ಆತನನ್ನು ನಂಬುವದು ಹೇಗೆ? ಸಾರಿ ಹೇಳುವವನಿಲ್ಲದೆ ಕೇಳುವದು ಹೇಗೆ? ಸಾರುವವರ

15 ಇದಕ್ಕೆ ಸರಿಯಾಗಿ ಶುಭದ ಸುವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ ಎಂದು ಬರೆದದೆ.ಆದರೂ ಆ ಶುಭವರ್ತಮಾನಕ್ಕೆ ಎಲ್ಲರೂ ಕಿವಿಗೊಡಲಿಲ್ಲ.

-------------------------------------------------------------

## <u>ದಿನ 16</u>

**ಮೀಕನ ಗ್ರಂಥ (ಮಿಕಾ 1-5)**

**<u>ಮುನ್ನುಡಿ</u>**

- ಮೀಕ ಅಂದರೆ ಯೆಹೋವನ ತರಹ
- ಮೀಕ ಹಳ್ಳಿಯವನು (ಮೋರೆ ಶ್ರೀಥ್ಲಾಥ್) ಇವನು ಜೆರುಸಲೇಮ್ ವಿರುದ್ದ ಬೋಧಿಸಲೂ ಬಂದಿದ್ದ.
- ಯೇಸುವಿನ ಬಗ್ಗೆ ಕೆಲವು ಪ್ರವಾದನೆಗಳನ್ನು ಬರೆದಿದ್ದಾನೆ.
- ಯೂದದ ರಾಜನಾದ ಯೋತಾಮ್, ಅಹಾಜ್ ಮತ್ತು ಹೆಜೆಕ್ಕೀಯನ ಕಾಲದಲ್ಲಿ ಪ್ರವಾದಿಸಿದನು.

**ಸಮಾರೀಯ ಮತ್ತು ಯೆರೂಸಲೇಮ್ ನ ವಿರುದ್ದ ನ್ಯಾಯ ತೀರ್ಪು (ಮಿಕ 1:1-16)**

- ವಿಗ್ರಹಾರಾಧನೆ ಮಾಡಿದ್ದು. (1:3:7, 6:16)
- ಬಡಜನರನ್ನು ಶ್ರೀಮಂತರು ಹಿಂಸಿಸಿದ್ದು. (2:1-2, 8-9)

ಯೆಹೋವನು ತನ್ನ ಸ್ಥಾನ, ಪವಿತ್ರ ಮಂದಿರವನ್ನು ಬಿಟ್ಟು ತಾನೇ ಹೋರಾಡಲು ಮುಂದಾದನು (1:3)

ಇಲ್ಲಿ ಮೀಕ ಯೂದರ ಮೇಲೆ ಬರುವಂತಹ ದೈವ ಶಿಕ್ಷೆಯನ್ನು ಮುಂಚೆಯೇ ಅರಿತಿದ್ದನು. ಅವರು ಗಡೀಪಾರು ಆಗುವುದನ್ನು ಮುಂಚೆಯೇ ತಿಳಿದು ಗೋಳಾಡುವುದಕ್ಕೆ ಹೇಳುತ್ತಿದ್ದಾನೆ.

**ಮನುಷ್ಯರ ಯೋಜನೆ ಮತ್ತು ದೇವರ ಯೋಜನೆ (ಮೀಕ 2:1:5)**

ಮನುಷ್ಯರು ತಮ್ಮ ಸ್ವಂತ ಕೆಟ್ಟ ಯೋಜನೆಯಲ್ಲಿ ತಲ್ಲೀನರಾಗಿದ್ದರು. ಅವರ ಹೃದಯ ಭಾರಿ ಕಠಿಣವಾಗಿತ್ತು. ಆದ್ದರಿಂದ ಅವರು ಅವರ ಕೆಟ್ಟ ಯೋಜನೆಗಳು ಹೇಗಿವೆ ಎಂದು ಯೋಚಿಸಲಿಲ್ಲ.

ಆದರೆ ದೇವರು ಕೂಡ ಯೋಜನೆಗಳನ್ನು ಮಾಡುತ್ತಾರೆಂದು ಅವರು ಮರೆತುಹೋದರು. ದೇವರು ಅವರಿಗೆ ದುರ್ಘಟನೆಗಳು ನಡೆಯುವಂತೆ ಯೋಜೆಗಳನ್ನು ಮಾಡುತ್ತಿದ್ದರು.(2:3)

**ಸುಳ್ಳು ಪ್ರವಾದಿಗಳು (ಮೀಕನು 2:6-13)**

ಇಲ್ಲಿ ನಾವು ನೋಡುತ್ತೇವೆ, ಸುಳ್ಳು ಪ್ರವಾದಿಗಳು ಬಹಳ ಭಯಂಕರವಾಗಿದ್ದರು.

ತನ್ನ ಪಾಪಗಳ ನಿಮಿತ್ತ ದೇವರಿಂದ ಬರುವ ಶಿಸ್ತನ್ನು ಕೇಳಲಿಕ್ಕೆ ಅವರು ತಯಾರಾಗಿರಲಿಲ್ಲ (2:6)

ಸುಳ್ಳು ಪ್ರವಾದಿಗಳು ದ್ರಾಕ್ಷಾರಸದ ಬಗ್ಗೆ ಪ್ರವಾದನೆ ಮಾಡಬೇಕೆಂದು ಜನರು ಬಯಸಿದರು (2:11)

ನಾವು ದೇವರ ವಾಕ್ಯದ ಬಗ್ಗೆ ಗಂಭೀರವಾಗಿದ್ದೇವಾ? ಕರ್ತನ ವಾಕ್ಯ ಎಚ್ಚರಿಸುತ್ತದೆ. ನಾಶ ಹೊಂದುತ್ತಿರುವವರನ್ನು ಸೈತಾನನು ಕಪಟ ದೃಶ್ಯಗಳನ್ನು ತೋರಿಸುವುದರ ಮೂಲಕ ಗುರುತು ಮತ್ತು ಆಶ್ಚರ್ಯ ಮತ್ತು ಎಲ್ಲಾ ತರಹದ ಕೆಟ್ಟ ಕೆಲಸಗಳ ಮೂಲಕ ಮೋಸಮಾಡುತ್ತಾನೆ. ಅವರು ನಾಶವಾಗುವರು. ಏಕೆಂದರೆ ರಕ್ಷಣೆಗೆ ಸಹಾಯವಾಗುವ ಒಳ್ಳೆಯದನ್ನು ಸತ್ಯವನ್ನು ಅವರು ಪ್ರೀತಿ ಮಾಡವುದಿಲ್ಲ. ಯಾವ ಬೋಧನೆ ನಿಮಗೆ ಇಡುಸುತ್ತದೆ ಮತ್ತು ಏಕೆ?

**ಅನ್ವಯ** : ಏಕೆಂದರೆ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ. ಆದರೆ ಅವರು ತೀಟೆ ಕಿವಿಯುಳ್ಳವರಾಗಿ ತಮ್ಮ ಆಶೆಗಳಿಗೆ ಅನುಸಾರವಾದ ಉಪದೇಶಕರನ್ನು ಬಹಳವಾಗಿ ಕೂಡಿಟ್ಟುಕೊಳ್ಳುವರು. ಅವರು ಸತ್ಯಕ್ಕೆ ಕಿವಿಗೊಡದೆ ಕಟ್ಟುಕಥೆಗಳನ್ನು ಕೇಳುವುದಕ್ಕೆ ತಿರುಗಿ ಕೊಳ್ಳುವರು ( 2 ತಿಮೊತಿ 4:3-4)

---------------------------------------------------------------

## ದಿನ 17

### ಮೀಕನ ಗ್ರಂಥ (ಮಿಕಾ 3-5)

### ದೇವರ ನ್ಯಾಯವಾದ ನಡತೆ (ಮಿಕ 3:1-12) ನಾಯಕರನ್ನು ಪ್ರವಾದಿಗಳನ್ನು ಗದರಿಸಿದ್ದು

ಮೂರನೆಯ ಅಧ್ಯಾಯದಲ್ಲಿ ಮೀಕನು ಸ್ಪಷ್ಟವಾಗಿ ಅನೇಕ ವರ್ಗಗಳ ಯೂದರ ನಾಯಕರ ಬಗ್ಗೆ ವರ್ಣಿಸುತ್ತಾನೆ. ಎಲ್ಲಾ ಸರ್ಕಾರದ ವಿಭಾಗಗಳು ಭ್ರಷ್ಟತೆಯಿಂದ ತುಂಬಿತ್ತು ಮತ್ತು ಒಬ್ಬರಿಗೊಬ್ಬರು ಕೈಜೋಡಿಸಿ ಅನೀತಿಯಿಂದ ದುಡಿದರು. ಮೂರನೆಯ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

ಮೊದಲನೆಯದಾಗಿ ನ್ಯಾಯಾಧೀಶರು ಹಾಗೂ ಅವರ ಕೋರ್ಟಿನಲ್ಲಿ ನ್ಯಾಯಸಭೆಯ ಭ್ರಷ್ಟತೆ.

ಎರಡನೆಯದಾಗಿ ಪ್ರವಾದಿಗಳಿಗೆ ಯಾರು ಹೆಚ್ಚು ಹಣವನ್ನು ಕೊಡುತ್ತಾರೋ ಅವರ ಪರವಾಗಿ ಮಾತನಾಡುವುದು.

ಕೊನೆಯದಾಗಿ ರಾಜಕಾರಣಿಯರು ಹಣಕ್ಕೋಸ್ಕರ  ಜನರಿಂದ ಸಹಾಯವನ್ನು ಕೇಳುವುದು.

ಈ ಅಧ್ಯಾಯಗಳನ್ನು ಒಟ್ಟುಗೂಡಿಸಿದರೆ, “ನ್ಯಾಯ' ಎಂಬುದು ಪ್ರಧಾನವಾಗಿದೆ.

“ನ್ಯಾಯ' ಯೂದದಿಂದ ಭಾರಿ ದೂರವಾಗಿದೆ. ನಮ್ಮ ದೇವರು ನ್ಯಾಯದ ದೇವರಾಗಿದ್ದಾರೆ ಮತ್ತು ನಾವು ಅವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದೇವೆ. ಅದಕ್ಕಾಗಿಯೇ ನಾವು ನ್ಯಾಯ ದಾರಿಯಲ್ಲಿ ನಡೆಯಬೇಕು. ಯಾವಾಗ ನಾವು ಅನ್ಯಾಯವಾಗಿ ನಡೆಯುತ್ತೇವೋ ದೇವರ ಪ್ರತಿನಿಧಿಗಳಾಗಿ ಇರಲು ಸಾಧ್ಯವಿಲ್ಲ. ಆಗ ದೇವರು ನಮ್ಮ ಮೇಲೆ ನ್ಯಾಯ ತೀರ್ಪುನ್ನು ಕೊಡುವರು.

### ದೇವರ ಯೋಜನೆ (ಮೀಕನು 4: 1-13)

ಅಧ್ಯಾಯ 4 ನಂಬಿಕೆ ತರುವಂತಹ ಮೀಕನ ಪ್ರವಾದನೆಯಾಗಿದೆ. ಇಲ್ಲಿ ಮೀಕನು ಹಲವಾರು ವಿಧದ ಸ್ವತಂತ್ರದ ಬಗ್ಗೆ ಪ್ರವಾದಿಸುತ್ತಾನೆ.

- ಗೊತ್ತಿಲ್ಲದ ನ್ಯಾಯಪ್ರಮಾಣದ (ದೇವರ ವಾಕ್ಯ) ಬಗ್ಗೆ ಸ್ವಾತಂತ್ರ. (ವ.2)
- ಯುದ್ಧದಿಂದ ಸ್ವಾತಂತ್ರ (ವ.3)
- ಆಸೆ ಹಾಗೂ ಬಯಕೆಗಳಿಂದ ಸ್ವಾತಂತ್ರ (ವ.4)
- ಭಯದಿಂದ ಸ್ವತಂತ್ರ (ವ.4)

ಒಂದು ಪ್ರವಾದನೆ ಇದೆ. ಅದೇನೆಂದರೆ ಸ್ವತಹ ದೇವರೇ ಅವರ ಕುರುಬನಾಗಿರುವನು (ವ.6 ರಿಂದ) ಯಾರೋ ಒಬ್ಬರು ಹೇಳಿದರು.

“ಒಬ್ಬ ಮನುಷ್ಯನ ಕೆಳಗೆ ಕುರಿಗಳು ಉಪವಾಸ, ನೋವು, ಕಷ್ಟಗಳು, ಕೊನೆಯಿಲ್ಲದ ಸಂಕಟಗಳನ್ನು ಅನುಭವಿಸುತ್ತವೆ. ಬೇರೋಬ್ಬರ ಕೆಳಗೆ ಸಂತೃಪ್ತಿ ಮತ್ತು ಅಭಿವೃದ್ಧಿಯನ್ನು ಹೊಂದುತ್ತವೆ. ಆದರೆ ಯೂದದ ಕುರುಬರು, ಕುರಿಗಳನ್ನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿದರೆ, ಆಗಸ್ವತಃ ದೇವರೇ ಒಳ್ಳೆಯ ಕುರುಬನಾಗಿ ತನ್ನ ಪರಿಪೂರ್ಣ ಪ್ರೀತಿಯಿಂದ, ಕುರಿಗಳನ್ನು ಹಚ್ಚ ಹಸುರಿನ ದಾರಿಯಲ್ಲಿ ನಡೆಸುತ್ತಾನೆ.

ಎಷ್ಟು ಅತ್ಯುತ್ತಮ ಕುರುಬನೆಂದು ನಾವು ಕೀರ್ತನೆ 23 ಮತ್ತು ಯೋಹಾನ 10 ರಲ್ಲಿ ಕಾಣಬಹುದು.

**ನಿರೀಕ್ಷೆ ಮತ್ತು ಬಿಡುಗಡೆ (ಮೀಕನು 5:1-15)**

ದೇವರ ಯೋಜನೆ ಯೇಸು ಕ್ರಿಸ್ತನು ಈ ಭೂಲೋಕಕ್ಕೆ ಬರುವುದು.

ಅವನೇ ಕಟ್ಟಕಡೆಯ ಕುರುಬನು (54)

ಶಾಂತಿ (5:5)

**<u>ಅನ್ವಯ</u>**: ದೇವರು ಕುರುಬನಾಗಿರುವುದರಿಂದ ಯಾವ ಕೆಲವು ವಿಷಯಗಳನ್ನು ನೀವು ಅವರಲ್ಲಿ ನೋಡುತ್ತೀರಾ?

ನಾವು ಕುರುಬರಾಗಿದ್ದು (ತಂದೆ, ತಾಯಿ, ಅಧ್ಯಕ್ಷರು, ನಾಯಕ) ಆಗಿ, ಹೇಗೆ ಆ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದು.

1.

2.

3.

ಯೇಸು ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟಿದ್ದರಲ್ಲಿಯೇ ದೇವರ ಪ್ರೀತಿ ಇಂಥದ್ದೆಂದು ನಮಗೆ ತಿಳಿದು ಬಂದಿದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣವನ್ನು ಕೊಡುವ ಹಂಗಿನಲ್ಲಿದ್ದೇವೆ. ಆದರೆ ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿರುವ ತನ್ನ ಸಹೋದರರನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರು ವುದುಂಟೇ? ಪ್ರಿಯರಾದ ಮಕ್ಕಳೇ ನಾವು ಬರೀ ಮಾತಿನಿಂದಾಗಲಿ ಬಾಯಿ ಪ್ರಚಾರದಿಂದಾಗಿ ಪ್ರೀತಿಸುವವರಾಗಿರಬಾರದು ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು. (1 ಯೋಹಾನ 3:16-18)

---------------------------------------------------------------

**<u>ದಿನ- 18</u>**

**ಮೀಕನ ಪುಸ್ತಕ (ಮೀಕ 6-7)**

**<u>ದೇವರ ಮೊಕದ್ದಮೆ (ಮೀಕ 6:1-16)</u>**

ಈ ಅಧ್ಯಾಯವು ನ್ಯಾಯಾಲಯದ ವಿಚಾರಣೆಯ ಕಾರ್ಯಕಲಾಪನೆಗಳ ದೃಶ್ಯಗಳನ್ನು ಒಳಗೊಂಡಿದೆ. ಯೂದ ದೇಶದ ವಿರುದ್ಧ ಸ್ವತಃ ದೇವರೇ ಮೊಕದ್ದಮೆಯನ್ನು ತರುತ್ತಿದ್ದಾರೆ.

ಈಜಿಪ್ಟ್ ದೇಶದಲ್ಲಿ ಗುಲಾಮರಾಗಿದ್ದ ಸಮಯದಿಂದ ಇಲ್ಲಿಯವರೆಗೆ ದೇವರು ಅವರಿಗೆ ಏನು ಮಾಡಿದ್ದಾರೆ ಎಂದು ಮರೆತ್ತಿದ್ದರಿಂದ ದೇವರು ಹೀಗೆ ಮಾಡಬೇಕಾಯಿತು. ಅವರ ಪಾಪಗಳ ಮೂಲ ಕಾರಣ ಏನಾಗಿತ್ತು ? ಕೃತಜ್ಞತೆಯಿಂದ ಇಲ್ಲದಿರುವುದು ! ನಾವು ಎಲ್ಲಿಂದ ಬಂದವೆಂದು ನಮಗೆ ಜ್ಞಾಪಕವಿದೆಯಾ? ಯಾರು ನಮ್ಮನ್ನು ಇಲ್ಲಿಯವರೆಗೆ ಕರೆ ತಂದದ್ದು?

- ದೇವರಿಗೆ ಎಲ್ಲದಕ್ಕಿಂತ ಯಾವುದು ಬಹಳ ಮುಖ್ಯವೆಂದು ದೇವರೇ ಅವರಿಗೆ ಅರಿವು ಮೂಡಿಸುತ್ತಿದ್ದಾರೆ.
- ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವುದು (ಮೀಕ 6 :8)
- ಪುನಃ ದೇವರು ಅವರ ಮೋಸ ಮತ್ತು ಮೋಸದ ಅಳತೆಗಳ ಬಗ್ಗೆ ದೂರನ್ನು ಸಲ್ಲಿಸುತ್ತಿದ್ದಾರೆ (9-13)
- ದೇವರು ಈ ಪಾಪಗಳಿಗೋಸ್ಕರ ತೀರ್ಪನ್ನು ನೀಡುತ್ತಾರೆ.

ಆಸಕ್ತಿಕರ ವಿಷಯವೇನೆಂದರೆ ಇವರ ಶಿಕ್ಷೆ ನಾಶವಾಗುವದಲ್ಲ, ಬದಲಾಗಿ ಉಂಡರು ಅವರಿಗೆ ತೃಪ್ತಿಯಾಗದು, ಶೇಕರಣೆ ಮಾಡಿದರು ಕೂಡಿಟ್ಟು ಕೊಳ್ಳಲು ಸಾಧ್ಯವಾಗುವುದಿಲ್ಲ. ಅವರು ಬಿತ್ತುವರು, ಆದರೆ ಕೊಯ್ಯುವುದಿಲ್ಲ (ವ.14-16)

**ನ್ಯಾಯತೀರ್ಪು ಮತ್ತು ವಾಗ್ದಾನ (ಮೀಕನು 7:1-20)**

ಯೂದ ದೇಶವು ನೀತಿವಂತಿಕೆಯ ಫಲಗಳನ್ನು ಕೊಡದೆ ಇರುವುದನ್ನು ಗಮನಿಸಿದ ದೇವರಿಗೆ ಬಹಳ ಬೇಸರವಾಯಿತು. (7:1) ತನ್ನ ಜನರಿಂದ ಇದನ್ನು ಬಯಸುವುದಕ್ಕೆ ದೇವರಿಗೆ ಎಲ್ಲಾ ಹಕ್ಕಿದೆ. ನೀತಿವಂತಿಕೆಯ ಬದಲಾಗಿ ದುಷ್ಟ ಚಟುವಟಿಕೆಗಳು ಬೆಳೆದವು. ಸಮಾಜ ಬಿದ್ದು ಹೋಗುವುದರ ಬಗ್ಗೆ ವಿವರಿಸಿದ್ದಾರೆ.

- ನೀತಿವಂತಿಕೆ ಬಿದ್ದುಹೋಗುವುದು. (1:2)
- ದೇಶದ ನಾಯಕರ ಬಿದ್ದು ಹೋಗುವಿಕೆ (7:3)
- ಕುಟುಂಬಗಳು ಬಿದ್ದುಹೋಗುವುದು. (7:6)
- ದೇವರ ಒಳ್ಳೆಯ ನಡತೆಗಳನ್ನು ಮೀಕನು ಹೊಗಳುತ್ತಾನೆ. ದೇವರ ತರಹ ಯಾರೂ ಇಲ್ಲವೆಂದು ಕೊನೆಯದಾಗಿ ಹೇಳುತ್ತಾನೆ. ನ್ಯಾಯತೀರ್ಪು ಬರುವುದೆಂದು ಅವನಿಗೆ ತಿಳಿದಿದೆ. ಬ್ಯಾಬಿಲೋನ್ ದೇಶಕೆ ಜನರನ್ನು ಕರೆದೊಯ್ಯುತ್ತಾರೆ. ಪುಸ್ತಕವು ಕೊನೆಗೊಳ್ಳುವಾಗ ದೇವರು ಮತ್ತೊಮ್ಮೆ ತನ್ನ ಜರನ್ನು ಒಂದು ಮಾಡಿ ವಾಗ್ದಾನ ಮಾಡಿದ ಸ್ಥಳಕ್ಕೆ ಕರೆದೊಯ್ಯುವ ಎಂದು ಮಂದಾಲೋಚನೆ ಮಾಡುವನು (ವ.8-13, 15-17)
- ನಿನಗೆ ಯಾವ ದೇವರು ಸಮಾನ? ನೀನು ನಿನ್ನ ಸ್ವಾಸ್ತ್ಯದವರಲ್ಲಿ ಉಳಿದವರ ಅಪರಾಧವನ್ನು ಕ್ಷಮಿಸುವವನೂ ಅವರ ದ್ರೋಹವನ್ನು ಲಕ್ಷಿಷದವನೂ ಆಗಿದ್ದೀ? (ಇದೇ ಸಂದೇಶದ ಮುಖ್ಯ ವಚನ) (ಮೀಕ ಎಂದರೆ ಯಹೋವನಿಗೆ ಸಮಾನರು ಯಾರು?)

ಮೀಕನ ಪುಸ್ತಕದಲ್ಲಿ ದೇವರ ಅತಿ ದೊಡ್ಡಗುಣ ಅವರ ಕ್ಷಮಾಪಣೆ ಮತ್ತು ಅವರ ಕರುಣೆ ಎಂದು ಮುಖ್ಯವಾಗಿ ತಿಳಿಸಲಾಗಿದೆ.

**<u>ಅನ್ವಯ</u>** : ನಿಮಗೆ ದೇವರ ವಾಕ್ಯವನ್ನು ಕಲಿಸಿಕೊಟ್ಟ ಶಿಷ್ಯರ ಪಟ್ಟಿಮಾಡಿರಿ. ನಿಮ್ಮ ಕೃತಜ್ಞತೆಯನ್ನು ತೋರ್ಪಡಿಸುವುದಕ್ಕೆ ಏನಾದರೂ ಮಾಡಿರಿ.

1.

2.

3.

ಇದಲ್ಲದೆ ಪರೋಪಕಾರವನ್ನೂ, ಧರ್ಮ ಮಾಡುವುದನ್ನೂ ಮರೆಯಬೇಡಿರಿ. ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು (ಇಬ್ರಾಯರಿಗೆ 13:16)

--------------------------------------------------------------

**<u>ದಿನ-19</u>**

**ನಹೂಮನ ಗ್ರಂಥ**

**<u>ಮುನ್ನುಡಿ</u>** :

- ನಹುಮನ ಹೆಸರಿನ ಅರ್ಥ ದುಃಖೋಪಶಮನ ಅಥವಾ ಸಮಾಧಾನಪಡಿಸು. ಆದರೆ ನಿನೆವೆಯ ಪಟ್ಟಣಕ್ಕೆ ಅವನ ಸಂದೇಶ ಹಿತಕರವಾಗಿರಲಿಲ್ಲ. ಇವನ ಪ್ರವಾದನೆ ನಿನವೆ ಧ್ವಂಸವಾಗುತ್ತದೆ ಎಂದು.
- ಯೋನನ ಪ್ರಚಾರದಿಂದಾಗಿ ನೂರು ವರ್ಷದ ಹಿಂದೆ ನಿನವೆ ಪಟ್ಟಣ ಪಶ್ಚಾತ್ತಾಪಪಟ್ಟು ಬದಲಾವಣೆಯಾಗಿದ್ದಿತು. ಆದರೆ ತನ್ನ ಪಾಪಗಳಿಂದ ಪಟ್ಟಣವು ನಾಶವಾಗಲು ಪ್ರಾರಂಭವಾಯಿತು.
- ಸುಮಾರು ಕ್ರಿ.ಪೂ. 612ರಲ್ಲಿ ಈ ಪಟ್ಟಣ ರಾಜಧಾನಿಯಾಗಿತ್ತು, ಅಸ್ಸೀರಿಯನ್ನರು ಕೆಲವು ವರ್ಷಗಳ ನಂತರ ಸಂಪೂರ್ಣವಾಗಿ ನಾಶಗೊಂಡರು. ಈ ಸಮಯಗಳ ಮುಂಚೆ ಈ ಪುಸ್ತಕವನ್ನು ಬರೆಯಲಾಗಿತ್ತು. ಇದು ಹಳೆಯ ಒಡಂಬಡಿಕೆಯ ಪುಸ್ತಕಗಳಲ್ಲಿ ಒಂದಾದ ಇದನ್ನು ಹೊಸ ಒಡಂಬಡಿಕೆಯಲ್ಲಿ ಕಾಣಲಾರೆವು. ಉಳಿದ ಆರು ಪುಸ್ತಕಗಳುದೆಂದರೆ (ಎಜ್ರ, ನೆಹೆಮೀಯ, ಎಸ್ತೇರಳು, ಪ್ರಸಂಗಿ, ಪರಿಮಗೀತೆ ಮತ್ತು ಓಬದ್ಯ)

**ಕೆಳಕ್ಕೆ ಉರುಳುವ ನಿನವೆ (ನಹೂಮ 1:1-7)**

- ಯೆಹೋವನು ರೋಷವುಳ್ಳವನು, ಮುಯ್ಯಿಗೆಮುಯ್ಯಿ ತೀರಿಸುವಂಥವನು (1:2)
- ಯಹೋವನು ಕೋಪಗೊಳ್ಳುವುದರಲ್ಲಿ ಶಾಂತಿಸ್ವರೂಪದವನಾದರೂ ಶಕ್ತಿಯಲ್ಲಿ ಮಹತ್ವನು. ದುರ್ಮಾರ್ಗದವರನ್ನು ಎಷ್ಟು ಮಾತ್ರಕ್ಕೂ ಶಿಕ್ಷಿಸದೇ ಇರನು (1:3)
- ದೇವರು ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟಿದ್ದಾನೆ. ಹಾಗು ಪ್ರಕೃತಿಯನ್ನು ನ್ಯಾಯ ತೀರ್ಪು ಉಂಟುಮಾಡಲು ಉಪಯೋಗಿಸುತ್ತಾನೆ. (1:2-6)
- ನಿನವೆ ಪಾಪಗಳು ( ನಹೂಮ 1:8-3:19)
- ಯೆಹೋವನ ವಿರುದ್ಧವಾಗಿ ದುರಾಲೋಚನೆ ಮಾಡಿತು. (1:11)
- ಎಲ್ಲಾ ಕಡೆ ವಿಗ್ರಹಗಳು (1:14)
- ಸುಳ್ಳಿನಿಂದಲೂ ಕಳ್ಳತನದಿಂದಲೂ ತುಂಬಿತ್ತು (3:1)
- ಸೂಳೆತನಗಳಿಂದ ಜನಾಂಗಗಳನ್ನೂ ತನ್ನ ಮಾಟಗಳಿಂದ ಗೋತ್ರಗಳನ್ನು ಗುಲಾಮರನ್ನಾಗಿ ಮಾಡಿಕೊಂಡಿತ್ತು (3:4)

ಅನೇಕ ಪ್ರವಾದನೆಗಳು ಪದ್ಯದ ರೂಪದಲ್ಲಿ ನಾಶವವಾಗುವ, ಬೀಳುವ ನಿನವೆ ಪಟ್ಟಣದ ವಿವರಣೆಯಾಗಿತ್ತು. ಸುರಕ್ಷತೆ ಸಿಕ್ಕಿದ್ದು, ಕೇವಲ ದೇವರ ಮಕ್ಕಳಿಗಾಗಿ, ಕಹಿತನ, ಗೋಳುಗುಟ್ಟಿಸುತನ, ತನ್ನ ದಾರಿಯ ಫಲವನ್ನು ತಿನ್ನುತ್ತಾರೆ. ದೇವರ ಮುಂದೆ/ ಅನುಭವಿಸಬೇಕಾದದ್ದು ಕೊನೆಯದಾಗಿ ಅವರು ಭಯಂಕರವಾದ ಬಿರುಗಾಳಿಯನ್ನು ಕೊಯ್ಯುವರು. ಇಗೋ, ಬೆಟ್ಟಗಳ ಮೇಲೆ ಶುಭಸಮಾಚಾರವನ್ನು

ತಂದು ಸಮಾಧಾನ ತಿಳಿಸುವವನ ಪಾದಗಳನ್ನು ನೋಡು. ಯಹೂದನೇ ನಿನ್ನ ಪರಿಶುದ್ಧ ಹಬ್ಬಗಳನ್ನು ನಡೆಸು, ನಿನ್ನ ಹರಕೆಗಳನ್ನು ಸಲ್ಲಿಸು ಏಕೆಂದರೆ ಇನ್ನು ಮೇಲೆ ದುಷ್ಟರು ನಿನ್ನ ಮೇಲೆ ಮುತ್ತಿಗೆ ಹಾಕರು. ಅವರು ಸಂಪೂರ್ಣವಾಗಿ ನಾಶಮಾಡಲ್ಪಟ್ಟಿದ್ದಾರೆ. (1:15) ಈ ಪುಸ್ತಕ ಈ ವಾಕ್ಯಗಳಿಂದ ಕೊನೆಗೊಂಡಿದೆ.

ಯಾರೆಲ್ಲಾ ನಿಮ್ಮ ಅಂತ್ಯದ ಸುದ್ದಿಯನ್ನು ಕೇಳುವರೋ ಚಪ್ಪಾಳೆ ತಟ್ಟಿ ಹಾಡುವರು. ದೇವರ ವಾಕ್ಯದ ಪ್ರಕಾರ ಈ ಪಟ್ಟಣವು ಅನೇಕ ಶತಮಾನಗಳಿಗೆ ಕಾಣೆಯಾಗಿತ್ತು . ದೇವರ ವಾಕ್ಯ ಪೂರ್ಣಗೊಂಡಿತ್ತು.

**<u>ಅನ್ವಯ</u>** : ನೀವು ನಂಬಿಕೆಯಲ್ಲಿ ಹೋರಾಡುತ್ತಿರುವ ಶಿಷ್ಯರ ಜೊತೆ ಪ್ರಾರ್ಥಿಸಿ ಸ್ವಲ್ಪ ಸಮಯ ಕಳೆಯಿರಿ.

ಅವರಿಗೆ ಕಾರ್ಯಶಕ್ತಿ ಮತ್ತು ಪರಮಾಧಿಕಾರದ ಹುಡುಗೊರೆ ಸಿಗುವುದು. ಯಾರು ಅವರನ್ನು ನಂಬುತ್ತಾರೋ, ಇಕ್ಕಟ್ಟಿನ ದಿವಸದಲ್ಲಿ ಬಲವಾದ ಕೋಟೆಯಾಗಿದ್ದಾನೆ. (1:2)

ಬಡವನನ್ನು ಪರಾಮರಿಸುವವನು ಧನ್ಯನು ಕೇಡಿನ ಸಮಯದಲ್ಲಿ ಯೆಹೋವನು ಅವನನ್ನು ತಪ್ಪಿಸುವನು. ಯೆಹೋವನು ಅವನನ್ನು ಕಾಪಾಡಿ ಜೀವದಲ್ಲಿಡುವನು. ಅವನು ಭೂಮಿಯಲ್ಲಿ ಧನ್ಯನಾಗಿರುವನು, ನೀನು ಅವನ ಶತೃಗಳ ವಶಕ್ಕೆ ಅವನನ್ನು ಒಪ್ಪಿಸದೆ ಇರುವೆ. ವ್ಯಾಧಿಯ ಮಂಚದಲ್ಲಿ ಅವನನ್ನು ಯಹೋವನು ಬಲಪಡಿಸುವನು. ಅವನ ಅಸ್ವಸ್ಥತೆಯನ್ನು ಆತನು ಹೋಗಲಾಡಿಸುವನು. ಕೀರ್ತನೆಗಳು 4:1-3

------------------------------------------------------------

## <u>ದಿನ-20</u>

### ಹಬಕ್ಕೂಕ್ ಪುಸ್ತಕ (ಹಬಕ್ಕೂಕ್ 1-3)

**<u>ಮುನ್ನುಡಿ</u>** :

- ಹಬಕ್ಕೂಕ್ ಅಂದರೆ ಆಲಂಗಿಸು ಎಂದು ಅರ್ಥ.
- ಹಬಕ್ಕೂಕ್ ಯೂದ ರಾಜ್ಯದ ಸೇವೆಯಲ್ಲಿದ್ದನು. (ದಕ್ಷಿಣ ರಾಜ್ಯ)
- ಈ ಪುಸ್ತಕವು ದೇವರ ಮತ್ತು ಪ್ರವಾದಿಯ ನಡುವಿನ ಸಂಭಾಷಣೆಯನ್ನು ವಿವರಿಸುತ್ತದೆ. ಪ್ರವಾದಿಯು ಹೇಗೆ ಒಂದು ಕೆಟ್ಟುಹೋದ ದೇಶವು ದೇವರ ಜನರನ್ನು ಶಿಕ್ಷಸಬಹುದು ಎಂಬುದಾಗಿ ದೇವರನ್ನು ಪ್ರಶ್ನಿಸುತ್ತಾನೆ.
- ಅಂತ್ಯದಲ್ಲಿ ಒಂದು ಪದ್ಯದ ಮೂಲಕ ದೇವರ ಉತ್ತರವನ್ನು ಅರ್ಥಮಾಡಿಕೊಂಡಿದ್ದನ್ನು ವಿವರಿಸುತ್ತಾನೆ.

### ಹಬಕ್ಕೂಕ್ನ ಮೊದಲ ಪ್ರಶ್ನೆ ( ಹಬ 1:1-4)

ಜನರ ಪಾಪದಿಂದ ಕೋಪಗೊಂಡು ದೇವರು ಏಕೆ ಇದರ ಸಲುವಾಗಿ ಪ್ರತಿಕ್ರಿಯಿಸುತ್ತಿಲ್ಲವೆಂದು ಪ್ರವಾದಿಯು ಪ್ರಶ್ನಿಸುತ್ತಾನೆ.

### ದೇವರ ಉತ್ತರ (ಹಬ 1:5-11)

ದೇವರು ಹೇಗೆ ಬಾಬಿಲೋನಿಯರು ಯೂದ ಜನರನ್ನು ಶಿಕ್ಷಿಸುತ್ತಾರೆಂಬುದರ ಬಗ್ಗೆ ಮಾತನಾಡುತ್ತಾರೆ. ಬಾಬಿಲೋನಿಯರು ಸ್ವತಃ ಪಾಪಿಗಳಾಗಿದ್ದರು. ದೇವರು ಅವರನ್ನು ನ್ಯಾಯ ತೀರ್ಪಿನ ಒಂದು ಅಸ್ತ್ರವನ್ನಾಗಿ ಪ್ರಯೋಗಿಸುತ್ತಾರೆ.

**ಹಬಕ್ಕೂಕ್‌ನ ಎರಡನೆಯ ಪ್ರಶ್ನೆ (ಹಬ 1:12, 2:1)**

ದೇವರು ಹೇಗೆ ಒಂದು ಪಾಪಿ ದೇಶವನ್ನು ಉಪಯೋಗಿಸಬಹುದೆಂದು ಕೇಳಿ ಆಶ್ಚರ್ಯಗೊಳ್ಳುತ್ತಾನೆ. ಈ ವಚನದಲ್ಲಿ ಹಬಕ್ಕೂಕನು ದೇವರ ಉತ್ತರಕ್ಕೆ ಕಾಯುತ್ತಿರುವ ಒಬ್ಬ ಕಾವಲುಗಾರನಾಗಿ ಚಿತ್ರಿಸಿದ್ದಾರೆ.

**ದೇವರ ಉತ್ತರ (ಹಬ 2:2-20)**

- ದೇವರು ಬಾಬಿಲೋಯನಿಯರ ಸ್ವಭಾವವನ್ನು ಅರಿತ್ತಿದ್ದರು.
- ದೇವರ ಉತ್ತರವು ಹೀಗಿತ್ತು ' ನೀತಿವಂತರು ನಂಬಿಕೆಯಿಂದ ಜೀವಿಸುವರೆಂದು"
- ನಂಬಿಕೆಯು ಕಷಗಾಲದಲ್ಲಿಯೂ ಹೋರಾಡಲು ಶಕ್ತಿಯನ್ನು ನೀಡುತ್ತದೆ.
- ದೇವರು ಬಾಬಿಲೋನಿಯರಿಗೂ ಭವಿಷ್ಯದಲ್ಲಿ ಬರುವ ಐದು ಮಹಾಮಾರಿಯ ಬಗ್ಗೆ ಮಾತನಾಡುತ್ತಾರೆ.

**ಹಬಕೂಕನ ಕೀರ್ತನೆಗಳು : ( ಹಬ 3:1-9)**

- ದೇವರ ಯೋಜನೆಯನ್ನು ಅರಿತಾಗ ಪ್ರವಾದಿಯು ದೇವರ ಯೋಜನೆಗೆ ಅನುಸಾರವಾಗಿ ಭಯ ಭಕ್ತಿಯಿಂದ ಒಪ್ಪುತ್ತಾನೆ.
- ದೇವರ ನೀತಿ ಕಾರ್ಯಗಳನ್ನು ಯಾವ ರೀತಿ ಮಹಾ ಅದ್ಭುತದಿಂದ ಸಾಧಿಸಲಾಯಿತೆಂಬುದನ್ನು ಒಪ್ಪುತ್ತಾನೆ.

ನಾವು ಎಲ್ಲಾ ಸಮಯದಲ್ಲೂ ದೇವರ ಯೋಜನೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಆದರೂ ನಮ್ಮನ್ನು ದೇವರಿಗೆ ಸಮರ್ಪಿಸಿ ನಂಬಿಕೆಯಿಂದ ಇರೋಣ.

**ಅನ್ವಯ** : ನಿಮ್ಮ ಜೀವನದಲ್ಲಿ ನಡೆದ ಯಾವ ಘಟನೆಯನ್ನು ನಿಮ್ಮಿಂದ ಅರ್ಥಮಾಡಿಕೊಳ್ಳಲಾಗಲಿಲ್ಲ, ಆ ಸಮಯದಲ್ಲಿ ನಿಮ್ಮ ಪ್ರತಿಕ್ರಿಯೆ ಹೇಗಿತ್ತು ?

**ದೇವಜನರಲ್ಲಿ ತೋರತಕ್ಕ ಸದ್ಗುಣಗಳು:**

4 ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತೇನೆ.

5 ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ; ಕರ್ತನು ಹತ್ತಿರವಾಗಿದ್ದಾನೆ.

6 ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ.

7 ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು. ಫಿಲಿಪ್ಪಿಯರಿಗೆ 4:4-7

---------------------------------------------------------------

**<u>ದಿನ-21</u>**

**ಚೆಫನ್ಯ ಪುಸ್ತಕ (ಚೆಫ 1-3)**

**<u>ಮುನ್ನುಡಿ</u>** :

- ಈ ಪ್ರವಾದಿಯ ಹೆಸರ ಅರ್ಥ ಯಹೋವನಿಂದ ಬಚ್ಚಿಟ್ಟಲ್ಪಟ್ಟವನು.
- ವಚನ 1:1 ತನ್ನ ಹಿಂದಿನ ನಾಲ್ಕು ವಂಶದ ಬಗ್ಗೆ ಹೇಳುತ್ತಾನೆ. ಇದು ಹೆಜಕೀಯ ರಾಜನ ವಂಶದ ತನಕ ಹೋಗುತ್ತದೆ.
- ಯೂದ ಮತ್ತು ಯೂರೊಸಲೇಮ್ ದಲ್ಲಿ ನಡೆದ ಘಟನೆಗಳು ಯಹೋಶುವನ ಆಳ್ವಿಕೆಯಲ್ಲಿ ಬಂದಿರಲಿಲ್ಲವೆಂಬುದನ್ನು ಸೂಚಿಸುತ್ತಾನೆ.
- ಈ ಪ್ರವಾದಿಯು ಯೊರೊಸಲೇಮನವೆಂಬುದನ್ನು ಮಾತ್ರ ನಮಗೆ ಗೊತ್ತಾಗುತ್ತದೆ. ಈ ಪ್ರವಾದಿಯ ಬರಹದಿಂದ ಆತನ ಗುಣವು ಅತಿ ನೀತಿವಂತನೆಂಬುದಾಗಿ ಹಾಗೂ ಪಾಪವನ್ನು ದ್ವೇಷಿಸುವನೆಂಬುದಾಗಿಯು, ದೇವರು ಬರುವ ಕಾಲವು ಅತಿ ಶೀಘ್ರವೆಂದು ನಂಬುವವನಾಗಿ ಕಾಣಬರುತ್ತದೆ.

**ಯೂದ ರಾಜ್ಯ ನಾಶ : (ಚೆಫ 1:1-2 :3).**

- ಅವರು ಸಂಪೂರ್ಣವಾಗಿ ನಾಶವಾಗುತ್ತಾರೆ. **ಯೂದ**ದೇಶದಿಂದ ಅವರ ನಾಶವು ಪ್ರಾರಂಭಿಸುತ್ತದೆ ( ಏಕೆಂದರೆ ಅವರು ದೇವರ ಆರಾಧನೆಯ ಜೊತೆ ಬಾಲ್ ಆರಾಧನೆಯನ್ನು ಮಿಶ್ರಿಸಿದರು. (ವಚನ 4) ಶಾಸ್ತ್ರಆರಾಧನೆ (ವಚನ 5) ಅನ್ಯ ದೇವರ ಆರಾಧನೆ (ವಚನ 8-9)
- ಈ ನಾಶವನ್ನು 'ದೇವರ ಮಹೋನ್ನತ ದಿನವೆಂದು ಕರೆಯಲ್ಪಡುವುದು.
- ಈ ನಾಶವು ಬರೀ ಕೆಟ್ಟವರಿಗೆ ಮಾತ್ರ ಸೀಮಿತವಾದದ್ದು. ವಚನ ( 2:1-3) ತಾಳ್ಮೆಯಾದವರು ಶಿಕ್ಷೆಗೆ ಒಳಗಾಗಲಿಲ್ಲ. (ರಾಜ್ಯಗಳು ಹಿಂತಿರುಗದ ಮಟ್ಟವನ್ನು ಸೇರಿತು, ಆದರೆ ತಾಳ್ಮೆಯಿಂದ ಇದ್ದವರಿಗೆ ಮಾತ್ರ ಆಶೆಯಿತ್ತು.

ನೆರೆಹೊರ ರಾಜ್ಯಗಳು ನಾಶವಾಗುತ್ತದೆ : (ಚೆಫ 2:4-3:8)

1) ಫಿಲಿಸ್ಟಿಯಾ (ವಚನ 4-7)

2) ಮೋಬ್ ಮತ್ತು ಆಮೋನಾ (ವಚನ 8-11)

3) ಕುಶ್-ಯಥಿಯೋಪಿಯ, ಈಜಿಪ್ಟ್(ವಚನ 12)

4) ಅಸ್ಸೆರಿಯಾ (ವಚನ 13-15)

ನೆರೆಹೊರೆ ದೇಶದ ನಾಶವನ್ನು ನೋಡಿಯಾದರೂ ದೇವರ ಮಕ್ಕಳು ಮಾನಸಾಂತರಗೊಳ್ಳಬೇಕೆಂದು ಅಪೇಕ್ಷಿಸಿದರು. ಆದರು ಯೂದ ದೇಶವು ಮಾನಸಾಂತರಗೊಳ್ಳಲಿಲ್ಲ.

ಆದುದರಿಂದ ದೇವರು ಈ ಲೋಕವನ್ನು ತನ್ನ ಕೋಪದಿಂದ ಮಹಾಮರಿಯನ್ನು ಸುರಿದು ಶಿಕ್ಷಿಸುತ್ತಾನೆ (ವಚನ 3-8)

ನಾಶವು ದೇವರ ಉಳಿದ ಮಕ್ಕಳ ಗುಂಪಿಗೆ ಜನ್ಮ ನೀಡುತ್ತದೆ.

ಉಳಿದ ದೇವರ ಮಕ್ಕಳ ಗುಂಪು ತನ್ನನ್ನು ಸದಾಕಾಲ ಸೇವೆ ಮಾಡಿ ತನ್ನ ಅನುಸಾರವಾಗಿ ಆರಾಧಿಸವರೆಂದು ಕನಸುಕಾಣುತ್ತಾರೆ.

**ಈ ಉಳಿದ ದೇವರ ಮಕ್ಕಳ ಗುಂಪಿನ ಸ್ವಭಾವ ಮತ್ತು ಕ್ರಿಯೆಗಳು ಈ ರೀತಿಯಾಗಿ ಇರುತ್ತದೆ.**

- ಪರಿಶುದ್ಧವಾದ ತುಟಿಗಳಿಂದ ದೇವರ ನಾಮವನ್ನು ಕರೆಯುತ್ತಾರೆ (ವಚನ 9)
- ಕಾಣಿಕೆಯನ್ನು ನೀಡುವುದು (ವಚನ 10)
- ತಾಳ್ಮೆಯಿಂದ ದೇವರನ್ನು ನಂಬುವುದು (ವಚನ 12)
- ಸುಳ್ಳನ್ನು ಆಡದೆ ಇರುವುದು (ವಚನ 13)

ದೇವರು ಈ ಉಳಿದ ದೇವರ ಮಕ್ಕಳ ಗುಂಪನ್ನು ನೋಡಿ ಸಂತೋಷಪಟ್ಟನು. ತನ್ನ ಮಕ್ಕಳಿಗೋಸ್ಕರ ಹಾಡನ್ನು ಹಾಡಿದನು. ಈ ರೀತಿ ನಮ್ಮ ದೇವರ ಹೃದಯವನ್ನು ಇಲ್ಲಿ ನೋಡುತ್ತೇವೆ.

ಯಾವ ರೀತಿ ದೇವರು ನಮ್ಮಲ್ಲಿ ಅತಿ ಆಳವಾದ ಸಂಬಂಧವನ್ನಿಡಲು ಇಚ್ಚಿಸುತ್ತಾನೆಂಬುದನ್ನು ಅರಿತುಕೊಳ್ಳೋಣ.

ನಾವು ದೇವರ ಮಕ್ಕಳ ಗುಂಪಾಗಿದ್ದೆವಾ? ನಾವು ಅವರ ಆಶ್ರಯವನ್ನು ಬಯುಸುವಂತಿರುವೆವಾ? ಅಥವಾ ನಾವು ಆತನ ಕೋಪಕ್ಕೆ ಒಳಗಾಗಿದ್ದೇವಾ? ನಾವು ನಮ್ಮನ್ನೇ ತಾಳ್ಮೆಗೊಳಿಸಿಕೊಂಡು ದೇವರ ಸಮೀಪಕ್ಕೆ ಹೋಗೋಣ.

**<u>ಅನ್ವಯ</u>** : ನಿಮಗೆ ಇಷ್ಟವಾದ ದೇವರ ಹಾಡನ್ನು ಹಾಡಿ ಆತನಲ್ಲಿ ಸಂತೋಷಗೊಳ್ಳಿ (69:30-31)

ನಾನು ಸಂಕೀರ್ತಿಸುತ್ತಾ ದೇವರ ನಾಮವನ್ನು ಕೊಂಡಾಡುವೆನು. ಕೃತಜ್ಞತಾಸ್ತುತಿಯಿಂದ ಘನಪಡಿಸುವೆನು. ಇದು ಯಹೋವನಿಗೆ ಬಹು ಪ್ರಿಯವಾದದ್ದು. (ಕೀರ್ತನೆಗಳು 68 :30-31)

-----------------------------------------------------------------

## <u>ದಿನ-22</u>

**ಹಾಗಾಯ್ ಪುಸ್ತಕ (ಹಾಗಾ 1-2)**

### <u>ಮುನ್ನುಡಿ</u>

ಹಾಗ್ಗಾಯ ಅಂದರೆ ಸಂಭ್ರಮವೆಂದು ಅರ್ಥ.

ಹಾಗ್ಗಾಯ ಜಕರಿಯನ ಜೊತೆ ಸೇರಿ ಜನರನ್ನು ದೇವರ ಆಲಯವನ್ನು ಕಟ್ಟಲು ಪುರೇಪಿಸಿದರು.

ಈ ದೇವಲಾಯಕ್ಕೆ ಆಸ್ತಿವಾರವನ್ನು ಹಾಕಿ 16ವರ್ಷಗಳಾಗಿತ್ತು . (ಎಜ್ರ 3:12)

ನೆರೆಹೊರೆಯ ರಾಜ್ಯಗಳಿಂದ ಕೆಲವು ಶೋಷಣೆಯನ್ನು ಅನುಭವಿಸಿದಾಗ ಯೂದ ಜನರು ಆಲಯವನ್ನು ಕಟ್ಟುವ ಆಶೆಯನ್ನು ಬಿಟ್ಟುಬಿಟ್ಟರು (ಎಜ್ರ 4:1-5)

ಈ ಪ್ರವಾದನೆಯ@ (520 ಕ್ರಿ.ಪೂ.) ನಾಲ್ಕು ಸಂದೇಶವನ್ನು ನಾಲ್ಕು ತಿಂಗಳಲ್ಲಿ ಕೊಟ್ಟಿದ್ದ ನಾನು ಸಂರ್ಕಿಸುತ್ತಾ ದೇವರ ನಾಮವನ್ನು ಕೊಂಡಾಡುವನು. ಕೃತಜ್ಞತಾಸ್ತುತಿಯಿಂದ ಘನಪಡಿಸುವನು. ಇದು ಯಹೋವನಿಗೆ ಬಹು ಪ್ರಿಯವಾದದ್ದು. (ಕೀರ್ತನೆಗಳು 68:30-31).

**ದೇವಾಲಯವನ್ನು (ಪುನಃ ಕಟ್ಟುವುದು) (ಹಾಗಾ : 1:1-15)**

ತಾನು ನೀಡುವ ಸಂದೇಶ ದೇವರಿಂದ ಬಂದದ್ದು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರು. ಈ ಪುಸ್ತಕದಲ್ಲಿ ಬರೀ 38 ವಚನಗಳಿವೆ. ಅದರಲ್ಲಿ 26 ಸಲಾ ದೇವರು ಘೋಷಿಸುತ್ತಾರೆ. ಎಂಬುದಾಗಿ ಹೇಳಲ್ಪಡುತ್ತದೆ.

ಅವರಿಗೆ ನೀಡಿದ ಕೆಲಸವನ್ನು ಮಾಡಿಮುಗಿಸಿದ್ದರು. ಅವರಿಗೆ ನೀಡಿದ ಕೆಲಸವೇ ದೇವಾಲಯವನ್ನು ಪುನಃ ಕಟ್ಟುವುದು. ಇವರು ನಾಲ್ಕು ವರ್ಷಗಳಲ್ಲಿ ದೇವಾಲಯವನ್ನು ಕಟ್ಟಿ ಮುಗಿಸಿದರು (ಎಜ್ರಾ 6:15)

ಜನರು ತಮ್ಮ ತಮ್ಮ ಮನೆ ಕಟ್ಟಲು ಉತ್ಸಾಹದಿಂದ ಇದ್ದರು. ಆದರೆ ದೇವರ ಮನೆಯನ್ನು ಹಾಳಾಗಿ ಹೋಗಲು ಬಿಟ್ಟುಬಿಟ್ಟಿದ್ದರು (ವಚನ 4)

ದೇವರು ಅವರು ಪಡುವ ಕಷ್ಟಗಳು ಜನರು ನೀಡುವ ತಪ್ಪಾದ ಮುಖ್ಯತ್ವದಿಂದಲೇ ಎಂದು ಸ್ಪಷ್ಟಪಡಿಸುತ್ತಾರೆ (ವಚನ 5-11). ಈ ಸಂದೇಶವನ್ನು ಜನರಿಗೆ ಸ್ಪಷ್ಟಪಡಿಸಲು ಮೂರುವಾರವಾಗಿತ್ತು. ನಂತರ ಜನರು ದೇವಾಲಯವನ್ನು ಕಟ್ಟುವ ಕೆಲಸವನ್ನು ಕೈಗೊಂಡರು (ವಚನ 15).

ನಿಮ್ಮ ಜೀವನ ದೊಡ್ಡ ದೊಡ್ಡ ಮುಖ್ಯತ್ವಗಳಾವುವು :

**ಭವಿಷ್ಯದ ಕೀರ್ತಿ ಹಿಂದಿನ ಕೀರ್ತಿಗಿಂತ ಉನ್ನತವಾದದ್ದು : (ಹಾಗಾಯ್ 2: 1-9)**

ಎರಡನೆಯ ಸಂದೇಶವೇನೆಂದರೆ, ಜನರನ್ನು ಸತ್ಯದ ಮಾರ್ಗಕ್ಕೆ ಕರೆಯುವುದು ಹಾಗೂ ದೇವರು ತಮ್ಮಲ್ಲಿ ಇರುತ್ತಾರೆ ಎಂಬುದನ್ನು ಅರ್ಥಮಾಡಿಸುವುದು.

ಮೊದಲನೆಯ ದೇವಾಲಯವನ್ನು ನೋಡಿರುವ ಹಿರಿಯರು ಹೊಸ ದೇವಾಲಯವನ್ನು ನೋಡಿ ಸಂತೋಷವಾಗಿರಲಿಲ್ಲ (ವಚನ 3), ಆದರೆ ದೇವರು ಹಿಂದಿನಕಾಲದ ಹಾಗೆಯೇ ಈಗಲು ತಮ್ಮ ಬಳಿ ಇದ್ದಾನೆಂಬುದನ್ನು ಅರಿವುಗೊಳಿಸಿದರು (ವಚನ 5).

ದೇವಾಲಯವನ್ನು ಪುನಃ ಕಟ್ಟುವುದು ಮಸೀಹನನ್ನು ಕರೆತರುವುದಾಗಿರುವ ಯೋಜನೆಯೆಂದು ನೆನಪಿಸುತ್ತಾರೆ (ವಚನ 2) ಅದರ ಅರ್ಥವೇನೆಂದರೆ ಈ ದೇವಾಲಯದ ಆರ್ಥಿಕ ಕೀರ್ತಿ ಇದಕ್ಕಿಂತ ಉನ್ನತವಾದದ್ದು ಎಂದು.

**ಕಷ್ಟಗಳು ದೈವೀಕ ಶಿಸ್ತು (ಹಾಗಾ 2:10-19)**

ದೇವರು ಸೋಮಾರಿತನದ ಹೃದಯವನ್ನು ಬಿಟ್ಟು ಇರಲು ಹಾಗೂ ಪರಿಶುದ್ಧವಾದ ಹೃದಯವನ್ನು ಪಡೆಯಲು ಕರೆಯುತ್ತಾನೆ. ಇದಕ್ಕಾಗಿ ಒಂದು ಸಣ್ಣ ಕತೆಯ ಮೂಲಕ ವಿವರಿಸುತ್ತಾನೆ.

ದೇವರಿಗೋಸ್ಕರ ಬೇರ್ಪಡಿಸಲ್ಪಟ್ಟ ಮಾಂಸವೂ ತನ್ನ ದೈವೀಕತನವನ್ನು ಮುಟ್ಟಿದ ಎಲ್ಲಾ ವಸ್ತುಗಳಿಗೆ ಹರಡಲಾಗದು; ಆದರೆ ಕೆಟ್ಟು ಹೋದ ಜನರು ತಮ್ಮ ಕೆಟ್ಟುತನವನ್ನು ಮುಟ್ಟುವ ಎಲ್ಲಾ ವಸ್ತುಗಳಿಗೆ ಹರಡಲು ಸಾಧ್ಯ.

ಸಾಮಾನ್ಯ ಶಬ್ದದಲ್ಲಿ ವಿವರಿಸಬೇಕಾದರೆ, ಒಬ್ಬ ಆರೋಗ್ಯವಾದ ಮನುಷ್ಯನು ತನ್ನ ಆರೋಗ್ಯವನ್ನು ಅನಾರೋಗ್ಯ ಮನುಷ್ಯರಿಗೆ ನೀಡಲು ಸಾಧ್ಯವಿಲ್ಲ.

ಆದರೆ ಒಬ್ಬ ಅನಾರೋಗ್ಯ ಮನುಷ್ಯನು ತನ್ನ ಅನಾರೋಗ್ಯವನ್ನು ಆರೋಗ್ಯ ಮನುಷ್ಯನಿಗೆ ಹರಡಿಸಲು ಸಾಧ್ಯ.

ಆದುದರಿಂದ ದೇವರು ಹೇಳುವುದೇನೆಂದರೆ ಪರಿಶುದ್ಧ ಕೆಲಸಗಳು ಒಬ್ಬ ವ್ಯಕ್ತಿಯನ್ನು ಪರಿಶುದ್ಧವನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೆ ಪರಿಶುದ್ಧ ಹೃದಯವುಳ್ಳವರು ಪರಿಶುದ್ಧ ಕೆಲಸಗಳನ್ನು ಮಾಡಲು ಸಾಧ್ಯ.

ಒಳ್ಳೆಯ ಕೆಲಸಗಳು ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ, ಆದರೆ ನಾವು ರಕ್ಷಣೆ ಹೊಂದಿದ ಕಾರಣಕ್ಕಾಗಿ ಒಳ್ಳೆಯ ಕೆಲಸವನ್ನು ಮಾಡಬೇಕಾಗುತ್ತದೆ.

**ಮಸೀಹನ ಆಗಮನವೇ ಅಂತಿಮ ಆಶೀರ್ವಾದ (ಹಾಗಾಯ್ 2: 20-23)**

ಜೆರುಬಾಬೆಲ್‌ನನ್ನು ಕ್ರಿಸ್ತನಹಾಗೆ ಚಿತ್ರಿಸಿದ್ದಾರೆ.

ಅವನು ಯೇಸುವ ಕುಲದಲ್ಲೇ ಬಂದಿರುತ್ತಾನೆ. (ಮತ್ತಾಯ 1:12-13)

ಈ ಪ್ರವಾದನೆಯು ದೇವಾಲಯವನ್ನು ಕಟ್ಟಲು ಪ್ರೇರೇಪಿಸಿ ಕಟ್ಟಿಮುಗಿಸಿದ ಮೂಲಕ ಪೂರ್ಣಗೊಳ್ಳುತ್ತದೆ. ಅಂತಿಮವಾಗಿ ಈ ದೇವಾಲಯವನ್ನು ಕಟ್ಟುವ ಮೂಲಕ ನಿರಂತರವಾದ ಕ್ರಿಸ್ತನ ಸಭೆಯನ್ನು ಕಟ್ಟಲು ದಾರಿಮಾಡಿಕೊಡುತ್ತದೆ.

**ಅನ್ವಯ** : ಹೇಗೆ/ ಎಲ್ಲಿ ನಮ್ಮ ಸಮಯ ಹಾಗೂ ಹಣವನ್ನು ಉಪಯೋಗಿಸುತ್ತಿದ್ದೇವೆ? ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡು ಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡುಕೊಂಡನು (ಮುತ್ತಾಯ 13:44)

--------------------------------------------------------------

## ದಿನ-23

**ಜೆಕರ್ಯನ ಗ್ರಂಥ (ಜೆಕರ್ಯ 1-2)**

**ಮುನ್ನುಡಿ** :

- **ಜೆಕರ್ಯ** ಹೆಸರಿನ ಅರ್ಥ 'ಕರ್ತನ ನೆನಪಿನಲ್ಲಿ ಇರುವವನು' ಎಂದು, ಇವನು ಹಗ್ಗಾಯ ಎಂಬ ಪ್ರವಾದಿಯೊಡನೆ ಕೂಡಿ ಇಸ್ರೇಲ್ ಪುನಸ್ಥಾಪಿಸಲು ಹೆಣಗಾಡಿದನು.
- ಬಾಬಿಲೋನಿಯರ ಸೆರೆಯಿಂದ, ಜೆರುಬ್ಬಾಬೆಲ್ ಎಂಬವನ ನೇತೃತ್ವದಲ್ಲಿ ಹಿಂತಿರುಗಿದವರು 538 ಕ್ರಿ.ಪೂ. ದಲ್ಲಿ ದೇವಾಲಯವನ್ನು ಪುನಃ ಕಟ್ಟಿದರು.
- ಆದರೂ 16 ವರ್ಷಗಳು ಕಳೆದರೂ, ದೇವಾಲಯವು ಪೂರ್ಣವಾಗಿರಲಿಲ್ಲ, ಆದ್ದರಿಂದ ಹಗ್ಗಾಯನು ದೇವಾಲಯದ ಕೆಲಸ ಪೂರ್ಣಗೊಳಿಸಲು ಪ್ರವಾದನೆಗಳಿಂದ, ಬೋಧನೆಗಳಿಂದ ಅವರನ್ನು ಪ್ರೋತ್ಸಾಹಪಡಿಸುವಾಗ ಜೆಕರ್ಯನು ಅವನೊಂದಿಗೆ ಬೋಧಿಸತೊಡಗಿದನು.
- ಅವರಿಬ್ಬರ ಪ್ರೋತ್ಸಾಹದಿಂದ ಕ್ರಿ.ಪೂ. 516ರಲ್ಲಿ ದೇವಾಲಯವು ಪುನಃ ಕಟ್ಟಲ್ಪಟ್ಟಿತು (ಎಜ್ರ 6:11)

**ಮೊದಲನೆಯ ದರ್ಶನ (ಕೆಂಪು ಕುದುರೆಯ ಸವಾರನು ಸುಗಂಧವೃಕ್ಷಗಳ ನಡುವೆ) ಜೆಕರ್ಯ 1:1-17)**

- ಈ ದರ್ಶನದ ಸಂದೇಶವೇನೆಂದರೆ, ದೇವರ ದೂತರು ಪ್ರಪಂಚವನ್ನೆಲ್ಲಾ ವೀಕ್ಷಿಸುತ್ತಾರೆ ಮತ್ತು ದೇವರು ತನ್ನ ಆಲಯವನ್ನು ನಿಶ್ಚಿಂತೆಯಿಂದ ಪುನಃ ಕಟ್ಟಿ ಮುಗಿಸಲು ಕಾತುರನಾಗಿದ್ದಾನೆ.
- ದೇವರು ಪ್ರಪಂಚದ ಎಲ್ಲಾ ದೇಶಗಳನ್ನು ತನ್ನ ಹತೋಟಿಯಲ್ಲಿಟ್ಟಿದ್ದಾನೆ. ಕುದುರೆಯ ಬಣ್ಣದ ಅರ್ಥ ಹೀಗಿದೆ ಕೆಂಪು (ಯುದ್ಧ) ಕಂದು (ಬರಗಾಲ) ಬಿಳಿ (ವಿಜಯ)

ದೇವರು ಎಲ್ಲಾ ದೇಶಗಳ ಮೇಲೆ ತನ್ನ ಪ್ರಭುತ್ವವನ್ನು ನೆಡಸುತ್ತಾನೆಂದು ನಾವು ನಂಬಿದ್ದೇವೆಯಾ? ಅಂತ್ಯದಲ್ಲಿ ದೇವರ ಯೋಜನೆಗಳು ನೆರವೇರುವುದೆಂದು ನಾವು ನಿಜವಾಗಿಯೂ ನಂಬಿದ್ದೇವೆಯೇ?

**ಎರಡನೆಯ ದರ್ಶನ (ನಾಲ್ಕು ಕೊಂಬುಗಳು ಮತ್ತು ನಾಲ್ವರು ಕಮ್ಮಾರರು) ಜೆಕರ್ಯ 1:18-21)**

- ಕೊಂಬುಗಳು ಎಂದರೆ ಪ್ರಭುತ್ವ (ಆನ್ಯ ದೇಶಗಳು) ಎಂದರ್ಥ. ಆ ದೇಶಗಳು, ಇಸ್ರಾಯೇಲ್ಯರನ್ನು ದಿಕ್ಕುಪಾಲಾಗಿ ಓಡಿಸಿದ್ದರು.
- ನಾಲ್ಕು ಎಂಬುದು ವಿಶ್ವದ ಸುವ್ಯವಸ್ಥೆಯ ಸಂಖ್ಯೆ.
- ಕಮ್ಮಾರರು ಎಂದರೆ ಇಸ್ರಾಯೇಲರನ್ನು ಚದುರಿಸಿದ ಪ್ರಭುತ್ವಗಳನ್ನು ನಾಶಪಡಿಸಲು ದೇವರು ಏರ್ಪಡಿಸಿದ ಕೆಲವು ಆಯುಧಗಳು ಮತ್ತು ಸಾಧನೆಗಳು.
- ಈ ದರ್ಶನದ ಸಂದೇಶವೇನೆಂದರೆ, ಜನರು ನಿಶ್ಚಿಂತೆಯಿಂದ ಆಲಯವನ್ನು ಕಟ್ಟಿ ಮುಗಿಸಬೇಕೆಂಬುದೇ. ಯಾವ ಪ್ರಬಲ ರಾಷ್ಟ್ರಗಳೂ ದೇವರ ವಿರುದ್ಧ ಹೋರಾಡಿ ದೇವರ ಯೋಜನೆಗಳನ್ನು ಕಾರ್ಯಗತಗೊಳ್ಳುವುದನ್ನು ನಿಲ್ಲಿಸಲಾರವು.

**ಮೂರನೆಯ ದರ್ಶನ : (ಅಳತೆಯ ನೂಲಿನವನು) ಜೆಕರ್ಯ 2:1-13**

- ಯೆರುಸಲೇಮಿನ ಜನರು ತಮ್ಮ ಭವಿಷ್ಯದ ಬಗ್ಗೆ ಮತ್ತು ತಮ್ಮ ತಮ್ಮ ಜೀವನದ ಪರಿಸ್ಥಿತಿಗಳ ಬಗ್ಗೆ ತುಂಬಾ ಕಾಳಜಿಯಿಂದಿದ್ದರು.
- ಈ ಸಂದೇಶದ ಅರ್ಥ ದೇವರು ಅವರನ್ನು ಸಂಪೂರ್ಣವಾಗಿ ಕಾಪಾಡಿ ಅವರ ಎಲ್ಲಾ ಕೊರತೆಗಳನ್ನು ನೀಗಿಸುತ್ತಾನೆಂದು
- ದೇವರು ಮೆಸ್ಸಾಯನ ಕಾಲ (ವ 10-13) ವನ್ನೂ ಇದರಲ್ಲಿ ತೋರಿಸುತ್ತಿದ್ದಾನೆ. ದೇವರು ಕ್ರಿಸ್ತನ ಮೂಲಕ ಪ್ರಪಂಚವನ್ನು ಆಶೀರ್ವದಿಸಲು ಬಯಸುತ್ತಾರೆ.

ಇದರ ಮೂಲಕ, ದೇವರು ಎಲ್ಲಾ ಇಸ್ರಾಯೇಲ್ಯರನ್ನು ಸೆರೆಯಿಂದ ಹಿಂತಿರುಗಿ ತಮ್ಮ ತಾಯ್ನಾಡಿಗೆ ಬರಲು ಬಹಳ ಕಾತರದಿಂದ ಮೊರೆಯಿಡುತ್ತಿದ್ದಾರೆ. ನಾವೂ ಕೂಡ ದೇವರ ರಾಜ್ಯವನ್ನು ಮನಪೂರ್ವಕವಾಗಿ ಹುಡುಕುವಾಗ ನಮ್ಮ ಎಲ್ಲಾ ಕೊರತೆಗಳನ್ನು ದೇವರು ನೀಗಿಸುತ್ತಾರೆ.

**ಅನ್ವಯ** : ನಮ್ಮ ಎಲ್ಲಾ ಸಭೆಗಳೂ / ಸಹಾಯಕರು ಐಕ್ಯತೆಯಿಂದ ಇರುವಂತೆ ಪ್ರಾರ್ಥಿಸೋಣ. ಎಲ್ಲಾ ಕುಟುಂಬ ಸಭೆಗಳಿಗೂ ಮತ್ತು ಎಲ್ಲಾ ಶಿಷ್ಯರಿಗಾಗಿಯೂ ಪ್ರಾರ್ಥಿಸೋಣ,

18 ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ. (ಎಫೆಸ 6:18)

-------------------------------------------------------------

## <u>ದಿನ-24</u>

### ಜೆಕರ್ಯನ ಗ್ರಂಥ (ಜೆಕರ್ಯ 3-4)

### ನಾಲ್ಕನೆಯ ದರ್ಶನ (ಮಹಾಯಾಜಕನಿಗಾಗಿ ಶುದ್ಧ ಬಟ್ಟೆಗಳು) ಜೆಕರ್ಯ 3:1-10

- ಯಹೋಶುವ ಮಹಾಯಾಜಕನನ್ನು ಪ್ರತಿನಿಧಿಸುತ್ತಾನೆ.
- ಸೈತಾನನು ಪ್ರಧಾನ ಯಾಜಕನ ಮೇಲೆ ದೂರು ಹೇಳುತ್ತಾ ಅವನು ಮಹಾಯಾಜಕನಾಗಲು ಪಾತ್ರನಲ್ಲ ಎಂದು ಅವನು ಮಾಡಿದ ಎಲ್ಲಾ ಪಾಪಗಳನ್ನು ಎತ್ತಿ ತೋರಿಸುತ್ತಾನೆ. (ಮೈಲಿಗೆಯಾದ ವಸ್ತ್ರಗಳು)
- ಆದರೆ ದೇವರು ಅವರ ಎಲ್ಲಾ ಪಾಪಗಳನ್ನು ಕ್ಷಮಿಸಿ, ಅವರನ್ನು ಮಹಾಯಾಜಕನ ಪದವಿಗೆ ಪುನಸ್ಥಾಪಿಸುತ್ತಾರೆ. (ಶುದ್ಧ ವಸ್ತ್ರಗಳು)
- ಈ ಯಾಜಕರು ಬರಲಿರುವ ಮಹಾಯಾಜಕನ ಚಿಹ್ನೆಯಾಗಿದ್ದರು, ಆ ಯಾಜಕನು ಅವರ ವಂಶದಿಂದಲೇ ಕರೆಯಲ್ಪಟ್ಟನು.
- ಕಲ್ಲೆಂದರೆ ಸಭೆಯೊಂದು ಅರ್ಥವಾಗಬಹುದು (ದಾನಿಯೇಲ 2:34-45 ನೋಡಿ) ಏಳು ಕಣ್ಣುಗಳು ಎಂದರೆ ದೇವರು ತಮ್ಮ ಸಭೆಯನ್ನು ಪರಿಪೂರ್ಣವಾಗಿ ಕಾಪಾಡಿ ಅದನ್ನು ಸುರಕ್ಷತೆಯಿಂದ ಇಟ್ಟಿರುತ್ತಾರೆ ಎಂದರ್ಥ,
- ಎಲ್ಲಾ ಪಾಪಗಳನ್ನು ಒಂದೇ ದಿವಸದಲ್ಲಿ ತೊಲಗಿಸುವೆನು ಎಂಬುದರ ಅರ್ಥ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮಾಡಿದ ಬಲಿದಾನ.

"ಈ ದಿನ ನೀವೂ ಕೂಡ ಆರಿಸಲ್ಪಟ್ಟ ಜನರೂ ರಾಜತನದ ಯಾಜಕರೂ, ಪರಿಶುದ್ಧ ಜನಾಂಗವೂ, ದೇವರ ಜನರೂ ಆಗಿದ್ದೀರಿ (1 ಪೇತ್ರ 2:9) ನಮ್ಮನ್ನು ಪ್ರೀತಿಸುವವನು ಮತ್ತು ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸದವನು (ಪ್ರಕಟನೆ 1:6)

### ಐದನೆಯ ದರ್ಶನ : ಚಿನ್ನದ ದೀಪಸ್ತಂಭ ಮತ್ತು ಎರಡು ಎಣ್ಣೆ ಮರಗಳು (ಜೆಕರ್ಯ 4:1-4)

- ಚಿನ್ನದ ದೀಪಸ್ತಂಭ, ಮೋಶೆಯ ನ್ಯಾಯಶಾಸ್ತ್ರದಲ್ಲಿ ಹೇಳಿರುವ ಪರಿಶುದ್ಧ ಸ್ಥಳದ ಪ್ರತೀಕವಾಗಿದೆ.
- ನಾಲ್ಕನೆಯ ದರ್ಶನದಲ್ಲಿ ಯಾಜಕವೃತ್ತಿಯನ್ನು ಪರಿಶುದ್ಧಗೊಳಿಸಲಾಗಿತ್ತು. ಈಗ ಜನರನ್ನು (ಜೆರುಬ್ಬಾಬೆಲ್) ದೇವರ ದಿವ್ಯ ರಕ್ಷಣೆಯಡಿಯಲ್ಲಿ ತೋರಿಸಲಾಗಿದೆ.
- ನಾವೆಲ್ಲಾ ಹೇಗೆ ಜೀವನದಲ್ಲಿ ವೃದ್ಧಿಯಾಗಲು ಕಾರಣ? ದೇವರು ನಮ್ಮೆದುರಲ್ಲಿರುವ ಪರ್ವತಗಳನ್ನು (ಅಡೆತಡೆಗಳನ್ನು) ತೆಗೆಯುತ್ತಾರೆ, ಅದರಿಂದ ನಮಗುಂಟಾಗುವ ಎಲ್ಲಾ ಜಯಗಳೂ ನಮ್ಮ ಸ್ವಂತ ಶಕ್ತಿಯಿಂದಲ್ಲ ದೇವರ ಪ್ರಭಾವದಿಂದ ಉಂಟಾಗುತ್ತದೆ.
- ಎರಡು ಎಣ್ಣೆ ಮರಗಳ ಅರ್ಥ, ಎಲ್ಲಾ ಸಮಯದಲ್ಲೂ ದೀಪಸ್ತಂಭಗಳಿಗೆ ಎಣ್ಣೆಯನ್ನು ಪೂರೈಸಲಾಗುತ್ತದೆ. ಹಾಗೆಯೇ ಯೆಹೋಶುವನಿಗೂ, (ಯಾಜಕ) ಜೆರುಬಾಬೆಲ್ (ಜನರಿಗೂ) ಆಲಯವನ್ನು ಪುನಃ ಕಟ್ಟಲು ಶಕ್ತಿಯನ್ನು ದೇವರು ದಯಪಾಲಿಸುತ್ತಾರೆ.

ನಮಗೆಲ್ಲಾ ನಿಜವಾದ ಎಣ್ಣೆ ಪೂರೈಕೆ (ಶಕ್ತಿ) ಬರುವುದು ಯೇಸುಕ್ರಿಸ್ತನೆಂಬ ಹೆಸರಿನಿಂದಲೇ, ಏಕೆಂದರೆ ಅವನೇ ನಿಜವಾದ ಯಾಜಕ ಮತ್ತು ಪ್ರವಾದಿ, ಅವನು ನಮಗೆ ತುಂಬಿ ತುಳುಕುವಂತೆ ಪವಿತ್ರಾತ್ಮನನ್ನು ಕೊಡುತ್ತಾನೆ, ಹೇಗೆಂದರೆ ಜೀವಕೊಡುವ ನದಿ ನಮ್ಮಲ್ಲಿ ಉಕ್ಕಿ ಹರಿಯುತ್ತದೆ.

**<u>ಅನ್ವಯ</u>** : ಸೈತಾನನು ನಿಮ್ಮ ಮೇಲೆ ಹೇಗೆ ದೂರು ಹೇಳುತ್ತಾನೆ, ಮತ್ತು ಅದಕ್ಕಿರುವ ದೇವರ ವಾಗ್ದಾನವನ್ನು ಬರೆಯಿರು :

ನಿಮ್ಮ ಜೀವನದ ಕೆಲವು ಪಾಪಗಳು

1.

2.

3.

ಸೈತಾನನ ದೂರು

1.

2.

3.

ದೇವರ ವಾಗ್ದಾನ

1.

2.

3.

25 ಬಿಡಿಸುವವನು ಇದ್ದಾನೆಂಬದಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ. ಹೀಗಿರಲಾಗಿ ನನ್ನಷ್ಟಕ್ಕೆ ನಾನೇ ಮನಸ್ಸಿನಿಂದ ದೇವರ ನಿಯಮಕ್ಕೆ ಆಳಾಗಿಯೂ ಶರೀರಭಾವದಿಂದ ಪಾಪವೆಂಬ ನಿಯಮಕ್ಕೆ ಆಳಾಗಿಯೂ ನಡಕೊಳ್ಳುವವನಾಗಿದ್ದೇನೆ.

1 ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ.

2 ಯಾಕಂದರೆ ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು.(ರೋಮಾ 7:25-8:2)

--------------------------------------------------------------

## <u>ದಿನ-25</u>

**ಜೆಕರ್ಯ ಗ್ರಂಥ (ಜೆಕರ್ಯ 5-6)**

**ಆರನೆಯ ದರ್ಶನ (ಹಾರುವ ಸುರುಳಿ) (ಜೆಕರ್ಯ 5:1-4)**

- ಆ ಸುರಳಿಯಲ್ಲಿ ಜನರು ಮಾಡುವ ಎರಡು ಮುಖ್ಯ ಪಾಪಗಳ ಮೇಲೆ ನ್ಯಾಯತೀರ್ಪು ಬರೆಯಲಾಗಿದೆ. ಅವು ಯಾವುದೆಂದರೆ ಕಳ್ಳತನ ಮತ್ತು ಸುಳ್ಳಾಣೆ.
- ಜನರು ತುಂಬಾ ದ್ರವ್ಯಾಶೆ ಮತ್ತು ಪ್ರಾಪಂಚಿಕ ವಸ್ತುಗಳನ್ನು ಆಶಿಸುತ್ತಿದ್ದರು.

ಜೀವನದಲ್ಲಿ ತೃಪ್ತಿಯಿಂದಿರುವುದನ್ನು ಕಲಿಯುವುದೇ ನಿಜವಾದ ಸಂತೋಷದ ರಹಸ್ಯವಾಗಿದೆ. ದೇವರು ನಮ್ಮನ್ನೆಲ್ಲಾ ಬೇರೆ ಬೇರೆ ಸನ್ನಿವೇಶಗಳಲ್ಲಿ ಹಾಕುತ್ತಾರೆ. ಆದರೂ ನಾವೆಲ್ಲಾ ತೃಪ್ತಿಯಿಂದಿದ್ದು ದೇವರನ್ನು ಮಹಿಮೆಪಡಿಸಬೇಕು.

**ಏಳನೆಯ ದರ್ಶನ (ಬುಟ್ಟಿಯಲ್ಲಿ ಸ್ತ್ರೀ) (ಜೆಕರ್ಯ 5:5-11)**

- ಬುಟ್ಟಿಯಲ್ಲಿರುವ ಸ್ತ್ರೀ ಜನರ ಎಲ್ಲಾ ಪಾಪಗಳನ್ನು ಪ್ರತಿನಿಧಿಸುತ್ತಾಳೆ. ಜನರ ಅಧರ್ಮವನ್ನು ಸ್ತ್ರೀಯ ರೂಪದಲ್ಲಿ ಚಿತ್ರಿಸಲಾಗಿದೆ.
- ದೇವರು ಜನರ ಪಾಪಗಳನ್ನು ಯೆರುಸಲೇಮಿನಿಂದ ಬಹಳ ದೂರ ಎಸೆಯುತ್ತಾರೆ.
- ಇದರ ಸಂದೇಶವೇನೆಂದರೆ ದೇವರು ಅವರ ಜನರ ಪಾಪಗಳ ಮೇಲೆ ಒಂದು ತೆರನಾದ ಮಿತಿಯನ್ನು ಇಡುತ್ತಾರೆ ಎಂಬುದೇ.

ಪಾಪ ತನ್ನದೇ ಆದ ನಾಶದ ಬೀಜವನ್ನು ಹೊತ್ತಿದೆ. ಎಲ್ಲಾ ಪಾಪದ ಕೊನೆ ಮರಣವೇ ಆದರೆ ಮನಸಾಂತರ ಹೊಂದುವವರಿಗೆ ನಿರೀಕ್ಷೆಯಿದೆ.

**ಎಂಟನೇ ದರ್ಶನ (ನಾಲ್ಕು ರಥಗಳು) (ಜೆಕರ್ಯ 6:1-8)**

- ಈ ರಥಗಳು, ದೇವರು ತನ್ನ ಜನರನ್ನು ಹೇಗೆ ಕಾಪಾಡುತ್ತಾರೆ. ಹೀಗೆ ಎಲ್ಲಾ ಜನಾಂಗಗಳನ್ನು ತನ್ನ ಹತೋಟಿಯಲ್ಲಿದ್ದಾರೆಂಬುದನ್ನು ತೋರಿಸುತ್ತದೆ.
- ದೇವರು ಕೊನೆಯಲ್ಲಿ ತನ್ನ ಜನರಿಗೆ ಸಾಮಾಧಾನವನ್ನು ಕರುಣಿಸಿದ್ದಾರೆ.

ದೇವರು ನಮಗೆ ಸಮಾಧಾನವನ್ನು ಕೊಟ್ಟಿದ್ದಾರೆ, ಆ ಸಮಾಧಾನವೂ ಎಲ್ಲಾ ಜ್ಞಾನವನ್ನು ಮೀರಿದೆ. ನಮಗೆ ಸಮಾಧಾನವು ಉಂಟಾಗುವುದು ನಾವು ದೇವರಿಗೆ ನಮ್ಮನ್ನೇ ಅರ್ಪಿಸಿಕೊಂಡಾಗಲೇ. ಪವಿತ್ರಾತ್ಮನಿಂದ ನಡೆಸಲ್ಪಟ್ಟ ಜೀವನವು ಪೂರ್ಣ ಸಮಾಧಾನಕ್ಕೊಳಗಾಗಿದೆ.

**ಯೆಹೋಶುವನಿಗೆ ಕಿರೀಟ : (ಜೆಕರ್ಯ 6:9-15)**

- ಆ ಕಿರೀಟ ಚಿನ್ನ ಮತ್ತು ಬೆಳ್ಳಿ ಎರಡರಿಂದಲೂ ಮಾಡಲ್ಪಟ್ಟಿತು. ಬರಲಿರುವ ಮೊಳಕೆ ಹೊಂದಿರುವ ಎರಡೂ ಸ್ಥಾನಗಳು, ಎಂದರೆ ಮಹಾಯಾಜಕ ಮತ್ತು ಅರಸ ಎಂಬುದನ್ನು ಬಿಂಬಿಸುತ್ತವೆ.
- ಯೇಸು ತನ್ನ ರಾಜ್ಯದಲ್ಲಿ ಮಹಾಯಾಜಕನಾಗಿಯೂ, ಅರಸನಾಗಿಯೂ ಸಭೆಯನ್ನು ಸ್ಥಾಪನೆಗೊಳಿಸಿ ಆಳುವನು ಎಂಬುದನ್ನು ಹೇಳುತ್ತದೆ.

ಯೇಸುಕ್ರಿಸ್ತನು ನೀತಿವಂತಿಕೆಯ ರಾಜ, ಯರಸಲೇಮಿನ ರಾಜ, ಸಮಾಧಾನದ ರಾಜ ಮತ್ತು ಪ್ರಧಾನ ಮಹಾಯಾಜಕ. ಈ ಸ್ಥಾನಗಳು ಇವತ್ತಿಗೂ ನಡೆದುಕೊಂಡು ಬಂದಿವೆ. ಅವು ನಮಗೆ ಸಮಾಧಾನ ಕೊಡುತ್ತವೆ, ದೇವರ ಮತ್ತು ಪಾಪಿಗಳ ಮಧ್ಯೆ ಸಮಾಧಾನ ಉಂಟುಮಾಡುವ ಸ್ಥಾನ.

**<u>ಅನ್ವಯ</u>** : ನಿಮ್ಮ ಜೀವನದಲ್ಲಿ ಯಾವ ವಿಷಯಗಳಲ್ಲಿ, ಅಂದರೆ ಪ್ರಾಪಂಚಿಕ ವಸ್ತುಗಳು ಮತ್ತು ದ್ರವ್ಯಗಳ ಅಗತ್ಯಗಳಲ್ಲಿ ನೀವು ಅತೃಪ್ತಿಯಿಂದಿದ್ದೀರಿ?

6 ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ.

7 ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು.

8 ನಮಗೆ ಅನ್ನವಸ್ತ್ರಗಳಿದ್ದರೆ ಸಾಕು;

9 ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ.(1 ತಿಮೋತಿ 6:6-9)

------------------------------------------------------------

## <u>ದಿನ-26</u>

**ಜೆಕರ್ಯನ ಗ್ರಂಥ : (ಜೆಕರ್ಯ 7-8)**

**ನ್ಯಾಯ ಮತ್ತು ಕರುಣೆ, ಉಪವಾಸವಲ್ಲ : (ಜೆಕರ್ಯ 7:1-14)**

- ಬೇತೇಲಿನಿಂದ ಬಂದ ನಾಯಕರ ಗುಂಪು, ಇಷ್ಟು ವರ್ಷ ಮಾಡಿದ ಪ್ರಕಾರ ಉಪವಾಸವನ್ನು ಮುಂದುವರಿಸಬೇಕೋ? ಎಂದು ವಿಚಾರಿಸಲು ಬಂದಿದ್ದರು. ಮೋಶೆಯ ನ್ಯಾಯಶಾಸ್ತ್ರದ ಪ್ರಕಾರ ಒಂದೇ ಒಂದು ಉಪವಾಸವನ್ನು ಅಗತ್ಯ ಮಾಡಬೇಕಾಗಿತ್ತು . ಅದು ಪಾಪ ಪ್ರಾಯಶ್ಚಿತ್ತದ ದಿನದ ಉಪವಾಸವಾಗಿತ್ತು .
- ದೇವರು (ವ.4-7) ರಲ್ಲಿ ಅವರು ಮಾಡುವ ಉಪವಾಸಗಳಿಗೆ ಕಾರಣಗಳೇನೆಂದು ಚುಚ್ಚಿ ಚುಚ್ಚಿ ಕೇಳುತ್ತಾರೆ.
- (ವ.5) ರಲ್ಲಿ ದೇವರು ಅವರು ಉಪವಾಸ ಮಾಡಿರುವುದು ದೇವರಿಗಾಗಿ ಅಲ್ಲ ತಮಗಾಗಿಯೇ ಮಾಡಿದ್ದಾರೆಂದು ಹೇಳುತ್ತಾರೆ.
- ದೇವರು (ವ.8-14)ರಲ್ಲಿ ಉಪವಾಸ ತನಗೆ ಬೇಕಾಗಿಲ್ಲ ಆದರೆ ಒಬ್ಬರಿಗೊಬ್ಬರು ನೀತಿವಂತನಾಗಿ ವರ್ತಿಸಿರಿ ಎಂದು ಹೇಳುತ್ತಾರೆ.
- ಉಪವಾಸ ಮತ್ತು ಪ್ರಾರ್ಥನೆ, ಪ್ರೀತಿ ಮತ್ತು ಕರುಣೆಯ ಸ್ಥಾನಕ್ಕೆ ಬರುವುದು ಸಾಧ್ಯವಿಲ್ಲ.
- ದೇವರಿಗೆ ಹೊರಗಿನ ಆಚಾರ, ಅಥವಾ ಧರ್ಮಕ್ಕಿಂತ ಮುಖ್ಯವಾಗಿ ಬೇಕಾಗಿದ್ದು ನಮ್ಮ ಹೃದಯದ ಮತ್ತು ಭಾವನೆಗಳ ವಿಚಾರ.
- ನಮ್ಮ ಹೃದಯಗಳು ವಜ್ರದ ಕಲ್ಲಿನಂತಿವೆ (ವ.12) ದೇವರನ್ನು ಮತ್ತು ಇತರರನ್ನು ಪ್ರೀತಿಸುವುದನ್ನು ಬಿಟ್ಟು ಹೊರಗಿನ ಆಚಾರಗಳನ್ನು ಆಚರಿಸಿದಾಗ ನಾವು ಹೀಗಾಗುತ್ತೇವೆ.

ನಾವು ಯಾವುದರ ಮೇಲೆ ನಮ್ಮ ಕಣ್ಣೋಟವನ್ನಿಟ್ಟಿದ್ದೇವೆ? ಹೊರಗಿನ ಆಚಾರವೋ ಅಥವಾ ನಮ್ಮ ಹೃದಯಗಳ ಮೇಲೆಯೋ? ಯಾವುದು ಸುಲಭ ಬೇರೆಯವರನ್ನು ನೀತಿಯಿಂದ ನಡೆಸಿಕೊಳ್ಳುವುದೋ ಅಥವಾ ಉಪವಾಸವೋ?

**ಆಶೀರ್ವದಿಸುತ್ತೇನೆ ಎಂದು ಯೆಹೋವನ ವಾಗ್ದಾನ : ಜೆಕರ್ಯ 8:1- 23**

- ಭವಿಷ್ಯದ ವಿಷಯವಾಗಿ ಹತ್ತು ಉತ್ತೇಜನ ಕೊಡುವ ವಾಕ್ಯಗಳನ್ನು ಹೇಳುತ್ತಿದ್ದಾರೆ, ಪ್ರತಿಯೊಂದು ವಾಕ್ಯ ''ಸರ್ವಶಕ್ತನಾದ ಯಹೋವನು ಹೀಗೆ ಹೇಳುತ್ತಾನೆ' ಎಂಬ ಮಾತಿನಿಂದ ಪ್ರಕಟಗೊಂಡು ಪ್ರಾರಂಭವಾಗುತ್ತದೆ.

- ಈ ವಾಕ್ಯಗಳು ತಕ್ಷಣಕ್ಕೆ ಬರುವ ಆಶೀರ್ವಾದಗಳನ್ನು ಮತ್ತು ಮೆಸ್ಸಾಯನಿಂದ ಬರುವ ಆಶೀರ್ವಾದ ಎರಡನ್ನೂ ಒಳಗೊಂಡಿದೆ.
- ನಾವು ನೋಡುವ ಪ್ರಕಾರ, ಈ ಆಶೀರ್ವಾದಗಳನ್ನು  ವಾಗ್ದಾನ ಮಾಡಿದ್ದರೂ ಅದಕ್ಕೊಂದು ಷರತ್ತಿದೆ. (ವ.16-17) ದೇವರು ಅವರೆಲ್ಲಾ ನೀತಿವಂತರಾಗಿ ನಡೆದುಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ.
- ನಾವು ನೋಡುವ ಹಾಗೆ ಉಪವಾಸಕ್ಕಿಂತ ದೇವರಿಗೆ ಹೆಚ್ಚು ಉತ್ಸಾಹಕೊಡುವ ವಿಷಯಗಳು ನಾವು ಸಂತೋಷದಿಂದ, ಹರ್ಷದಿಂದ ದೇವರನ್ನು ಕೊಂಡಾಡುವುದು. ನಾವೆಲ್ಲಾ ನಮ್ಮ ಜೀವನದಲ್ಲಿ ಉಲ್ಲಾಸದಿಂದ ಆನಂದಿಸಬೇಕೆಂದು ಆಶಿಸುತ್ತಾರೆ.
- (ವ.23) ರಲ್ಲಿ ನೀತಿವಂತರಾಗಿ ನಡೆದುಕೊಂಡವರ ಪ್ರಭಾವವನ್ನು ನೋಡುತ್ತೇವೆ.

13 ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆಹಾಕಿ ತುಳಿಯುವದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು.

14 ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು.

15 ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವದಿಲ್ಲ; ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕುಕೊಡುವದು.

16 ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.(ಮತ್ತಾಯ 5:13-16)

**<u>ಅನ್ವಯ</u>** : ನಿಮ್ಮ ಜೀವನದಲ್ಲಿ ಯಾವ ವಿಷಯಗಳಲ್ಲಿ ಜನರು ಕ್ರಿಸ್ತನನ್ನು ಕಾಣಬಹುದು?

14 ಗುಣುಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ.

15 ಹೀಗೆ ನೀವು ನಿರ್ದೋಷಿಗಳೂ ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ.

16 ಇವರೊಳಗೆ ನೀವು ಸರ್ವರಿಗೂ ಜೀವದಾಯಕ ವಾಕ್ಯವನ್ನು ತೋರಿಸಿಕೊಡುವವರಾಗಿದ್ದು ಲೋಕದೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವವರಾಗಿದ್ದೀರಲ್ಲಾ. ನೀವು ಹೀಗೆ ನಡೆದರೆ ನಾನು ಕೆಲಸ ಸಾಧಿಸಿದ್ದೂ ವ್ಯರ್ಥವಲ್ಲ, ನಾನು ಪ್ರಯಾಸಪಟ್ಟದ್ದೂ ವ್ಯರ್ಥವಲ್ಲ ಎಂಬ ಉತ್ಸಾಹವು ಕ್ರಿಸ್ತನ ದಿನದಲ್ಲಿ ನನಗೆ ಉಂಟಾಗುವದು.(ಫಿಲಿಪ್ಪಿ 2:14-16)

-------------------------------------------------------------

## <u>ದಿನ-27</u>

### ಜೆಕರ್ಯನ ಗ್ರಂಥ : (ಜೆಕರ್ಯ 9-10)

### ಇಸ್ರಾಯೇಲಿನ ವೈರಿಗಳಿಗಾಗುವ ನ್ಯಾಯತೀರ್ಪು (ಜೆಕರ್ಯ 9:1-8)

- ದೇವರು ತನ್ನ ಜನರನ್ನು ಸುತ್ತಮುತ್ತಲಿನ ಎಲ್ಲಾ ದೇಶಗಳಿಂದ ರಕ್ಷಿಸುವರು.

- ನಾವು ಇನ್ನೊಮ್ಮೆ ದೇವರು ಎಲ್ಲಾ ದೇಶಗಳನ್ನು ತನ್ನ ಸಂಪೂರ್ಣ ಹತೋಟಿಯಲ್ಲಿಟ್ಟನೆಂಬುದನ್ನು ನೋಡುತ್ತೇವೆ.

ದೇವರ ಜ್ಞಾನವಿಲ್ಲದೆ ಮತ್ತು ಅನುಮತಿಯಿಲ್ಲದೆ ಏನೂ ನಡೆಯುವುದಿಲ್ಲ. ಕ್ರೈಸ್ತರಾಗಿ ನಾವು ದೇವರ ರಕ್ಷಣೆಯಲ್ಲಿರುತ್ತೇವೆಂದು ವಾಗ್ದಾನಿಸಲ್ಪಟ್ಟಿದ್ದೇವೆ. ದೇವರು ನಮ್ಮನ್ನು ಸುರಕ್ಷಿತವಾಗಿ ಇಡುತ್ತಾರೆ. ಮಾತ್ರವಲ್ಲದೆ ಯಾವ ಹಾನಿಯೂ ನಮಗೆ ಕೇಡನ್ನುಂಟು ಮಾಡದಂತೆ ಕಾಯುತ್ತಾರೆ (1 ಯೊಹಾನ 5:18)

**ಚಿಯೋನಿನ ಅರಸನ ಆಗಮನ (ಜೆಕರ್ಯ 9:9-13)**

- ಈ ಭಾಗವು ಮೆಸ್ಸಾಯನ ಆಗಮನವನ್ನು ಸ್ಪಷ್ಟವಾಗಿ ಪ್ರವಾದಿಸುತ್ತದೆ. (ಮತ್ತಾಯ 21:1-11, ಯೊಹಾನ 12:13-19) ಮೆಸ್ಸಾಯ ಹೇಗೆ ವಿಜಯೋತ್ಸವದಿಂದ ಒಳಬರುವನೆಂದು ಇಲ್ಲಿ ಚಿತ್ರಿಸಲಾಗಿದೆ.
- ಬರಲಿರುವ ಮೆಸ್ಸಾಯನು ಸಾಮಾಧಾನವನ್ನು ತರುವನು ಮತ್ತು ಸೆರೆಯವರನ್ನು ನೀರಿಲ್ಲದ ಬಾವಿಯೊಳಗಿಂದ ಬಿಡುಗಡೆ ಮಾಡುವನು.
- ಮೆಸ್ಸಾಯನು "ಕತ್ತೆಯ ಮೇಲೆ ಸವಾರಿ ಮಾಡಿ ಬರುತ್ತಾನೆ. ಅವನು ಸೇವೆ ಮಾಡಿಸಿಕೊಳ್ಳುವುದಕ್ಕಾಗಿ ಅಲ್ಲ ಸೇವೆ ಮಾಡುವುದಕ್ಕಾಗಿಯೂ, ಅನೇಕರಿಗಾಗಿ ತನ್ನ ಪ್ರಾಣವನ್ನು ಈಡಾಗಿ ಕೊಡುವುದಕ್ಕಾಗಿಯೂ ಬಂದನು! ನಮ್ಮ ರಕ್ಷಕನಿಗಾಗಿ ದೇವರನ್ನು ಸ್ತುತಿಸೋಣ, ನಮ್ಮ ರಾಜನು ತುಂಬಾ ಸಾತ್ವಿಕನೂ, ಮತ್ತು ಕತ್ತೆಯ ಮೇಲೆ ಸವಾರಿ ಮಾಡಿ ನಮ್ಮಲ್ಲಿಗೆ ಬರುತ್ತಿದ್ದಾನೆ.

ನೀವು ಈ ಪ್ರವಾದನೆಯನ್ನು ಆ ಸಮಯದಲ್ಲಿ ಕೇಳಿದ್ದೀರಿ ಎಂದು ಊಹಿಸಿ. ನೀವು ಈ ಪ್ರವಾದನೆಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದೀರಿ?

**ಯೆಹೋವನು ಕಾಣಿಸಿಕೊಳ್ಳುವನು ಮತ್ತು ಕಾಪಾಡುವನು (ಜೆಕರ್ಯ 9:14 -10:12)**

ಮೊದಲನೆಯ ಭಾಗವು ಯೂಧ ದೇಶವನ್ನು ಪುನಸ್ಥಾಪಿಸುವುದರ ಬಗ್ಗೆ ಹೇಳುತ್ತದೆ (9:13-17) ಬಹುಶಃ ಯೂಧರು ತಮ್ಮ ಶತೃಗಳ ಮೇಲೆ ಸಾಧಿಸಿದ ವಿಜಯಗಳ ಬಗ್ಗೆ ಇದು ಹೇಳುತ್ತಿರಬಹುದು.

**10ನೆಯ ಅಧ್ಯಾಯ ಮೆಸ್ಸಿಯಾನಿಕ ಪ್ರವಾದನೆಗಳನ್ನು ಹೇಳುತ್ತದೆ.**

- ವಿಗ್ರಹಾರಾಧನೆ ಮತ್ತು ಸುಳ್ಳು ನಾಯಕರು ಅವರನ್ನು ಸೆರಗೆ ಒಯ್ದಿದ್ದರು. ಆದರೆ ಯಹೂದ ಕುಲದಿಂದ ಬರುವ ಮೂಲೆಗಲ್ಲು ಅವರನ್ನು ಸೆರೆಯಿಂದ ಹೊರತರುವುದು ಆ ಮೂಲೆಗಲ್ಲೇ ಕ್ರಿಸ್ತನು (ಯೆಶಾಯ 23:16, 1 ಪೇತ್ರ 2:6, ಎಫೆಸ 2:20)
- ಯೆಹೂಧ ಕುಲವು ಮೊದಲು ಆರಿಸಲ್ಪಟ್ಟಿತು, ಆ ಕುಲದಿಂದಲೇ ಕ್ರಿಸ್ತನು ಬರುವವನಾಗಿದ್ದನು.
- ದೇವರು ಅವರ ದೇಶವನ್ನು ಪುನಸ್ಥಾಪಿಸುವುದಾಗಿ ವಾಗ್ದಾನ ಮಾಡುತ್ತಾನೆ. (ವ.6-12)

ಈ ಭಾಗವು ಹೇಗೆ ಕರ್ತನು ತನ್ನ ಮಂದೆಯನ್ನು ಪರಿಪಾಲಿಸುತ್ತಾನೆ ಎಂಬುದನ್ನು ತೋರಿಸುತ್ತದೆ.

**<u>ಅನ್ವಯ</u>** : ಕೀರ್ತನೆ 23ರ ಮುಖಾಂತರ ದೇವರನ್ನು ಮಹಿಮೆಪಡಿಸಿರಿ.

7 ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು.

8 ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು.

9 ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು.

10 ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ.(ಗಲಾತ್ಯ 6:7-10)

------------------------------------------------------------

**<u>ದಿನ-28</u>**

**ಜೆಕರ್ಯನ ಗ್ರಂಥ : (ಜೆಕರ್ಯ 11-12)**

**ಇಬ್ಬರು ಕುರುಬರು : ಜೆಕರ್ಯ 11 :1-17)**

- ಈ ಭಾಗವು ವಾಗ್ದಾನ ಮಾಡಿದ ಆಶೀರ್ವಾದಗಳು ನಿರಾಕರಿಸಲ್ಪಡುವುದದನ್ನು ನೋಡುತ್ತೇವೆ.
- ಈ ನಿರಾಕರಣೆ ಅಂತ್ಯದಲ್ಲಿ ಇಸ್ರಾಯೇಲ್ಯರ ನಾಶಕ್ಕೆ ಕಾರಣವಾಯಿತು. ಮೋಶೆಯ ನ್ಯಾಯಶಾಸ್ತ್ರದ ಪ್ರಕಾರ ಸ್ಥಾಪಿತವಾದ ಯುಧೇಯ ಧರ್ಮವು ಕೊನೆಗೊಂಡಿತು. ಕಟ್ಟಕಡೆಯ ಪತನ ಕ್ರಿ.ಶ. 70ರಲ್ಲಿ ರೋಮನರ ಕೈಕೆಳಗೆ ಉಂಟಾಯಿತು.
- ದೇವರು ಕುರುಬನ ಹಾಗೆ ಅವರನ್ನು ನಡೆಸಿಕೊಂಡಿದ್ದರು, ಕೆಟ್ಟನಾಯಕರನ್ನು ಉರುಳಿಸಿದ್ದರು. ಆದರೆ ಪದೇ ಪದೇ ಅವರು ದೇವರನ್ನು ನಿರಾಕರಿಸಿದ್ದರು. ಆದ್ದರಿಂದ ಕೊನೆಯಲ್ಲಿ ಅವರೊಂದಿಗಿರುವ ಒಡಂಬಡಿಕೆಯನ್ನು ದೇವರು ಕೊನೆಗೊಳಿಸಿದರು. ಅದೇ (ವಚನ 7-11)ರಲ್ಲಿ ಹೇಳಿರುವಂತೆ ಕುರಿಕಾಯುವ ಕೋಲುಗಳನ್ನು ಮುರಿದರು ಎಂಬ ಮಾತಿನ ಅರ್ಥ.
- ಪ್ರವಾದಿಯು ತನ್ನ ಕೆಲಸ ನಿಮ್ಮ ಕಣ್ಣುಗಳಿಗೆ ಒಳ್ಳೆಯದೆಂದು ತೋರಿದರೆ ಅದಕ್ಕೆ ಸರಿಯಾಗಿ ನನಗೆ ಸಂಬಳವನ್ನು ಕೊಡಿರಿ' ಎಂದು ಕೇಳಿದನು.
- ಅವರ ಪ್ರತಿಕ್ರಿಯೆ, ನಿಕೃಷ್ಟವಾದ 30 ಬೆಳ್ಳಿ ನಾಣ್ಯಗಳನ್ನು ಸಂಬಳವಾಗಿ ಕೊಟ್ಟರು. ದೇವರಿಗೆ ಆ ಪ್ರತಿಕ್ರಿಯೆಯಿಂದ ಬಹಳ ಹೇಸಿಗೆಯಾಯಿತು. ಈ ಭಾಗವು (ಮತ್ತಾಯ 27:9) ರಲ್ಲಿ ಯೇಸುವಿಗೆ ಅನ್ವಯವಾಗುತ್ತದೆ.

ಇಲ್ಲಿ ಯೇಸು ಒಬ್ಬ ಒಳ್ಳೆ ಕುರುಬನು. ಅವನಿಗೆ ಅವನ ಕುರಿಗಳು ಯಾರೆಂದು ಗೊತ್ತು , ಅವನು ಅವರನ್ನು ಹೆಸರಿಡಿದು ಕರೆದು ಹೊರಕ್ಕೆ ಕರೆದೊಯ್ಯುತ್ತಾನೆ. ಆದರೆ ನಾವು ಅವನ ಒಳ್ಳೇ ಕುರಿಗಳೇ? ನಾವು ಅವನ ಮಾತಿಗೆ ಕಿವಿಗೊಡುವ ಕುರಿಗಳೇ? ಅವರನ್ನು ಹಿಂಬಾಲಿಸಿ, ನಮ್ಮ ಒಳ್ಳೆ ಕುರುಬನನ್ನು ಅರಿತಿರುವ ಕುರಿಗಳೇ?

**ಯೆರುಸಲೇಮಿನ ವೈರಿಗಳು ನಾಶಪಡಲ್ಪಡಬೇಕು : (ಜೆಕರ್ಯ 12:1-9)**

- ಈ ಭಾಗವು ಯೆರುಸಲೇಮ್ ದೇಶದ ನಾಶವನ್ನು ಕುರಿತು ಭವಿಷ್ಯ ನುಡಿದಾದನಂತರ, ಯೇಸುಕ್ರಿಸ್ತರು ಸ್ಥಾಪಿಸುವ ಸಭೆಯು ಹೇಗೆ ನಾಶ ಮಾಡಲಾಗದೆಂದು ನಮಗೆ ತೋರಿಸುತ್ತದೆ.
- ದೇವರಜನರಿಗೆ ದೇವರ ರಾಜ್ಯದಲ್ಲಿ ಇರುವ ಶಕ್ತಿಸಾಮರ್ಥ್ಯವನ್ನು ಇಲ್ಲಿ ಕಾಣಬಹುದು. ಬಲಹೀನರೂ ಆ ದಿನದಲ್ಲಿ ದಾವೀದನಂತೆ ಬಲಾಢ್ಯರಾಗುವರು.

- ದೇವರ ಜನರು ಬಲಾಢ್ಯರು ಏಕೆಂದರೆ ಅವರ ಶಕ್ತಿ ಸಾಮರ್ಥ್ಯ ಅವರ ದೇವರಾದ ಸರ್ವಶಕ್ತನಾದ ಯೆಹೋವನಲ್ಲಿದೆ (ವ.5)
- ನಾವು ದೇವರನ್ನು ಮಹಿಮೆಪಡಿಸೋಣ, ಏಕೆಂದರೆ ದೇವರಾತ್ಮವು ನಮ್ಮ ಆತ್ಮಗಳಲ್ಲಿ ನೆಲೆಸಿ ನಮ್ಮನ್ನು ಬಲಾಢ್ಯರನ್ನಾಗಿಯೂ, ಮತ್ತು ವಿಜಯಿಗಳನ್ನಾಗಿಯೂ ಮಾಡುವುದು.

**ಅವರು ತಿವಿದವನಿಗಾಗಿ ಶೋಕ : (ಜೆಕರ್ಯ 12:10-14)**

- ಯಸುವನ್ನೇ ಅವರು ತಿವಿದರು.
- ಅವರು ತಿವಿದಿದ್ದರ ಮೂಲಕ ನಮ್ಮ ಪಾಪಗಳೂ ತೊಳೆಯಲ್ಪಟ್ಟವು. (ಯೆಹಾನು 19:37, 1 ಪೇತ್ರ 2: 21-24)

ನಿಶ್ಚಯವಾಗಿಯೂ ಆತನು ತಮ್ಮ ಸಂಕಟಗಳನ್ನು ವಹಿಸಿಕೊಂಡು ನಮ್ಮ ದುಃಖಗಳನ್ನು ಹೊತ್ತನು. ಆದರೂ ನಾವು ಆತನನ್ನು ಪೆಟ್ಟು ತಿಂದವನು, ದೇವರಿಂದ ಹೊಡೆಯಲ್ಪಟ್ಟವನು, ಬಾಧಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ಉಲ್ಲಂಘನೆಗಳಿಗಾಗಿ ಆತನು ತಿವಿಯಲ್ಪಟ್ಟನು. ನಮ್ಮ ದುಷ್ಯತ್ಯಗಳ ನಿಮಿತ್ತ ಆತನು ಜಜ್ಜಲ್ಪಟ್ಟನು ನಮ್ಮ ಸಮಾಧಾನಕ್ಕೆ ಕಾರಣವಾದ ಶಿಕ್ಷೆಯು ಆತನ ಮೇಲಿತ್ತು. ಆತನ ಗಾಯಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ದಾರಿತಪ್ಪಿದ ಕುರಿಗಳಂತೆ ಇದ್ದೆವು. ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಸ್ವಂತ ಮಾರ್ಗಕ್ಕೆ ತಿರುಗಿಕೊಂಡಿದ್ದನು.

ಯೆಹೋವನು ನಮ್ಮ ಎಲ್ಲಾ ದುಷ್ಕೃತ್ಯಗಳನ್ನು ಆತನ ಮೇಲೆ ಹಾಕಿದನು. (ಯಶಾ 53:4-6)

**<u>ಅನ್ವಯ</u>** : ಹೇಗೆ ಒಳ್ಳೆ ಕುರಿಯಾಗಬಹುದೆಂದು ಯೋಚಿಸಿರಿ.

27 ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ.

28 ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು.

29 ನನ್ನ ತಂದೆಯು ನನಗೆ ಕೊಟ್ಟದ್ದು ಎಲ್ಲಾದ್ದಕ್ಕಿಂತ ದೊಡ್ಡದು; ಅದನ್ನು ತಂದೆಯ ಕೈಯೊಳಗಿಂದ ಯಾರೂ ಕಸಕೊಳ್ಳಲಾರರು.(ಯೋಹಾನ 10:27-29)

------------------------------------------------------------

**<u>ದಿನ-29</u>**

**ಜೆಕರ್ಯನ ಗ್ರಂಥ : (ಜೆಕರ್ಯ 13-14)**

**ಪಾಪದಿಂದ ಶುದ್ದೀಕರಣ : (ಜೆಕರ್ಯ 13:1-9)**

- ಕೃಪೆಯು ನಮ್ಮ ಪಾಪವನ್ನು ಹೇಗೆ ಕ್ಷಮಿಸುವುದೆಂಬುದನ್ನು, ಆ ದಿನ ಒಂದು ಬುಗ್ಗೆಯು ತೆರೆಯಲ್ಪಡುವುದೆಂದು ತೋರಿಸಿದೆ (ವ.1)
- ವಿಗ್ರಹಾರಾಧನೆ ದೇವ ಜನರ ಮದ್ಯದಿಂದ ಸಂಪೂರ್ಣವಾಗಿ ತೆಗೆದುಹಾಕಲ್ಪಡುವುದು (ವ.2)

- ಯೋಸುಕ್ರಿಸ್ತನಲ್ಲಿ ಹೊಸ ಒಡಂಬಡಿಕೆ ಸ್ಥಾಪನೆಯಾದಮೇಲೆ, ಪ್ರವಾದಿಗಳ ಕೆಲಸ ಕೊನೆಗೊಂಡಿತು (ವ.2-6)
- ಕುರುಬನನ್ನು ಹೊಡೆಯುವುದು (ವ.7-9) ಪುನಃ ಮೆಸ್ಸಿಯಾನಿಕ ಪ್ರವಾದನ (ಮುಕ್ತಾಯ 26:31)
- ಹೊಡೆಯಲ್ಪಟ್ಟ ಮನುಷ್ಯನು ದೇವರಿಗೆ ಸಂಗಡಿಗನಾಗಿದ್ದರೂ (ವ.7) ದೇವರೇ ಅವನನ್ನು ಹೊಡೆಯಿರಿ ಎಂದು ಅಪ್ಪಣೆ ಕೊಡುತ್ತಾನೆ (ಅ.ಕೃ 2:23)
- ಬರೀ ಮೂರನೆಯ ಒಂದು ಪಾಲು ಉಳಿಯಿತು. ಅವರು ಬಲಿದಾನವನ್ನು ಅಂಗೀಕರಿಸಿದರು (ವ.8) ಮತ್ತು ಅವರು ದೇವರಿಂದ ಬೆಂಕಿಯಲ್ಲಿ ಹಾಕಿ ಬೆಳ್ಳಿಯಂತ ಶುದ್ದಿಮಾಡಲ್ಪಟ್ಟರು. (ವ.9)

ದೇವರ ಕೃಪೆಯ ಬುಗ್ಗೆ ನಮಗಾಗಿಯೂ ತೆರೆಯಲ್ಪಟ್ಟಿದೆ. ಯೇಸುಕ್ರಿಸ್ತನ ರಕ್ತವೆಂಬ ಬುಗ್ಗೆ, ನಮ್ಮನ್ನು ಎಲ್ಲಾ ಪಾಪಗಳಿಂದಲೂ ಶುದ್ದೀಕರಿಸುವುದು. ಒಂದು ಹಾಡಿನ ಪ್ರಕಾರ "ಅಸಹ್ಯವಾಗಿರುವ ನಾನು ಆ ಬುಗ್ಗೆಗೆ ಹಾರುವೆ, ರಕ್ಷಕನೇ ನನ್ನನ್ನು ತೊಳೆ, ಇಲ್ಲದಿದ್ದರೆ ನಾ ಸಾಯುವೆ, ಯುಗಾಂತರಗಳ ಪರ್ವತನೇ, ನಿನ್ನ ಬದುಕಿನಲ್ಲಿ ನಾನು ನನ್ನನ್ನೇ ಅಡಗಿಸಿಕೊಳ್ಳುವೆನು'

**ಯೆಹೋವನು ಬಂದು ಆಳುವನು** : **(ಜೆಕರ್ಯ 14:1-21)**

- ಈ ಭಾಗವು ಯರುಸಲೇಮ್ ದೇಶದ ನಾಶವನ್ನು ತೋರಿಸುತ್ತದೆ.
- ನಾಶಪಡಿಸುವವರನ್ನು ಕೂಡ ನಾಶ ಮಾಡುವುದಾಗಿ ದೇವರು ವಾಗ್ದಾನ ಮಾಡುತ್ತಾರೆ (ವ 3-7) ವಚನ 8 ರಿಂದ ಮೊದಲುಗೊಂಡು ಉಳಿದ ಎಲ್ಲಾ ಭಾಗವು ಮೆಸ್ಸಾಯನ
- ರಾಜ್ಯದಲ್ಲಿರುವ ಆತ್ಮಿಕ ಆಶೀರ್ವಾದಗಳನ್ನು ತೋರಿಸುತ್ತದೆ.
- ಯರುಸಲೇಮಿನಿಂದ ಜೀವವುಳ್ಳ ಪ್ರವಾಹವು ಹೊರಡುವುವು. ಇದು ಪವಿತ್ರಾತ್ಮದ ಬಗ್ಗೆ ಹೇಳುತ್ತದೆ. (ವ.8, ಯೋಹಾನ 7:37-39)
- ಯೆಹೋವನು ಭೂಮಿಗೆಲ್ಲಾ ಅರಸನಾಗಿರುವನು (ವ:9, ಎಫೆಸ 4:5)
- ಯರುಸಲೇಮಿಗೆ ವಿರೋಧವಾಗಿ ಬಂದ ಅನ್ಯ ಜನಾಂಗದವರಿಗೂ ಕೂಡ ಸರ್ವಶಕ್ತನಾದ ದೇವರನ್ನು ಆರಾಧಿಸಲು ಒಂದು ಅವಕಾಶ ಸಿಗುವುದು (ವ.16-19)
- ಕೊನೆಯದಾಗಿ ಪ್ರವಾದಿಯ ಒಂದು ದಿನವನ್ನು ಕಾಣುತ್ತಾನೆ. ಆ ದಿನದಲ್ಲಿ ಜೀವನದ ಪ್ರತಿಯೊಂದು ಭಾಗವೂ, ಆಸ್ತಿಯೂ ಎಲ್ಲವೂ ಕ್ರಿಸ್ತನ ಒಡತನಕ್ಕೆ ಒಳಗಾಗಿರುವುದು.(ವ.20-21)
- ಹಳೆಯದೆಲ್ಲ ಹೋಗಿ ಹೊಸತನ ಬರುವುದು.

ನಾವು ಕೂಡ ಹೊಸತನಕ್ಕೆ ಕಾತುರದಿಂದ ಕಾಯುತ್ತಿದ್ದೇವೆ. ಪವಿತ್ರ ಗ್ರಂಥದಲ್ಲಿ ಹೀಗೆ ಬರೆದಿದೆ.

3 ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾ ಶಬ್ದವು ನನಗೆ ಕೇಳಿಸಿತು. ಅದು -ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ;ಆತನು ಅವರೊಡನೆ ವಾಸಮಾಡುವನು,ಅವರು ಆತನಿಗೆ ಪ್ರಜೆಗಳಾಗಿರುವರು;ದೇವರು ತಾನೇ ಅವರ ಸಂಗಡ ಇರುವನು,

4 ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು.ಇನ್ನು ಮರಣವಿರುವದಿಲ್ಲ,ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ;ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತುಎಂದು ಹೇಳಿತು.

5 ಆಗ ಸಿಂಹಾಸನದ ಮೇಲೆ ಕೂತಿದ್ದವನು -ಇಗೋ, ಎಲ್ಲವನ್ನು ಹೊಸದುಮಾಡುತ್ತೇನೆ ಅಂದನು. ಮತ್ತು ಒಬ್ಬನು ನನಗೆ - ಇದನ್ನು ಬರೆ; ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ ಎಂದು ಹೇಳಿದನು. (ಪ್ರಕಟನೆ 21:3-5)

**<u>ಅನ್ವಯ</u>** : ಪರಲೋಕದ ಬಗ್ಗೆ ಯೋಚಿಸಿರಿ ಮತ್ತು ನಮಗೆಲ್ಲಾ ದಾರಿ ತೋರಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ.

9 ಆದರೆ ಬರೆದಿರುವ ಪ್ರಕಾರ -ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.

10 ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.

11 ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. (1 ಕೊರಿಂಥ 2:9-11)

------------------------------------------------------------

## <u>ದಿನ- 30</u>

### ಮಲಾಕಿಯನ ಗ್ರಂಥ : (ಮಲಾಕಿ 1-2:9)

### ಮುನ್ನುಡಿ

ಮಲಾಕಿ ಎಂಬ ಹೆಸರಿನ ಅರ್ಥ 'ನನ್ನದೂತ,'' ಈ ಗ್ರಂಥ ಬರೆದ ಐತಿಹಾಸಿಕ ಸಮಯವೂ ನಹಮೀಯ ಗ್ರಂಥ ಬರೆದ ಸಮಯವೂ ತಾಳೆಯಾಗುತ್ತದೆ. ಆದ್ದರಿಂದ ನಾವು ಈ ಗ್ರಂಥ ಬರೆದ ಸಮಯ ಕ್ರಿ.ಪೂ. 445-432 ಇರಬಹುದು ಎಂದು ಊಹಿಸುತ್ತೇವೆ. ನೆಹೆಮಿಯ, ದೇವಾಲಯ ಪುನಃ ಸ್ಥಾಪಿಸಿ ಹಲವಾರು ವರ್ಷಗಳು ಕಳೆದ ಮೇಲೆ, ಒಂದು ಗುಂಪು ಇಸ್ರಾಯೇಲರನ್ನು ಬಾಬಿಲೋನಿಯದಿಂದ ಕಾನಾನ್ ದೇಶಕ್ಕೆ ಕರೆದುಕೊಂಡು ಹೋದದ್ದು. ಅಲ್ಲಿ ಯೆರುಸಲೇಮಿನ ಗೋಡೆಗಳನ್ನು ಪುನಃಕಟ್ಟಲು ಅವರನ್ನು ಕರೆದುಕೊಂಡು ಹೋದದ್ದು.

ಮಲಾಕಿಯ ಗ್ರಂಥ ತೋರಿಸುವುದು ಏನೆಂದರೆ, ನಮಗೆ ವಾಗ್ದಾನ ಮಾಡಿ “ಸ್ವರ್ಣಯುಗ' ಇನ್ನೂ ಬರದಿದ್ದನ್ನೂ ನೋಡಿ ಜನರು ತುಂಬಾ ಜಿಗುಪ್ಸೆಗೊಂಡಿದ್ದರು. ಆ ಜಿಗುಪ್ಸೆಯ ಕಾರಣ ದೇವರನ್ನು ಕಡೆಗಣಿಸಿದ್ದರು. ಆಗ ಮಲಾಕಿ, ಜನರನ್ನು ತಕ್ಷಣವೇ ದೇವರ ಕಡೆ ತಿರುಗಿಕೊಂಡು ಅವರ ಸರ್ವಸ್ವವನ್ನು ದೇವರಿಗೆ ಅರ್ಪಿಸಬೇಕೆಂದು ಕರೆಯಿತ್ತನು. ಅವನು ಸ್ಪಷ್ಟವಾಗಿ ಹೇಳು ವುದೇನೆಂದರೆ ನಿರಾತಂಕ, ನೆಮ್ಮದಿಯ ಜೀವನ ಬಿಟ್ಟು ದೇವರಿಗಾಗಿ ತೀವ್ರವಾದ ಅರ್ಪಣೆ ಮಾಡಬೇಕೆಂಬುದೇ ಮಲಾಕಿಯ ಬೋಧನೆ ಚರ್ಚೆಯ ಶೈಲಿಯಾಗಿತ್ತು. ಅದೇನೆಂದರೆ, ದೇವರು ಒಂದು ವಿಷಯವಾಗಿ ಪ್ರಶ್ನಿಸುವುದು ಮತ್ತು ಜನರು ಪುನಃ ದೇವರನ್ನು ಪ್ರಶ್ನಿಸಿ, ಉತ್ತರ ಕೇಳುವುದು ಮತ್ತು ಪುನಃ ದೇವರು ಅದಕ್ಕೆಲ್ಲಾ ಉತ್ತರ ಕೊಡುವುದು.

### ಮೊದಲನೆಯ ಚರ್ಚೆ (ಮಲಾಕಿ 1: 2-5)

- ದೇವರು ಹೇಳುವುದು : ನಾನು ನಿಮ್ಮನ್ನು ಪ್ರೀತಿಸಿದ್ದೇನೆ !
- ಜನರು ಕೇಳುವುದು : ನೀವು ಹೇಗೆ ನಮ್ಮನ್ನು ಪ್ರೀತಿಸಿದ್ದೀರಿ ?
- ದೇವರು ಉತ್ತರ : ಹೇಗೆಂದರೆ ಎಸಾವನಿಗಿಂತ ಯಾಕೋಬ (ಇಸ್ರಾಯೇಲ್)ರನ್ನು ಆರಿಸಿಕೊಂಡೆನು.

ದೇವರು ಅವರಿಗೆ ಜ್ಞಾಪಿಸುವುದು ಏನೆಂದರೆ ಅವರು ಯಾಕೋಬನನ್ನು ಪ್ರೀತಿಸಿ ಎಸಾವನನ್ನು ದ್ವೇಷಿಸಿದರು. ಹಾಗೆಂದರೆ ನಿಜವಾಗಿಯೂ ದ್ವೇಷ ಮಾಡಿದರು ಅಂತೇನು ಅಲ್ಲ, ಆದರೆ ಯಾಕೋಬನನ್ನು ಆರಿಸಿಕೊಂಡರು. ಯಾಕೋಬ್ ಮತ್ತು ಎಸಾವ್, ಇಬ್ಬರು ವ್ಯಕ್ತಿಗಳ ವಿಷಯ ಇಲ್ಲಿ ಹೇಳುತ್ತಿಲ್ಲ ಆದರೆ ಎರಡು ಜನಾಂಗಗಳ ಬಗ್ಗೆ , ಇಸ್ರಾಯೇಲ್ ಮತ್ತು ಎದೋಮ್ಯರು, ದೇವರ ಪ್ರೀತಿ, ಆಯ್ಕೆ ಮತ್ತು ಒಡಂಬರಿಕೆಯ ಮೇಲೆ ಆಧಾರಿತವಾಗಿದೆ. ಒಡಂಬಡಿಕೆಯ ಕಾರಣ ದೇವರ ಪ್ರೀತಿ ಅವರ ಮೇಲೆ ಆಗಾಧವಾಗಿತ್ತು.

**ಎರಡನೆಯ ಚರ್ಚೆ (ಮಲಾಕಿ 1:6-2:9)**

- ದೇವರು ಹೇಳುವುದು : ಯಾಜಕರು ಏಕೆ ನನ್ನ ಹೆಸರನ್ನು ಅಸಡ್ಡೆ ಮಾಡುತ್ತಾರೆ?
- ಯಾಜಕರು ಕೇಳುವುದು : ಹೇಗೆ ನಾವು ನಿಮ್ಮ ಹೆಸರನ್ನು ಅಸಡ್ಡೆ ಮಾಡಿದ್ದೇವೆ?
- ದೇವರ ಉತ್ತರ : ಅಪವಿತ್ರವಾದ ಬಲಿಯನ್ನು ಅರ್ಪಿಸುವುದರಿಂದ
- ಯಾಜಕರು ಕೇಳುವುದು ನಾವು ಹೇಗೆ ಅದನ್ನೆಲ್ಲಾ ಮಾಡಿದ್ದೇವೆ?
- ದೇವರ ಉತ್ತರ : ಕುರುಡು, ಕುಂಟು ಮತ್ತು ರೋಗದ ಪ್ರಾಣಿಗಳ ಬಲಿ,

ಅಂಥ ಬಲಿಯನ್ನು ಅವರ ರಾಜ್ಯಪಾಲರಿಗೆ ಅವರು ಅರ್ಪಿಸಲಿಲ್ಲ. ಆದರೆ ದೇವರಿಗೆ ಮಾತ್ರ ಅಳಿದುಳಿದುದನ್ನು ಅರ್ಪಿಸುತ್ತಿದ್ದರು. ದೇವರು ಹೇಳುವುದು ಏನೆಂದರೆ ಅಂಥ ಪಾಪಮಯ ಆರಾಧನೆಗಿಂತ, ತನ್ನನ್ನು ಆರಾಧಿಸದೆ ಇರುವುದೇ ಎಷ್ಟೋ ಮೇಲು. ಈ ದಿನ ದೇವರಿಗೆ ನಾವು ಕೊಡುವ ಬಲಿ ಏನು? ನಮ್ಮ ದೇಹ (ರೋಮಾ 12:1), ನಮ್ಮ ಹಣ (ಫಿಲಿಪ್ಪಿ 4:18), ನಮ್ಮ ಸ್ತೋತ್ರ (ಇಬ್ರಿಯ 13:15), ನಮ್ಮ ಪ್ರಾರ್ಥನೆ (ಪ್ರಕಟಣೆ 5:8), ನಮ್ಮ ಕಾಣಿಕೆ (ರೊಮಾ 15:16). ಕೊಡುವುದರಲ್ಲಿ ಮತ್ತು ತ್ಯಾಗದಲ್ಲಿ ನಮ್ಮ ಅನಿಸಿಕೆಗಳೇನು.

**ಅನ್ವಯ** : ಈ ದಿನ ನೀವು ದೇವರಿಗೆ ಏನೇನನ್ನು ಅರ್ಪಿಸುತ್ತಿದ್ದೀರಿ?

1 ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. (ರೋಮಾ 12:1)

---------------------------------------------------------------

## <u>ದಿನ-31</u>

**ಮಲಾಕಿಯ ಗ್ರಂಥ : (ಮಲಾಕಿ 2:10 -4)**

**ಮೂರನೆಯ ಚರ್ಚೆ : (ಮಲಾಕಿ 2:10-16)**

- ದೇವರು ಹೇಳುವುದು : ಇನ್ನು ಮೇಲೆ ನಿಮ್ಮ ಕಾಣಿಕೆಗಳನ್ನು ಅಂಗೀಕರಿಸುವುದಿಲ್ಲ
- ಜನರು ಕೇಳುವುದು, ಏಕೆ?
- ದೇವರ ಉತ್ತರ : ಏಕೆಂದರೆ ನಿನ್ನ ಯೌವನದ ಹೆಂಡತಿಯೊಡನೆ ಒಡಂಬಡಿಕೆಯನ್ನು ಮುರಿದು ಅವಳಿಗೆ ದ್ರೋಹ ಮಾಡಿದ್ದೀ.

ವಿಶ್ವಾಸದ್ರೋಹ ಯಾವಾಗಲೂ ಬಹಳ ಕೆಟ್ಟದ್ದು, ಆದರೆ ಆ ಇಸ್ರಾಯೇಲ್ಯರು ಮದುವೆಯ ಒಡಂಬಡಿಕೆಯನ್ನು ಬಹಳ ಹೀನವಾಗಿ ಮುರಿದಿದ್ದರು. ಅವರು ವಿಗ್ರಹಾರಾಧನೆ ಮಾಡುವ ಅನ್ಯದೇಶದ ಸ್ತ್ರೀಯರನ್ನು ಮದುವೆಯಾಗಿ ಅವರ ಸ್ವಂತ ಇಬ್ರಿಯ ಹೆಂಡತಿಯರನ್ನು ವಿವಾಹ ವಿಚ್ಛೇದ ಮಾಡಿಕೊಂಡಿದ್ದರು, ಅದಕ್ಕಾಗಿ ದೇವರು ಹೇಳುತ್ತಾರೆ ನಾನು ವಿವಾಹ ವಿಚ್ಛೇದನವನ್ನು ದ್ವೇಷಿಸುತ್ತೇನೆ.

**ನಾಲ್ಕನೆಯ ಚರ್ಚೆ : (ಮಲಾಕಿ 2:17-3:5)**

- ದೇವರು ಹೇಳುವುದು: ನೀವು ನನಗೆ ಬೇಸರ ಉಂಟುಮಾಡಿದ್ದೀರಿ?
- ಜನರು ಕೇಳುವುದು, ಹೇಗೆ?
- ದೇವರ ಉತ್ತರ : ಕೆಟ್ಟದ್ದನ್ನು ಮಾಡುವವರೆಲ್ಲರೂ ಏಳಿಗೆ ಹೊಂದುತ್ತಾರೆ ಎಂಬ ಯೋಚನೆ ನೀವು ಮಾಡುವುದರಿಂದ ದೇವರು ಅವರ ಆಗಮನದ ದಿನದ ಬಗ್ಗೆ ಅವರನ್ನು ಜ್ಞಾಪಿಸುತ್ತಾರೆ. ಆ ದಿನ ದೇವರು ಬರುವುದು ಎಲ್ಲವನ್ನೂ ಪರಿಶೋಧಿಸಿ ಶುದ್ದಿಮಾಡಲು, ಅನ್ಯಾಯ ಮಾಡುವವರನ್ನು ಶಿಕ್ಷಿಸುವುದಕ್ಕೂ, ನೀತಿವಂತರಿಗೆ ನ್ಯಾಯ ತೀರಿಸಲು ಬರುವನು, ಒಳ್ಳೆಯವರ ಮತ್ತು ಕೆಟ್ಟವರ ಮಧ್ಯ, ಅಂತರ ಇಡುವನು. ಯೂರು ಸೇವೆ ಮಾಡುತ್ತಾರೋ, ಯಾರು ಸೇವೆ ಮಾಡುವುದಿಲ್ಲವೋ ಅವರನ್ನು ಗುರುತಿಸುವನು.

**ಐದನೆಯ ಚರ್ಚೆ (ಮಲಾಕಿ 3:6-12).**

- ದೇವರು ಹೇಳುವುದು : ನನ್ನ ಬಳಿಗೆ ತಿರುಗಿಕೊಳ್ಳಿರಿ !
- ಜನರು ಕೇಳುವುದು : ಹೇಗೆ ?
- ದೇವರು ಹೇಳುವುದು : ನೀವು ನನ್ನಿಂದ ಕದಿಯುತ್ತೀರಿ !
- ಜನರು ಕೇಳುವುದು: ಹೇಗೆ?
- ದೇವರ ಉತ್ತರ : ಧಶಮ ಭಾಗ ಮತ್ತು ಅರ್ಪಣೆಗಳನ್ನು ಸಲ್ಲಿಸದೆ ದೇವರಿಗೆ ಅವರ ಅರ್ಪಣೆಗಳಿಗಿಂತ ಅವರ ಮನೋಭಾವನೆ ಮುಖ್ಯವಾಗಿತ್ತು .

ಅವರ ಧರ್ಮ ದೇವರಲ್ಲಿ ಆನಂದಿಸುವುದನ್ನು ಬಿಟ್ಟು ಬರೀ ಕಾಟಾಚಾರದ ಆರಾಧನೆಯಾಗಿತ್ತು. ದೇವರ ಆರಾಧನೆ ಒಂದು ಆಶೀರ್ವಾದವಾಗಿರದೆ ಅವರಿಗೆ ಅದೊಂದು ಹೊರೆಯಾಗಿತ್ತು. ರಕ್ಷಣೆಯಿಲ್ಲದ ಒಂದು ಬಲಿಯಾಗಿತ್ತು , ಜ್ಞಾನದಿಂದ ಕೂಡಿರದೆ ಮೂಢನಂಬಿಕೆಯಾಗಿತ್ತು .

**ಆರನೇ ಚರ್ಚೆ (ಮಲಾಕಿ 3:13-4:6)**

- ದೇವರು ಹೇಳುವುದು: ನೀವು ನನಗೆ ವಿರೋಧವಾಗಿ ಕಠಿಣ ಮಾತುಗಳನ್ನಾಡಿದಿರಿ.
- ಜನರು ಕೇಳುವುದು : ಹೇಗೆ?
- ದೇವರ ಉತ್ತರ : ನಾವು ದೇರವನ್ನು ಸೇವಿಸುವುದು ವ್ಯರ್ಥ ಎಂದು ಹೇಳುತ್ತೀರಿ.

ದೇವರು ನಿಶ್ಚಯವಾಗಿಯೂ ಕೆಟ್ಟದನ್ನು ಮಾಡುವವರನ್ನು ಶಿಕ್ಷಿಸಿ, ದೇವರಿಗೆ ವಿಶ್ವಾಸವುಳ್ಳವರನ್ನು ಘನಪಡಿಸುವನು. ದೇವರು ಅವರಿಗೆ ಮೊಶೆಯ ಧರ್ಮಶಾಸ್ತ್ರವನ್ನು ಪಾಲಿಸುವಂತೆ ಕರೆಯಿತ್ತಿದ್ದಾರೆ. (ಮಲಾಕಿ 4:4) ಮತ್ತು ಎಲೀಯ ದೇವರ ಭಯಂಕರ ದಿವಸ ಬರುವುದಕ್ಕೆ ಮುಂಚೆ ಕಳುಹಿಸಲ್ಪಡುವನು (4:5-6)

**<u>ಅನ್ವಯ</u>** : ನಿಮಗೆ ಕ್ರೈಸ್ತ ಜೀವನ ಒಂದು ಹೊರೆಯಾಗಿರುವುದೇ? ಹೌದೆಂದರೆ ಹೇಗೆ? ಏಕೆ?

3 ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ.

4 ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ. (1 ಯೋಹಾನ 5:3-4)

--------------------------------------------------------------